ಸಂಪುಟ: 05 ಸಂಚಿಕೆ: 78 ಪುಟಗಳು: 08 ಭಾನುವಾರ 01 ಜೂನ್ 2025
www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com
ಸಂಪಾದಕರು: ಟಿ. ಹೊಂಬೇಗೌಡ
RNI No. KARKAN/2021/80833
9448225696 +91 8035841833 ₹5

**ಮುಂಜಾನೆ ಮಾತು**

ಹುಟ್ಟಿದ್ದಕ್ಕೆ ಸಾವು ಖಚಿತ, ಸತ್ತದ್ದಕ್ಕೆ ಹುಟ್ಟು ಖಚಿತ. ಆದುದರಿಂದ ಅನಿವಾರ್ಯವಾದದ್ದಕ್ಕಾಗಿ ದುಃಖಿಸಬೇಡ.

# ಉದಯ ವಾಹಿನಿ

ಸರ್ವ ಸಮಾನತೆಯ
ಕನ್ನಡ ದಿನಪತ್ರಿಕೆ

## ಕಡಿಮೆ ಫಲಿತಾಂಶ ಬಂದಿರೋ ಜಿಲ್ಲೆಗಳ ಡಿಡಿಪಿಐಗಳಿಗೆ ನೋಟಿಸ್!

• **ಉದಯವಾಹಿನಿ, ಬೆಂಗಳೂರು**

ಎಸ್‌ಎಸ್‌ಎಲ್‌ಸಿಯಲ್ಲಿ ಶೇ.60 ಕ್ಕಿಂತ ಕಡಿಮೆ ಫಲಿತಾಂಶ ಪಡೆದಿರುವ ಜಿಲ್ಲೆಗಳ ಡಿಡಿಪಿಐಗಳಿಗೆ ನೋಟಿಸ್ ನೀಡಬೇಕು, ನೋಟಿಸ್‌ಗೆ ಕೊಟ್ಟ ಉತ್ತರ ಸಮರ್ಪಕ ಅನ್ನಿಸದಿದ್ದರೆ ಅವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಮುಖ್ಯಮಂತ್ರಿಗಳು, ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರಿಗೆ ಸೂಚನೆ ನೀಡಿದರು. ಎಸ್‌ಎಸ್‌ಎಲ್‌ಸಿಯಲ್ಲಿ ಫಲಿತಾಂಶ ಕಡಿಮೆ ಬರುವುದಕ್ಕೆ ಶಿಕ್ಷಕರ ಕೊರತೆ, ಸಿಬ್ಬಂದಿ ಕೊರತೆ ಎನ್ನುವ ನೆಪ ಹೇಳಬೇಡಿ. ದಕ್ಷಿಣ ಕನ್ನಡ ಮತ್ತು ಇತರೆ ಜಿಲ್ಲೆಗಳಲ್ಲಿ ಮಾತ್ರ ಉತ್ತಮ ಫಲಿತಾಂಶ ಬರುತ್ತಿದೆ. ಡಿಡಿಪಿಐಗಳು ಜವಾಬ್ದಾರಿ ತೆಗೆದುಕೊಳ್ಳಬೇಕು. ಡಿಸಿಪಿಐಗಳು ಮತ್ತು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಶಾಲೆಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಬೇಕು ಎಂದರು. ಶಿಕ್ಷಕರು ಆಸಕ್ತಿಯಿಂದ ಕೆಲಸ ಮಾಡುತ್ತಿದ್ದಾರೋ ಇಲ್ಲವೋ ಎನ್ನುವುದನ್ನು ಪರಿಶೀಲನೆ ನಡೆಸಬೇಕು. ಇಲ್ಲಸಲ್ಲಸ ನೆಪ ಹೇಳಬೇಡಿ. ಶಿಕ್ಷಕರು ಮತ್ತು ಡಿಡಿಪಿಐಗಳು ಆಸಕ್ತಿಯಿಂದ ಕೆಲಸ ಮಾಡಿದರೆ ಉತ್ತಮ ಫಲಿತಾಂಶ ಎಲ್ಲಾ ಕಡೆ ಬರುತ್ತದೆ ಎಂದು ಮುಖ್ಯಮಂತ್ರಿಗಳು ಸೂಚಿಸಿದರು. ವಿವೇಕ ಯೋಜನೆಯಡಿಯಲ್ಲಿ ಶಾಲಾ ಕೊಠಡಿಗಳ ನಿರ್ಮಾಣಕ್ಕೆ ಹಣ ಮಂಜೂರು ಮಾಡುವುದರಲ್ಲಿ ವಿಳಂಬ ಆಗಬಾರದು. ಕ್ರಿಯಾ ಯೋಜನೆ ತಕ್ಷಣ ತಕ್ಷಣ ಸಿದ್ದಪಡಿಸಬೇಕು. ಹಣ ಬಿಡುಗಡೆ ಆಗಿದ್ದರೂ ಇನ್ನೂ ಶಾಲಾ ಕೊಠಡಿಗಳ ನಿರ್ಮಾಣ ಆಗದಿರುವ ಬಗ್ಗೆ ಜಿಲ್ಲಾಧಿಕಾರಿಗಳನ್ನು ಸಿಎಂ ಪ್ರಶ್ನಿಸಿದರು.

## ಹಿಂದೂ ಕಾರ್ಯಕರ್ತರ ಟಾರ್ಗೆಟ್ ಕೋಮು ನಿಗ್ರಹದಳ ಸ್ಥಾಪನೆ

• **ಉದಯವಾಹಿನಿ, ಮಂಡ್ಯ**

ಕರಾವಳಿ ಭಾಗದಲ್ಲಿ ಸರಣಿ ಕೊಲೆಗಳ ಹಿನ್ನಲೆಯಲ್ಲಿ ಮುಸ್ಲಿಂ ವ್ಯಕ್ತಿಯ ಹತ್ಯೆ ಮುಂದಿಟ್ಟುಕೊಂಡು ಹಿಂದು ಕಾರ್ಯಕರ್ತರನ್ನು ಬಂಧಿಸಲಾಗುತ್ತಿದೆ. ಆ ಮೂಲಕ ಕಾರ್ಯಕರ್ತರನ್ನು ಟಾರ್ಗೆಟ್ ಮಾಡಲಾಗುತ್ತಿದೆ. ಇದಕ್ಕಾಗಿ ಕೋಮು ನಿಗ್ರಹದಳವನ್ನು ರಾಜ್ಯ ಸರಕಾರ ಸ್ಥಾಪನೆ ಮಾಡಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ವಾಗ್ದಾಳಿ ನಡೆಸಿದರು. ರಾಜ್ಯ ಸರಕಾರದ ಕುಮ್ಮಕ್ಕಿನಿಂದ ಪೊಲೀಸರು ಅತಿರೇಕದ ವರ್ತನೆ ತೋರುತ್ತಿದ್ದಾರೆ. ಹಿಂದು ಕಾರ್ಯಕರ್ತರನ್ನು ಬಂಧಿಸಿದರೆ ಪರಿಸ್ಥಿತಿ ಮಿತಿ ಮೀರಲಿದೆ. ಅದಕ್ಕೆ ಕಾಂಗ್ರೆಸ್ ಸರಕಾರ, ಸಿಎಂ, ಗೃಹ ಸಚಿವರು ಹೊಣೆಯಾಗುತ್ತಾರೆ. ಇದು ಕಾಂಗ್ರೆಸ್ ಸರಕಾರಕ್ಕೆ ಶೋಭೆ ತರಲ್ಲ ಎಂದು ಆಕ್ಷೇಪಿಸಿದರು. ಆಪರೇಷನ್ ಸಿಂಧೂರ್ ಕಾರ್ಯಾಚರಣೆ ನಡೆದಾಗ ಇಂಟಲಿಜೆನ್ಸ್ ಬಗ್ಗೆ ಕಾಂಗ್ರೆಸ್‌ನವರು ಮಾತನಾಡಿದ್ದರು. ಆದರೀಗ ಮಂಗಳೂರಿನಲ್ಲಿ ಕೊಲೆಯಾಗುತ್ತಿದೆ. ಈಗ ರಾಜ್ಯ ಸರಕಾರ ಏನು ಮಾಡುತ್ತಿದೆ? ಇವರ ಬಳಿ ಇಂಟಲಿಜೆನ್ಸ್ ಇಲ್ಲವೇ? ಎಂದು ಪ್ರಶ್ನಿಸಿದರು.

## ಉಪನಗರ ರೈಲು ಯೋಜನೆಗೆ ಗ್ರಹಣ ಪೂರ್ಣಗೊಳ್ಳದ ಕಾಮಗಾರಿ!

• **ಉದಯವಾಹಿನಿ, ಬೆಂಗಳೂರು**

ಬೆಂಗಳೂರು ಉಪನಗರ ರೈಲು ಯೋಜನೆಗೆ ಗ್ರಹಣ ಹಿಡಿದಿದ್ದು, ನಾಲ್ಕು ದಶಕಗಳ ಹಿಂದೆ ಆರಂಭವಾದ ಕಾಮಗಾರಿಯು ಆಮೆಗತಿಯಲ್ಲಿ ಸಾಗಿದೆ. 1980ರಲ್ಲಿ ರೂಪುಗೊಂಡ ಈ ಯೋಜನೆಗೆ 2022ರಲ್ಲಿ ರೆಕ್ಕೆಪುಕ್ಕ ಬಂತಾದರೂ ಈವರೆಗೆ ಸಾರ್ವಜನಿಕ ಸೇವೆಗೆ ಮುಕ್ತವಾಗಿಲ್ಲ. 148.17 ಕಿ.ಮೀ ಉದ್ದದ ಒಟ್ಟು ನಾಲ್ಕು ಕಾರಿಡಾರ್‌ಗಳ ಪೈಕಿ 2 ಕಾರಿಡಾರ್‌ಗಳಿಗೆ ಇನ್ನೂ ಟೆಂಡರ್ ಕರೆದಿಲ್ಲ. ಉಳಿದ ಎರಡು ಕಾರಿಡಾರ್‌ಗಳ ಕಾಮಗಾರಿ ಆರಂಭವಾಗಿ ವರ್ಷಗಳೇ ಉರುಳಿದರೂ ಕನಿಷ್ಠ ಅರ್ಧದಷ್ಟು ಕೆಲಸ ನಡೆದಿಲ್ಲ.

ಭೂ ಸ್ವಾಧೀನ, ಹಣಕಾಸು ಸಮಸ್ಯೆ, ರೈಲ್ವೆ ಸಚಿವಾಲಯದ ಜತೆಗಿನ ಸಮನ್ವಯದ ಕೊರತೆ, ಯೋಜನೆ ಅನುಷ್ಠಾನಕ್ಕೆ ಪರಿಣತ ತಂಡದ ಸಮಸ್ಯೆ ಹೀಗೆ ನಾನಾ ಕಾರಣಗಳಿಂದ ಯೋಜನೆ ನಿಂತಲ್ಲೇ ನಿಂತಿದೆ. '40 ವರ್ಷದಿಂದ ನನೆಗುದಿಗೆ ಬಿದ್ದಿರುವ ಬಿಎಸ್‌ಆರ್‌ಪಿ ಯೋಜನೆಯನ್ನು 40 ತಿಂಗಳಲ್ಲಿ ಪೂರ್ಣಗೊಳಿಸುತ್ತೇವೆ,' ಎಂದು ಪ್ರಧಾನಿ ನರೇಂದ್ರ ಮೋದಿ ಘೋಷಿಸಿದ್ದರು. ಅವರು 2022ರ ಜೂನ್ 20ರಂದು ಬಿಎಸ್‌ಆರ್‌ಪಿ ಯೋಜನೆಯ ಶಂಕುಸ್ಥಾಪನೆ ವೇಳೆ ರಾಜಧಾನಿಯ ಜನರಿಗೆ ಈ ಭರವಸೆ ನೀಡಿದ್ದರು. ಆದರೆ, 35 ತಿಂಗಳು ಕಳೆದರೂ ಶೇ.25ರಷ್ಟು ಕಾಮಗಾರಿ ನಡೆದಿಲ್ಲ.

## ಕಾರ್ಪೊರೇಟ್ ಕಂಪನಿಗಳ ಕಳ್ಳಾಟ – ಡಿಕೆಶಿ ವಾರ್ನಿಂಗ್

• **ಉದಯವಾಹಿನಿ, ಬೆಂಗಳೂರು**

ಕರ್ನಾಟಕದ ಕಾರ್ಪೊರೇಟ್ ಕಂಪನಿಗಳು ಸಾಮಾಜಿಕ ಜವಾಬ್ದಾರಿ ನಿಧಿಯ ವಿಚಾರದಲ್ಲಿ ಕಳ್ಳಾಟವಾಡುತ್ತಿವೆ ಎಂದು ಕರ್ನಾಟಕದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಆರೋಪಿಸಿದ್ದಾರೆ. ಕರ್ನಾಟಕದಲ್ಲಿರುವ ಕಾರ್ಪೊರೇಟ್ ಸಂಸ್ಥೆಗಳು ತಮ್ಮ ಆದಾಯದಲ್ಲಿ ಇಂತಿಷ್ಟು ಹಣವನ್ನು ದೇಶದ ಅಭಿವೃದ್ಧಿಗಾಗಿ ದೇಣಿಗೆ ನೀಡಬೇಕಿರುತ್ತದೆ. ಅದನ್ನು ಸಿಎಸ್‌ಆರ್ ಫಂಡ್ ಎಂದು ಕರೆಯಲಾಗುತ್ತದೆ. ಈ ಕಂಪನಿಗಳು, ನೆರೆ ರಾಜ್ಯಗಳ ಸರ್ಕಾರೇತರ ಸಂಸ್ಥೆಗಳಿಗೆ (ಎನ್ ಜಿಒ) ನಿಧಿಯನ್ನು ದಾನ ಮಾಡುತ್ತವೆ. ಆನಂತರ ದಾನದ ಅರ್ಧದಷ್ಟನ್ನು ಹಿಂದಕ್ಕೆ ಪಡೆಯುತ್ತಿವೆ ಎಂದು ಆರೋಪಿಸಿದ್ದಾರೆ.


## ಉಗಿದ್ರು ಬುದ್ಧಿ ಕಲಿಯದ ಕಮಲ್ ಹಾಸನ್

• **ಉದಯವಾಹಿನಿ, ಬೆಂಗಳೂರು**

ಕನ್ನಡಿಗರ ಸ್ವಾಭಿಮಾನಕ್ಕೆ ಕೈ ಹಾಕಿದ ನಟ ಕಮಲ್ ಹಾಸನ್‌ಗೆ ಎಷ್ಟೇ ಉಗಿದ್ರು.. ಛೀಮಾರಿ ಹಾಕಿದ್ರು ಬುದ್ಧಿ ಕಲಿಯುತ್ತಿಲ್ಲ, ಕನ್ನಡಿಗರ ಆಕ್ರೋಶಕ್ಕೆ ಕ್ಯಾರೆ ಅಂತಿಲ್ಲ, ಅಸಂಬದ್ಧ ಹೇಳಿಕೆ ನೀಡಿ, ಕನ್ನಡಿಗರಿಂದ ಛೀಮಾರಿಗೆ ಒಳಗಾಗಿರುವ ಕಮಲ್ ಹಾಸನ್ ರಾಜ್ಯದ ಜನತೆಯ ಕ್ಷಮೆ ಕೇಳದೆ, ತಾವು ನೀಡಿದ ಹೇಳಿಕೆಯ ಸಮರ್ಥನೆಗಿಳಿದಿದ್ದಾರೆ, ಈ ಮೂಲಕ ಮೊಂಡುತನ ಪ್ರದರ್ಶಿಸಿದ್ದಾರೆ. ನಾನ್ಯಾಕೆ ಕ್ಷಮೆ ಕೇಳಬೇಕು, ತಪ್ಪು ಮಾಡಿದ್ರೆ ಕ್ಷಮೆ ಕೇಳಬಹುದು, ನಾನು ಕೇಳಲ್ಲ, ಇದು ನನ್ನ ಸ್ಟೈಲ್ ಅನ್ನೋ ಮೂಲಕ ಕನ್ನಡಿಗರನ್ನು ಮತ್ತಷ್ಟು ಕೆರಳಿಸಿದ್ದಾರೆ, ನನ್ನ ಸಿನಿಮಾ ಬ್ಯಾನ್ ಮಾಡ್ತೀರಾ ಡೋಂಟ್ ಕೇರ್ ಅಂದಿದ್ದಾರೆ.. ಎಷ್ಟೇ ಆದ್ರೂ ಬೆಳೆದಿರೋ ನಟ ಅಲ್ವಾ?, ಹೊಟ್ಟೆ ತುಂಬಿದವರು, ಹಸಿವು ಇಲ್ಲದವರು.

ಇಂಥವರಿಗೆ ಸರಿಯಾದ ಪಾಠ ಕಲಿಸುವ ಅಗತ್ಯ ಇದೆ. ಮತ್ತೆಂದು ಕನ್ನಡಿಗರ ಸುದ್ದಿಗೆ ಬರದೇ ರೀತಿ ಮುಟ್ಟಿನೋಡಿ ಕೊಳ್ಳುವಂತೆ ತಿರುಗೇಟು ನೀಡುವ ಅಗತ್ಯ ಇದೆ. ಸದ್ಯ ಕಮಲ್ ಹಾಸನ್ ಹೇಳಿಕೆಗೆ ಇಡೀ ರಾಜ್ಯಾದ್ಯಂತ ಆಕ್ರೋಶ ನುಡಿಗಳು ಕೇಳಿ ಬರ್ತಿದೆ.. ಕನ್ನಡದ ನಟ ನಟಿಯರು ಉಗಿದು ಉಪ್ಪಿನಕಾಯಿ ಹಾಕಿದ್ದಾರೆ. ಆದ್ರೆ ಶಿವಣ್ಣ ಹಾಗೂ ರಮ್ಯಾ ಮಾತ್ರ ಅವರನು ಸಮರ್ಥಿಸಿಕೊಂಡಿದ್ದು ಮಾತ್ರ ಕನ್ನಡಿಗರಿಗೆ ನೋವು ತಂದಿದೆ.. ಶಿವಣ್ಣ ವಿರುದ್ಧವೂ ಕೆಲವರು ಅಸಮಾಧಾನ ಹೊರಹಾಕಿದ್ದಾರೆ. ಹೌದು ನನ್ನದು ತಪ್ಪಾಗಿದೆ ಎಂದು ಕ್ಷಮೆ ಕೇಳಿದಿದ್ದರೆ ಇಷ್ಟೊಂದು ರಾಮಾಯಣ ಆಗ್ತಾ ಇರಲಿಲ್ಲ, ಇಷ್ಟೆಲ್ಲ ಆಕ್ರೋಶ ಎದ್ದಿದ್ದು ಕೂಡ ಕ್ಷಮೆ ಮೊಂಡುತನ ಪ್ರದರ್ಶನ ಮಾಡಿದ್ದು, ಕನ್ನಡಿಗರಿಗೆ ಮತ್ತಷ್ಟು ಸಿಟ್ಟು ತರಿಸಿದೆ. ರಾಜ್ಯಾದ್ಯಂತ ಪ್ರತಿಭಟನೆ ಶುರುವಾಗಿದೆ, ಸಿನಿಮಾ ಬ್ಯಾನ್‌ಗೆ ಮುಂದಾಗಿದ್ದಾರೆ. ಈ ಮಧ್ಯೆ ಕೆಲವು ನಟ ನಟಿಯರು ಕಮಲ್ ಹಾಸನ್‌ಗೆ ತರಾಟೆಗೆ ತೆಗೆದುಕೊಂಡಿದ್ದಾರೆ.. ರಚಿತ್ ರಾಮ್, ನಟ ಜಗ್ಗೇಶ್, ವಸಿಷ್ಠ ಸಿಂಹ, ಶಾಸಕ ರವಿಗಣಿಗ, ಹಿರಿಯ ನಟರು ಬೈದಿದ್ದಾರೆ. ಕನ್ನಡ, ಕರ್ನಾಟಕ ಅಂತ ಬಂದರೆ ಪ್ರತಿಯೊಬ್ಬ ಕನ್ನಡಿಗನಿಗೂ ಅದೊಂದು ಭಾವನೆ. ನಮ್ಮ ಕನ್ನಡದ ಬಗ್ಗೆ ಯಾರಾದರೂ ಟೀಕೆ ಮಾಡಿದರೆ ಸುಮ್ಮನೆ ಕೂರಲು ಆಗಲ್ಲ ಎಂದು ರಚಿತ ರಾಮ್ ಕುಟುಕಿದ್ದಾರೆ. ಭಾಷೆ ಎಂಬುದು ತಾಯಿ ಸಮಾನ. ನನ್ನ ತಾಯಿ ದೊಡ್ಡವರು, ನಿಮ್ಮ ತಾಯಿ ಚಿಕ್ಕವರು ಎನ್ನುವುದು ತಪ್ಪು. ಅವರವರಿಗೆ ಅವರವರ ತಾಯಿ ದೊಡ್ಡವರು.

**ದುರಹಂಕಾರ ಪ್ರದರ್ಶಿಸಿದ ತಮಿಳು ನಟನಿಗೆ ಪಾಠ**



ಕ್ಷಮೆ ಕೇಳುವುದಿಲ್ಲ ಎನ್ನುವುದಕ್ಕೆ ಕನ್ನಡಿಗರಾದ ನಾವು ಅವರಿಗೆ ಸರಿಯಾಗಿ ಅರ್ಥ ಮಾಡಿಸಬೇಕು ಎಂದು ವಸಿಷ್ಠ ಸಿಂಹ ಕಿಡಿಕಾರಿದ್ದಾರೆ. ಕನ್ನಡ ಭಾಷೆ ಕುರಿತು ಕಮಲ್ ಹಾಸನ್ ಹೇಳಿಕೆ ನೀಡುವಾಗ ಅಲ್ಲೇ ಇದ್ದ ಹಿರಿಯ ನಟ ಶಿವರಾಜ್ ಕುಮಾರ್ ಖಂಡಿಸಬೇಕಿತ್ತು. ಈಗ ರಕ್ಷಣೆ ಮಾಡುತ್ತಿರುವುದು ಸರಿಯಲ್ಲ, ಸ್ನೇಹ ಇದ್ದರೆ ಮನೆಗೆ ಕರೆದು ಊಟ ಹಾಕಿಸಿ. ಆದರೆ, ಕನ್ನಡದ ಅನ್ನ ತಿನ್ನೋ ನಟ ನೀವು. ಕನ್ನಡದ ಬಗ್ಗೆ ದುರಹಂಕಾರದಿಂದ ಮಾತನಾಡುತ್ತಿರುವಾಗ ಒಪ್ಪಿಕೊಳ್ಳುತ್ತಿರುವುದು ಕನ್ನಡಿಗರಿಗೆ ಮಾಡುತ್ತಿರುವ ಅವಮಾನ. ಶಿವರಾಜ್ ಕುಮಾರ್, ರಮ್ಯಾಗೆ ಏನಾಗಿದೆ ಎಂಬುದು ಗೊತ್ತಿಲ್ಲ ಎಂದು ಶಾಸಕ ರವಿ ಗಣಿಗ ತೀಕ್ಷ್ಣವಾಗಿ ಉಗಿದಿದ್ದಾರೆ.

# ಸಿಎಂ ಕುರ್ಚಿ ಕಿತ್ತಾಟ ನೀ ಕೊಡೆ ನಾ ಬಿಡೆ

**ಟೈಮ್ ಬಂದೇ ಬಿಡ್ತು**

**ಸಿದ್ದರಾಮಯ್ಯ ಕೊಡಲ್ಲ ಡಿಕೆ ಶಿವಕುಮಾರ್ ಬಿಡಲ್ಲ**

**ಕುರ್ಚಿ ಕಿತ್ತಾಟ ಪಕ್ಷಕ್ಕೆ ಹೊಡೆತ!**

**ಡಿಕೆಶಿ ಪವರ್ ಗೇಮ್ ಶುರು**



**ಸರ್ಕಾರದ ಮುಂದಿನ ಪರಿಸ್ಥಿತಿ ಏನು?**

• **ಉದಯವಾಹಿನಿ, ಬೆಂಗಳೂರು**

ಕರ್ನಾಟಕದಲ್ಲಿ ಕಾಂಗ್ರೆಸ್ ಅಧಿಕಾರದ ಗದ್ದುಗೆ ಹಿಡಿದು ಭರ್ತಿ ಎರಡು ವರ್ಷ ತುಂಬಿದ ಬೆನ್ನಲ್ಲೇ ಪಕ್ಷದೊಳಗೆ ಮಹತ್ತರ ಬೆಳವಣಿಗೆಗಳು ನಡೆಯುತ್ತಿದೆ. ಈಗ ಕಾಂಗ್ರೆಸ್ ಪಾರ್ಟಿ ನಿರ್ಣಾಯಕ ಹಂತಕ್ಕೆ ಬಂದು ತಲುಪಿದೆ. ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿಕೆ ಶಿವಕುಮಾರ್ ಮಧ್ಯೆ ಆಂತರಿಕ ಬಿಕ್ಕಟ್ಟು ಹೆಚ್ಚುತ್ತಿದ್ದು. ಇದು ಸರ್ಕಾರದ ಸ್ಥಿರತೆ ಮತ್ತು ಕಾಂಗ್ರೆಸ್ ಪಕ್ಷದ ಭವಿಷ್ಯದ ಬಗ್ಗೆ ಕಳವಳ ಮೂಡಿಸಿದೆ. ಈ ಸಂಘರ್ಷಕ್ಕೆ ಮೂಲ ಕಾರಣವೇ ಸಿಎಂ ಬದಲಾವಣೆ.. ಹೌದು.. 2023ರ ಮೇ ತಿಂಗಳಲ್ಲಿ ಕಾಂಗ್ರೆಸ್ ಸರ್ಕಾರ ರಚನೆಯಾದಾಗ, ಸಿದ್ದರಾಮಯ್ಯ ಅವರು ಎರಡೂವರೆ ವರ್ಷಗಳ ಕಾಲ ಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸಿದ ನಂತರ ಡಿಕೆ ಶಿವಕುಮಾರ್ ಅಧಿಕಾರ ವಹಿಸಿಕೊಳ್ಳುತ್ತಾರೆ ಎಂಬ ಅಲಿಖಿತ ಒಪ್ಪಂದ ಆಗಿದೆ ಎಂದು ಹೇಳಲಾಗುತ್ತಿದೆ. ಈ ಒಪ್ಪಂದ ನಿಜ ಆಗಿದ್ದಲ್ಲಿ ಮುಂಬರುವ ನವೆಂಬರ್‌ನಲ್ಲಿ ಅಧಿಕಾರ ಹಸ್ತಾಂತರ ನಡೆಯಬೇಕಿದೆ. ಆದರೆ, ಪಕ್ಷದ ಹೈಕಮಾಂಡ್‌ನಿಂದ ಯಾವುದೇ ಅಧಿಕೃತ ಮಾಹಿತಿ ಇಲ್ಲದಿರುವುದು ಮತ್ತು ಅಧಿಕಾರ ಹಸ್ತಾಂತರಕ್ಕೆ ಯಾವುದೇ ಸಿದ್ಧತೆಗಳಿಲ್ಲದಿರುವುದು ಡಿಕೆ ಶಿವಕುಮಾರ್ ಅವರನ್ನು ಕೆರಳಿಸಿದೆ.

ಹೀಗಾಗಿ ಸಮಯ ಹತ್ತಿರವಾಗುತ್ತಿದ್ದಂತೆ ಡಿಕೆಶಿ ಪವರ್ ಗೇಮ್ ಶುರುವಿಟ್ಟುಕೊಂಡಿದ್ದಾರೆ. ಹೈಕಮಾಂಡ್‌ಗೆ ಟೈಮ್ ಬಂತು ಅನ್ನೋದನ್ನು ನೆನಪಿಸುತ್ತಿದ್ದಾರೆ.. ಈಗ ಸಿದ್ದರಾಮಯ್ಯ ಹಾಗೂ ಡಿಕೆಶಿ ಮಧ್ಯೆ ಮುಸುಕಿನ ಗುದ್ದಾಟ ನಡೆಯುತ್ತಿದ್ದು ಕಾಂಗ್ರೆಸ್ ಪಕ್ಷ ಹಾಗೂ ಸರ್ಕಾರದ ಮುಂದಿನ ಪರಿಸ್ಥಿತಿ ಏನು ಎಂಬ ಕಳವಳ ಶುರುವಾಗಿದೆ..

ಹೌದು.. ಮುಂದಿನ ನವೆಂಬರ್‌ಗೆ ಸರ್ಕಾರ ರಚನೆಯಾಗಿ ಎರಡೂವರೆ ವರ್ಷ ತುಂಬಲಿದೆ. ಅಧಿಕಾರ ಹಸ್ತಾಂತರ ನಡೆಯುತ್ತೆ ಅಂತ ಡಿಕೆ ಶಿವಕುಮಾರ್ ಆಸೆಗಣ್ಣಿನಿಂದ ನೋಡುತ್ತಿದ್ದಾರೆ. ಆದ್ರೆ, ಹೈಕಮಾಂಡ್ ಮಾತ್ರ ಈ ಬಗ್ಗೆ ಯಾವುದೇ ಸೊಲ್ಲು ಎತ್ತಿಲ್ಲ, ಹೀಗಾಗಿ ಪಕ್ಷದಲ್ಲಿ ಏನು ಆಗುತ್ತೆ ಅನ್ನೋ ಆತಂಕ ಎಲ್ಲಾರನ್ನು ಕಾಡುತ್ತಿದೆ. ಒಂದು ವೇಳೆ ಸಿದ್ದರಾಮಯ್ಯರನ್ನು ಬದಲಾವಣೆ ಮಾಡಿ ಡಿಕೆಶಿ ಸಿಎಂ ಪಟ್ಟ ಕಟ್ಟಿದ್ರೆ. ಸಿದ್ದು ಬಣ ಬಂಡಾಯ ಏಳುತ್ತೆ, ಡಿಕೆಶಿಯನ್ನು ಸಿಎಂ ಮಾಡದೇ ಇದ್ರೆ, ಇವರ ಬೆಂಬಲಿಗರು ಸುಮ್ಮನಿರಲ್ಲ. ಹೈಕಮಾಂಡ್ ಮುಂದೇನು ಮಾಡಬೇಕು ಅನ್ನೋ ಟೆನ್ಷನ್‌ನಲ್ಲಿದೆ.. ಪಕ್ಷಕ್ಕೆ ಸಿದ್ದರಾಮಯ್ಯ ಹಾಗೂ ಡಿಕೆ ಶಿವಕುಮಾರ್ ಇಬ್ಬರು ಅನಿವಾರ್ಯ, ಯಾರನ್ನು ಕಡೆಗಣಿಸಂಗಿಲ್ಲ, ಸಿದ್ದರಾಮಯ್ಯ ಹಿಂದುಳಿದ ವರ್ಗಗಳು, ಅಲ್ಪಸಂಖ್ಯಾತರು ಮತ್ತು ದಲಿತ ಸಮುದಾಯದ ಹಿಡಿತ ಮತ್ತು ಆಡಳಿತಾತ್ಮಕ ಅನುಭವವನ್ನು ಹೊಂದಿದ್ದರೆ, ಡಿಕೆ ಶಿವಕುಮಾರ್ ನಿಧಿ ಸಂಗ್ರಹಣೆ ಸಾಮರ್ಥ್ಯ ಮತ್ತು ಪಕ್ಷ ಸಂಘಟನೆಯಲ್ಲಿ ಚತುರರಾಗಿದ್ದಾರೆ. ಹೀಗಾಗಿ ಇವರಿಬ್ಬರು ಪಕ್ಷಕ್ಕೆ ಎರಡು ಕಣ್ಣು ಇದ್ದಂತೆ. ಒಂದು ಕಡೆ ಸಿದ್ದರಾಮಯ್ಯರನ್ನು ಕೆಳಗಿಳಿಸಿ ನಾನು ಸಿಎಂ ಆಗಬೇಕು ಎಂದು ಡಿಕೆ ಶಿವಕುಮಾರ್ ಪ್ರಯತ್ನಿಸುತ್ತಿದ್ದಾರೆ. ಇತ್ತ ಸಿಎಂ ಸಿದ್ದರಾಮಯ್ಯ ಮಾತ್ರ ಕುರ್ಚಿಗೆ ಗಟ್ಟಿಯಾಗಿ ಅಂಟಿಕುಳಿತಿದ್ದಾರೆ. ಕೆಳಗಿಳಿಯುವ ಯಾವ ಸೂಚನೆಯನ್ನು ನೀಡುತ್ತಿಲ್ಲ, ದಿನೇ ದಿನೇ ಅವರ ಸಿಎಂ ಸ್ಥಾನವನ್ನು ಬಲಪಡಿಸಿಕೊಳ್ಳುತ್ತಿದ್ದಾರೆ. ಐದು ವರ್ಷ ಕಂಪ್ಲೀಟ್ ಮಾಡಬೇಕು ಎಂಬುದು ಸಿದ್ದರಾಮಯ್ಯ ಉದ್ದೇಶವಾಗಿದೆ ಎಂಬುದು ಅವರ ಆಪ್ತರ ಮಾತು. ಇದು ಡಿಕೆ ಶಿವಕುಮಾರ್ ಹಾಗೂ ಅವರ ಬೆಂಬಲಿಗರನ್ನು ಕೆರಳಿಸಿದೆ. ಮೊನ್ನೆ ಮೊನ್ನೆಯಷ್ಟೇ ಡಿಕೆಶಿ ಹಿಡಿತದಲ್ಲಿರುವ ಜಲಸಂಪನ್ಮೂಲ ಇಲಾಖೆಯ ಇಂಜಿನಿಯರ್‌ಗಳ ವರ್ಗಾವಣೆಯಲ್ಲಿ ತಮ್ಮ ಅಸಮಾಧಾನವನ್ನು ಹೊರ ಹಾಕಿದ್ರು ಇದು ಗಮನಾರ್ಹ ಬದಲಾವಣೆಯನ್ನು ಸೂಚಿಸುತ್ತದೆ. ಡಿಕೆಶಿಯ ಈ ನಡೆ ತಮ್ಮ ಸ್ಥಾನ ಏನು ಪವರ್ ಏನು ಅನ್ನೋದನ್ನು ತೋರಿಸಿಕೊಟ್ಟಿದ್ದಾರೆ. ಲಿಖಿತವಾಗಿ ಇದನ್ನು ದಾಖಲಿಸುವ ಮೂಲಕ ಪಕ್ಷಕ್ಕೆ ಸಿದ್ದರಾಮಯ್ಯಗೆ ಸ್ಪಷ್ಟ ಸಂದೇಶ ರವಾನಿಸಿದ್ದಾರೆ.

ಸಿದ್ದರಾಮಯ್ಯ ಎಲ್ಲಾ ಇಲಾಖೆ ಮೇಲೆ ಹಿಡಿತ ಸಾಧಿಸುತ್ತಿದ್ದರೆ ನಾನು ಸುಮ್ಮನೆ ಕೂರುವುದಿಲ್ಲ ಎಂಬ ಮೆಸೇಜ್ ಅನ್ನು ಡಿಕೆಶಿ ಇಲ್ಲಿ ಕೊಟ್ಟಿದ್ದಾರೆ. ಈಗ ಸಿಎಂ ಹಾಗೂ ತಮ್ಮ ಮಧ್ಯೆ ಕೋಲ್ಡ್ ವಾರ್ ಶುರುವಾಗಿದ್ದು ಸಿಎಂ ಬದಲಾವಣೆಯ ಮೊದಲ ಹಂತ ಶುರುವಾಗಿದೆ ಎನ್ನಲಾಗುತ್ತಿದೆ.

### ತುಟಿ ಪಿಟಿಕ್ ಅನ್ನದ ಹೈಕಮಾಂಡ್

ಈಗಾಗಲೇ ಸಿಎಂ ಬದಲಾವಣೆಗಾಗಿ ಡಿಕೆಶಿ ನಾನಾ ಕಸರತ್ತು ಮಾಡುತ್ತಿದ್ದಾರೆ ಎಂಬುದು ಹೈಕಮಾಂಡ್‌ಗೆ ಗೊತ್ತಾಗಿದೆ. ಆದ್ರೆ ಹೈಕಮಾಂಡ್ ಮಾತ್ರ ಇದರ ಬಗ್ಗೆ ತುಟಿ ಪಿಟಿಕ್ ಅಂತಿಲ್ಲ, ಇದು ಎಲ್ಲಾರಿಗೂ ಆಶ್ಚರ್ಯ ತಂದಿದೆ. ಇದು ಕಾಂಗ್ರೆಸ್ ಪಕ್ಷವನ್ನು ಸಂಧಿಗ್ನ ಸ್ಥಿತಿ ತಂದು ನಿಲ್ಲಿಸಿದೆ. ಅಧಿಕಾರ ಹಂಚಿಕೆ ಬಗ್ಗೆ ಹೈಕಮಾಂಡ್ ಸ್ಪಷ್ಟವಾಗಿ ಹೇಳದೇ ಹೊರತು ಬಗೆಹರಿಯಲ್ಲ.. ಮುಂದೆ ಇದು ದೊಡ್ಡ ಪ್ರಮಾಣದಲ್ಲಿ ಸ್ಫೋಟಗೊಳ್ಳುವ ಸಾಧ್ಯತೆ ಇದೆ. ಇಡೀ ಕಾಂಗ್ರೆಸ್ ಪಕ್ಷ ಎರಡು ಹೋಳಾಗಬಹುದು, ಸರ್ಕಾರವೇ ಬಿದ್ದು ಹೋಗಬಹುದು ಎಂಬುದು ವಿಶ್ಲೇಷಕರ ಮಾತು. ಹೀಗಾಗಿ ಹೈಕಮಾಂಡ್ ಆದಷ್ಟು ಬೇಗ ಇದನ್ನು ಬಗೆಹರಿಸಬೇಕು ಎಂಬುದು ನಾಯಕರ ಒತ್ತಾಯ ಆಗಿದೆ. ಒಟ್ಟಿನಲ್ಲಿ ಸಿಎಂ ಬದಲಾವಣೆ ಈಗ ಕಾಂಗ್ರೆಸ್ ಪಕ್ಷಕ್ಕೆ, ಹೈಕಮಾಂಡ್‌ಗೆ ದೊಡ್ಡ ಇಕ್ಕಟ್ಟು ತಂದಿಟ್ಟಿದೆ. ಸಿದ್ದರಾಮಯ್ಯರನ್ನು ಬದಲಾವಣೆ ಮಾಡಿದ್ರು ಕಷ್ಟ, ಡಿಕೆಶಿಯನ್ನು ಸಿಎಂ ಮಾಡಿದ್ರು ಕಷ್ಟ, ಇದರಲ್ಲಿ ಯಾವುದೇ ನಡೆದ್ರು ಪಕ್ಷಕ್ಕೆ ಡ್ಯಾಮೇಜ್ ಕಟ್ಟಿಟ್ಟ ಬುತ್ತಿ, ಇದನ್ನು ಹೈಕಮಾಂಡ್ ಹೇಗೆ ಬಗೆಹರಿಸುತ್ತೆ ಅನ್ನೋದೇ ಯಕ್ಷ ಪ್ರಶ್ನೆ..

### ರಾಜ್ಯವ್ಯಾಪಿ ಜನ ನಾಯಕರಾಗಿ ಹೊರಹೊಮ್ಮಿಲ್ಲ

ಇಲ್ಲಿ ಸಿದ್ದರಾಮಯ್ಯರನ್ನು ಕೆಳಗಿಳಿಸಿ ನನಗೆ ಯಾಕೆ ಸಿಎಂ ಪಟ್ಟವನ್ನು ಕೊಡಬೇಕು ಎಂದು ಡಿಕೆಶಿ ವಾದಕ್ಕಿಳಿದಿದ್ದಾರೆ, ಸಿದ್ದರಾಮಯ್ಯ ಮೇಲೆ ಮುಡಾ ಕೇಸ್ ಆರೋಪ ಇದೆ. ಸಿಎಂ ಕುರ್ಚಿಗೆ ಇದು ಕಪ್ಪು ಚುಕ್ಕೆ, ಸಿದ್ದರಾಮಯ್ಯ ಯಾವುದೇ ತಪ್ಪುಗಳನ್ನು ನಿರಾಕರಿಸಿದ್ದರೂ, ಈ ಪ್ರಕರಣವು ಕೆಲವು ವಲಯಗಳಲ್ಲಿ ಅವರ ನೈತಿಕ ಅಧಿಕಾರಕ್ಕೆ ಧಕ್ಕೆ ತಂದಿದೆ. ಪಕ್ಷ ಗೆಲ್ಲುವಲ್ಲಿ ನನ್ನದು ಪಾತ್ರ ಇದೆ ಎಂದು ಮನದಟ್ಟು ಮಾಡಲಿದ್ದಾರೆ. ಎರಡೂವರೆ ವರ್ಷ ಆದ ನಂತರ ಡಿಕೆಶಿ ಸುಮ್ಮನೆ ಕೂರಲ್ಲ ಅನ್ನುವುದು ಪಕ್ಷದೊಳಗಿನ ಆತಂಕವಾಗಿದೆ. ಕೆಲವರು ಪಕ್ಷದಲ್ಲಿ ಶಿವಕುಮಾರ್ ಅವರಿಗೆ ಸರ್ಕಾರ ಮತ್ತು ಪಕ್ಷವನ್ನು ಮುನ್ನಡೆಸಲು ಅಗತ್ಯವಿರುವ ಜನಪ್ರಿಯತೆ ಇದೆಯಾ, ಸಿದ್ದರಾಮಯ್ಯರಷ್ಟು ಡಿಕೆಶಿಗೆ ಪ್ರಬಲ ಸಂಘಟನಾ ನೆಲೆಯಿದೆಯಾ, ಒಕ್ಕಲಿಗ ಸಮುದಾಯದ ನಾಯಕನಾಗಿರಬಹುದು ಅದ್ರೆ ಇನ್ನೂ ರಾಜ್ಯವ್ಯಾಪಿ ಜನ ನಾಯಕರಾಗಿ ಹೊರಹೊಮ್ಮಿಲ್ಲ ಅನ್ನೋದು ಸಿದ್ದು ಬಣದ ವಾದ.

ಸ್ವಾಮಿ ಸಿಎಂ ಸಿದ್ದರಾಮಯ್ಯನವರೇ, ಬಡವನ ಕೋಪ ದವಡೆಗೆ ಮೂಲ ಎನ್ನುವಂತೆ ತಮ್ಮ ಕೋಪ-ತಾಪ, ರೋಷಾವೇಷ ಅಧಿಕಾರಿಗಳ ಮೇಲಲ್ಲ, ಸಚಿವ ಸಂಪುಟದ ಸದಸ್ಯರ ಮೇಲೆ ತೋರಿಸಿ. ನಿಮ್ಮ ಹತಾಶೆಯನ್ನು, ಅಸಹಾಯಕತೆಯನ್ನ ಅಧಿಕಾರಿಗಳ ಮೇಲಲ್ಲಾ ತಮ್ಮ ಮಾತಿಗೆ ನಯಾ ಪೈಸೆ ಬೆಲೆ ಕೊಡದ ಸಚಿವ ಸಂಪುಟ ಸಹೋದ್ಯೋಗಿಗಳಿಗೆ ಕ್ಲಾಸ್ ತೆಗೆದುಕೊಂಡು ನಿಮ್ಮ ದಮ್ಮು ತಾಕತ್ತು ತೋರಿಸಿ.



**ಆರ್.ಅಶೋಕ್**, ವಿರೋಧ ಪಕ್ಷದ ನಾಯಕ

### ಸಿಎಂಗೆ ಆರ್.ಅಶೋಕ್ ಪ್ರಶ್ನೆ ಸುರಿಮಳೆ

- ತಾವು ಸಚಿವರಿಗೆ ನೀಡಿರುವ ನಿರ್ದೇಶಗಳಲ್ಲಿ ಯಾವುದಾದರೂ ಒಂದಾದರೂ ಪಾಲನೆ ಆಗುತ್ತಿದೆಯಾ?
- ತಿಂಗಳಲ್ಲಿ ಒಂದು ದಿನ ಜನತಾದರ್ಶನ ಮಾಡಿ ಎಂದರೂ ಮಾಡುತ್ತಿಲ್ಲ.
- ಜಿಲ್ಲಾ ಪ್ರವಾಸ ಮಾಡಿ ಜನರ ಸಮಸ್ಯೆ ಕೇಳಿ ಎಂದರೂ ಮಾಡುತ್ತಿಲ್ಲ.
- ಕನಿಷ್ಟಪಕ್ಷ ವಾರದಲ್ಲಿ ಮೂರು ದಿನ ಕಚೇರಿಯಲ್ಲಿ ಕುಳಿತು ಕೆಲಸ ಮಾಡಿ ಎಂದರೂ ಗುರುವಾರದ ಸಂಪುಟ ಸಭೆಗೆ ಬಿಟ್ಟರೆ ಬಹುತೇಕ ಸಚಿವರು ವಿಧಾನಸೌಧದತ್ತ ತಲೆಯೂ ಹಾಕುತ್ತಿಲ್ಲ.
- ನಿವೃತ್ತ ಅಧಿಕಾರಿಗಳನ್ನು ಹೊರ ಗುತ್ತಿಗೆ ಸೇವೆಯಿಂದ ತಕ್ಷಣ ಬಿಡುಗಡೆ ಮಾಡಿ ಎಂದರೂ ಬಿಡುಗಡೆ ಮಾಡಲಿಲ್ಲ.
- ರೈತರ ಆತ್ಮಹತ್ಯೆ ಪ್ರಕರಣಗಳಲ್ಲಿ ತಕ್ಷಣ ಪರಿಹಾರ ನೀಡಿ ಎಂದರೂ ಯಾರೂ ತಲೆ ಕೆಡಿಸಿಕೊಂಡಿಲ್ಲ. ಇನ್ನೂ ಅನೇಕ ಜಿಲ್ಲೆಗಳಲ್ಲಿ ಕಳೆದ ವರ್ಷದ ಪರಿಹಾರ ವಿತರಣೆಯೇ ಬಾಕಿ ಇದೆ.
- ಕೆರೆ ಒತ್ತುವರಿ ನಿರ್ದಾಕ್ಷಿಣ್ಯವಾಗಿ ತೆರವು ಮಾಡಿಸಿ ಎಂದು ಅಧಿಕಾರ ವಹಿಸಿಕೊಂಡ ಆರಂಭದಲ್ಲಿ ಹೇಳಿದ್ದನ್ನು ಯಾರೂ ಕೇರ್ ಮಾಡಿಲ್ಲ.
- ರಾಜಕಾಲುವೆ ಅಕ್ರಮ ಒತ್ತುವರಿ ತೆರವು ಮಾಡಿ ಎಂದು ನಗರ ಪ್ರದಕ್ಷಿಣೆ ಹಾಕಿ ಬಂದರೂ ಯಾರೂ ಕ್ಯಾರೆ ಅನ್ನುತ್ತಿಲ್ಲ.
- ಜನಸ್ಪಂದನ ಅರ್ಜಿ ವಿಲೇವಾರಿ ತ್ವರಿತವಾಗಿ ಆಗಬೇಕು ಎಂಬ ಸೂಚನೆ ಭಾಷಣಕ್ಕೆ ಸೀಮಿತವಾಯಿತು.

# ಉಪಮುಖ್ಯಮಂತ್ರಿ ಡಿಕೆಶಿ ವಿರುದ್ಧ ಪಕ್ಷಾತೀತವಾಗಿ ಬೀದಿಗಿಳಿದ ತುಮಕೂರು ಜನತೆ

**● ತುಮಕೂರಿನ ಗುಬ್ಬಿ ತಾಲ್ಲೂಕಿನ ನಿಟ್ಟೂರಿನಲ್ಲಿ ನಡೆದ ಭಾರಿ ಪ್ರತಿಭಟನೆ ● ಸೆಕ್ಷನ್ 144 ಜಾರಿ ನಡುವೆಯೂ ಸಹ ರೈತರ ಧರಣಿ**

• **ಉದಯವಾಹಿನಿ ಬೆಂಗಳೂರು**

ತುಮಕೂರಿನ ಗುಬ್ಬಿ ತಾಲ್ಲೂಕಿನ ನಿಟ್ಟೂರಿನಲ್ಲಿ ನಡೆದ ಭಾರಿ ಪ್ರತಿಭಟನೆಯಲ್ಲಿ ರಸ್ತೆ ತಡೆದು ಟೈರ್‌ಗೆ ಬೆಂಕಿ ಹಚ್ಚಿ ಸೆಕ್ಷನ್ 144 ಜಾರಿಯಿದ್ದರೂ ಅದರ ನಡುವೆಯೂ ಸಹ ರೈತರು ರಾಜ್ಯ ಸರ್ಕಾರ ದಬ್ಬಾಳಿಕೆ ನಡೆಸುತ್ತಿದೆ ಎಂದು ತಮ್ಮ ಆಕ್ರೋಶವನ್ನು ಹೊರಹಾಕಿದರು.

ತುಮಕೂರು ಜಿಲ್ಲೆಯ ಹತ್ತು ತಾಲ್ಲೂಕಿನ ಜನತೆಗೆ ಹೇಮಾವತಿ ನೀರನ್ನು ಕಡಿತಗೊಳಿಸಿ ರಾಮನಗರಕ್ಕೆ ತೆಗೆದುಕೊಂಡು ಹೋಗುತ್ತಿರುವುದು ಸರಿಯಲ್ಲ ಎಂದು ಶಾಸಕ ಸುರೇಶ್ ಗೌಡ ತಮ್ಮ ಆಕ್ರೋಶ ಹೊರ ಹಾಕಿದರು

ವಿಧಾನಸಭೆಯಲ್ಲಿಯೂ ಸಹ ಹೇಮಾವತಿ ಕೆನಾಲ್ ಲಿಂಕ್ ಯೋಜನೆ ಬಗ್ಗೆ ಚರ್ಚೆ ನಡೆಸಿ ಮನವಿ ಮಾಡಿದ್ದೇವೆ. ಗೃಹ ಸಚಿವ ಜಿ ಪರಮೇಶ್ವರ್ ಅವರಿಗೂ ಸಹ ಮನವಿ ಮಾಡಿದರೂ ಸಹ ಸ್ಪಂದಿಸದೆ ಇದ್ದ ಕಾರಣ ಬೀದಿಗಿಳಿಯಬೇಕಾದ ಪರಿಸ್ಥಿತಿ ಬಂದಿದೆ. ಹತ್ತು ತಾಲ್ಲೂಕಿನ ರೈತನ ಮರಣ ಶಾಸನ ಈ ಯೋಜನೆಯಾಗಲಿದೆ. ಯಾವುದೇ ಕಾರಣಕ್ಕೂ ಸಹ ತುಮಕೂರಿನಿಂದ ರಾಮನಗರಕ್ಕೆ ನೀರು ಹೋಗಲು ಬಿಡುವುದಿಲ್ಲ. ಕಳೆದ ಎರಡು ವರ್ಷಗಳಿಂದಲೂ ಸಹ ಈ ಹೋರಾಟ ನಡೆಸುತ್ತಿದ್ದೇವೆ. ಇನ್ನು ಮುಂದೆಯೂ ಸಹ ಹೋರಾಟವನ್ನು ತೀವ್ರಗೊಳಿಸಲಿದ್ದೇವೆ ಎಂದು ಶಾಸಕ ಸುರೇಶ್ ಗೌಡ ಹೇಳಿದರು.



**ನೀರು ಹೋಗಲು ಬಿಡಲ್ಲ**



**ಡಿಕೆ ಶಿವಕುಮಾರ್ ದಬ್ಬಾಳಿಕೆಗೆ ಬೆದರಲ್ಲ :** ಪ್ರಾಣ ಬೇಕಾದರೂ ಕೊಡುತ್ತೇವೆ ನೀರನ್ನು ಕೊಡುವುದಿಲ್ಲ ಎಂದು ರೈತರು ಪ್ರತಿಭಟನಾ ವೇಳೆಯಲ್ಲಿ ಸರ್ಕಾರದ ವಿರುದ್ಧ ಮತ್ತು ಉಪ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ವಿರುದ್ಧ ಘೋಷಣೆ ಕೂಗಿ ತಮ್ಮ ಆಕ್ರೋಶ ವ್ಯಕ್ತಪಡಿಸಿದರು.

ಸಹಸ್ರಾರು ಗುಬ್ಬಿ ನಿಟ್ಟೂರು ಬಳಿ ರಸ್ತೆ ತಡೆ ಚಳುವಳಿ ನಡೆಸಿ ಟೈರ್‌ಗೆ ಬೆಂಕಿ ಹಚ್ಚಿ ತಮ್ಮ ಆಕ್ರೋಶವನ್ನು ಹೊರಹಾಕಿದರು .

ತುಮಕೂರು ಜಿಲ್ಲೆಯ ಗುಬ್ಬಿ ತಾಲ್ಲೂಕಿನ ಜನತೆಗೆ ಜೀವನದಿಯಾಗಿರುವ ಈ ನೀರನ್ನು ರಾಮನಗರಕ್ಕೆ ಬಿಟ್ಟಿದ್ದೇ ಆದಲ್ಲಿ, ನಾವು ಪ್ರಾಣ ಬಿಡಲು ಹಿಂಜರಿಯುವುದಿಲ್ಲ. ಸೆಕ್ಷನ್ 144ಅನ್ನು ಜಾರಿ ಮಾಡಿ ನೀರು ಬಿಡಲು ಮುಂದಾಗಿರುವ ಈ ಸರ್ಕಾರ ಆದಷ್ಟು ಬೇಗ ಅಂತ್ಯ ಕಾಣಲಿದೆ ಎಂದು ರೈತ ಸಂಘದ ಮುಖಂಡರು ಎಚ್ಚರಿಸಿದರು. ಶಾಸಕರಾದ ಜ್ಯೋತಿ ಗಣೇಶ್. ಕಾಂಗ್ರೆಸ್ ಪಕ್ಷದ ಸಮಾನ ಮನಸ್ಕ ಮುಖಂಡರು ಜಾತ್ಯಾತೀತವಾಗಿ ಎಲ್ಲಾ ಪಕ್ಷದ ಮುಖಂಡರು ರೈತ ಸಂಘದ ಮುಖಂಡರು ತುಮಕೂರು ಜಿಲ್ಲೆಯ ಸಹಸ್ರಾರು ರೈತರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

### ಸರ್ಕಾರದ ಪಾಪದ ಕೊಡ ತುಂಬಿದೆ

ಕೇಂದ್ರ ರೈಲ್ವೆ ಖಾತೆಯ ರಾಜ್ಯ ಸಚಿವರಾದ ವಿ ಸೋಮಣ್ಣ ರಾಜ್ಯ ಸರ್ಕಾರದ ವಿರುದ್ಧ ತುಮಕೂರು ರೈತರು ನಡೆಸುತ್ತಿರುವ ಪ್ರತಿಭಟನೆಯ ಬಗ್ಗೆ ಪ್ರತಿಕ್ರಿಯಿಸಿ ಮಾತನಾಡಿ ನಾನು ಈಗಾಗಲೇ ಮುಖ್ಯಮಂತ್ರಿಗಳಿಗೆ ಸಂಪೂರ್ಣವಾಗಿ ಪತ್ರ ಬರೆದಿದ್ದು ತಾಂತ್ರಿಕ ವ್ಯವಸ್ಥೆ ಇಲ್ಲದೆ ರಾಜಕೀಯ ಅಧಿಕಾರವನ್ನು ದುರುಪಯೋಗಪಡಿಸಿಕೊಂಡು ಒಂದು ಜಿಲ್ಲೆಯಿಂದ ಮತ್ತೊಂದು ಜಿಲ್ಲೆಯ ರೈತರಿಗೆ ಮತ್ತು ಜನರಿಗೆ ಎತ್ತಿ ಕಟ್ಟುವ ವ್ಯವಸ್ಥೆ ಒಳ್ಳೆಯದಲ್ಲ. ತುಮಕೂರಿನ ಜನತೆಗೆ ಈಗ ಇರುವ ನೀರು 25 ಟಿಎಂಸಿಗಳಷ್ಟು ನೀರು ನದಿಯ ವ್ಯವಸ್ಥೆ ರೈತರಿಗೆ ಮತ್ತು ಕುಡಿಯುವ ನೀರಿಗೆ ಸಾಕಷ್ಟು ಆಗಿದ್ದು ಇದನ್ನು ರಾಮನಗರ ಜಿಲ್ಲೆಗೆ ತೆಗೆದುಕೊಂಡು ಹೋದಲ್ಲಿ ತುಮಕೂರು ಜಿಲ್ಲೆಯ ಸುಮಾರು ಐದಾರು ತಾಲ್ಲೂಕಿನ ಜನತೆಗೆ ತುಂಬಾ ತೊಂದರೆಯಾಗಲಿದೆ ಎಂದು ಈಗಾಗಲೇ ನಾನು ಸಂಪೂರ್ಣವಾಗಿ ವಿವರವಾಗಿ ಮುಖ್ಯಮಂತ್ರಿಗಳಿಗೆ ಪತ್ರ ಬರೆದಿದ್ದೇನೆ. ಆದರೂ ಸಹ ಸರ್ಕಾರದ ಈ ವ್ಯವಸ್ಥೆ ಒಳ್ಳೆಯದಲ್ಲ. ಇದರಿಂದ ಕಳೆದ ಎರಡು ವರ್ಷಗಳ ಸರ್ಕಾರದ ಪಾಪದ ಕೊಡ ತುಂಬಿದೆ ಎಂದು ಕೇಂದ್ರ ರೈಲ್ವೆ ಖಾತೆ ರಾಜ್ಯ ಸಚಿವರಾದ ವಿ ಸೋಮಣ್ಣ ಪ್ರತಿಕ್ರಿಯಿಸಿದರು.

**ಈ ದಿನದ ದರ** ಪೆಟ್ರೋಲ್: 103.50 ₹/L ಡೀಸೆಲ್ : 90.03 ₹/L ಬಂಗಾರ: ₹9,731/Gram24ct ₹8,920/Gram22ct ಬೆಳ್ಳಿ: ₹99.90/Gram

# ಸಿಎಸ್ಸಾರ್ ನಿಧಿಯಲ್ಲಿ ಪಬ್ಲಿಕ್ ಶಾಲೆ ನಿರ್ಮಾಣ ವಿಳಂಬ

## ವಿಧಾನಸೌಧದಲ್ಲಿ ಮುಂದುವರೆದ ರಾಜ್ಯ ಪ್ರಗತಿ ಪರಿಶೀಲನೆ ಕುರಿತ ಜಿಲ್ಲಾಧಿಕಾರಿಗಳು, ಸಿಇಓಗಳ ಸಭೆ

• ಉದಯವಾಹಿನಿ, ಬೆಂಗಳೂರು

ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ ನಿಧಿಯಲ್ಲಿ ಕರ್ನಾಟಕ ಪಬ್ಲಿಕ್ ಶಾಲೆಗಳ ಮಾದರಿಯಲ್ಲಿ ಸಿಎಸ್ಸಾರ್ ಶಾಲೆಗಳ ನಿರ್ಮಾಣ ಯೋಜನೆಯು ನಿರೀಕ್ಷಿತ ಮಟ್ಟದಲ್ಲಿ ಪ್ರಗತಿ ಕಾಣದಿರುವ ಬಗ್ಗೆ ಡಿಸಿಎಂ ಡಿಕೆಶಿ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ವಿಧಾನಸೌಧದಲ್ಲಿ ಮುಂದುವರೆದ ರಾಜ್ಯ ಪ್ರಗತಿ ಪರಿಶೀಲನೆ ಕುರಿತ ಜಿಲ್ಲಾಧಿಕಾರಿಗಳು, ಸಿಇಓಗಳ ಸಭೆಯಲ್ಲಿ ಡಿಸಿಎಂ ಅವರು ಅಧಿಕಾರಿಗಳ ಕಾರ್ಯವೈಖರಿಗೆ ಆಕ್ಷೇಪ ವ್ಯಕ್ತಪಡಿಸಿದರು.

ರಾಜ್ಯದಲ್ಲಿ ಪ್ರತಿ ವರ್ಷ 8000 ಕೋಟಿ ರೂ. ಸಿಎಸ್ಸಾರ್ ನಿಧಿಲಭ್ಯವಿದ್ದು, ಇದನ್ನು ಸಿಎಸ್ಸಾರ್ ಶಾಲೆಗಳ ನಿರ್ಮಾಣಕ್ಕೆ ಬಳಸಿಕೊಳ್ಳಬೇಕು ಎಂದು ವರ್ಷದ ಹಿಂದೆಯೇ ಸೂಚನೆ ನೀಡಲಾಗಿತ್ತು. ಆದರೆ ಇದು ಸಮರ್ಪಕವಾಗಿ ಅನುಷ್ಠಾನಗೊಂಡಿಲ್ಲ ರಾಜ್ಯದ ಕಾರ್ಪೊರೇಟ್ ಸಂಸ್ಥೆಗಳು ಸಿಎಸ್ಸಾರ್ ನಿಧಿಯನ್ನು ಅನ್ಯ ರಾಜ್ಯಗಳ ಖಾಸಗಿ ಸೇವಾ ಸಂಸ್ಥೆಗಳಿಗೆ (NGO)ಗಳಿಗೆ ಚೆಕ್‌ನಲ್ಲಿ ಕೊಟ್ಟು ಅದರಲ್ಲಿ 50% ರಷ್ಟನ್ನು ನಗದು ಸ್ವರೂಪದಲ್ಲಿ ವಾಪಸ್ಸು ಪಡೆಯುತ್ತಿರುವುದು ಗಮನಕ್ಕೆ ಬಂದಿದೆ. ಇದೊಂದು ಅಕ್ರಮ, ಇದರಿಂದ ನಮ್ಮ ರಾಜ್ಯದ ನಿಧಿ ದುರುಪಯೋಗ ಆಗುತ್ತಿದೆ. ಇದನ್ನು ನಮ್ಮ ರಾಜ್ಯದ ಶಾಲೆಗಳ ಅಭಿವೃದ್ಧಿಗೆ ಬಳಸುವುದು ನಿಮ್ಮ ಜವಾಬ್ದಾರಿ ಎಂದು ಅಧಿಕಾರಿಗಳಿಗೆ ಒತ್ತಿ ಹೇಳಿದ್ದಾರೆ. ಕಾರ್ಪೊರೇಟ್ ಸಂಸ್ಥೆಗಳು CSR ನಿಧಿಯನ್ನು ನಮಗೆ ನಗದು ಸ್ವರೂಪದಲ್ಲಿ ಕೊಡುವುದು ಬೇಡ. ಮೂರು ಗ್ರಾಮ ಪಂಚಾಯಿತಿಗೆ ಒಂದು ಪಬ್ಲಿಕ್ ಶಾಲೆ ಕಟ್ಟಿಕೊಡಲಿ. ಜಮೀನು ಬೇಕಿದ್ದರೆ ಸರಕಾರದಿಂದಲೇ ಕೊಡೋಣ. ನೀವೇ ಜಾಗ ಗುರುತಿಸಿ. ನಾವು ವಿನ್ಯಾಸ ಕೊಡೋಣ. ಅವರು ಕಟ್ಟಡ ಕಟ್ಟಿ, ಮೂಲಸೌಕರ್ಯ ಒದಗಿಸಲಿ. ಆ ಶಾಲಾ ಕಟ್ಟಡದ ಮೇಲೆ ರಾಜ್ಯ ಸರಕಾರದ ಜತೆಗೆ ಆಯಾ ಸಂಸ್ಥೆಗಳ ಹೆಸರಿನ ಫಲಕ ಹಾಕಿಕೊಳ್ಳಲಿ. ಈ ಶಾಲೆಗಳಿಗೆ ಖಾಸಗಿ ಶಾಲೆಗಳಿಂದ ತಲಾ ಒಬ್ಬರು ನುರಿತ ಶಿಕ್ಷಕರನ್ನು ಪೂರೈಸುವ ಜವಾಬ್ದಾರಿ ವಹಿಸೋಣ ಎಂದಿದ್ದಾರೆ. ನನ್ನ ಕ್ಷೇತ್ರದಲ್ಲಿ ತಲಾ 9 ರಿಂದ 12 ಕೋಟಿ ರೂ. ವೆಚ್ಚಮಾಡಿ 13 ಸಿಎಸ್ಸಾರ್ ಪಬ್ಲಿಕ್ ಶಾಲೆಗಳನ್ನು ನಿರ್ಮಿಸಲಾಗುತ್ತಿದೆ. ಕೆಲವು ಕಡೆ ಮಾತ್ರ ಕೆಲಸ ಆಗುತ್ತಿದೆ. ಬಹುತೇಕ ಕಡೆ ಯಾರೂ ಆಸಕ್ತಿಯನ್ನೇ ವಹಿಸಿಲ್ಲ ಎಂದು ಕಿಡಿ ಕಾರಿದ್ದಾರೆ.


ಉದಯವಾಹಿನಿ ಚಿತ್ರ

**ನಿಮ್ಮ ನಿಮ್ಮ ವ್ಯಾಪ್ತಿಯಲ್ಲಿನ ಕಾರ್ಪೊರೇಟ್ ಸಂಸ್ಥೆಗಳಿಗೆ ಕೂಡಲೇ ಪತ್ರ ಬರೆದು, ಸಭೆ ಕರೆದು ಪಬ್ಲಿಕ್ ಶಾಲೆಗಳ ನಿರ್ಮಾಣ ಕೈಗೆತ್ತಿಕೊಳ್ಳುವಂತೆ ಸೂಚನೆ ನೀಡಿ. ಈವರೆಗೂ ಕಾರ್ಪೊರೇಟ್ ಸಂಸ್ಥೆಗಳು ಏನು ಮಾಡಿವೆ ಎಂಬುದರ ಮಾಹಿತಿ ಪಡೆಯಿರಿ. ಶಿಕ್ಷಣ ಇಲಾಖೆ ವಿನ್ಯಾಸ (ಡಿಸೈನ್) ನೀಡುತ್ತದೆ. ಅದನ್ನು ಆಧರಿಸಿ ಕಟ್ಟಡ ಕಟ್ಟಲು ಸೂಚನೆ ಕೊಡಿ. ಒಂದೊಂದು ತಾಲ್ಲೂಕಿಗೆ ಒಂದು ಮಾದರಿ ಶಾಲೆ ನಿರ್ಮಿಸಿ, ಅದರ ವಿನ್ಯಾಸದ ಮೇರೆಗೆ ಮೂರು ಪಂಚಾಯಿತಿಗೆ ಒಂದು ಶಾಲೆ ನಿರ್ಮಾಣದ ಗುರಿ ನಿಗದಿ ಮಾಡಿ ಎಂದು ಡಿಸಿ ಹಾಗೂ ಸಿಇಓಗಳಿಗೆ ಸೂಚನೆ ನೀಡಿದ್ದಾರೆ.**

**ಶಾಲೆಗಳ ನಿರ್ಮಾಣಕ್ಕೆ ಸಿಎಸ್ಸಾರ್ ನಿಧಿ ಬಳಕೆ ಸಂಬಂಧ ಬೆಂಗಳೂರು ಕಾರ್ಪೊರೇಟ್ ಸಂಸ್ಥೆಗಳ ಸಭೆ ಕರೆಯಲು ಬೆಂಗಳೂರು ಜಿಲ್ಲಾಧಿಕಾರಿ, ಸಿಇಓಗಳಿಗೆ ಸೂಚನೆ ನೀಡಲಾಗಿದೆ. ಅದೇ ರೀತಿ ಎಲ್ಲಾ ಜಿಲ್ಲಾಧಿಕಾರಿಗಳು, ಸಿಇಓಗಳು ತಮ್ಮ ಜಿಲ್ಲಾ ವ್ಯಾಪ್ತಿಯಲ್ಲಿ ಸಭೆ ಕರೆದು ಸಿಎಸ್ಸಾರ್ ಶಾಲೆ ನಿರ್ಮಾಣ ತ್ವರಿತಗತಿಯಲ್ಲಿ ಆಗುವಂತೆ ಕ್ರಮ ಕೈಗೊಳ್ಳಬೇಕು. ತಾವೇ ಆಗಾಗ್ಗೆ ಡಿಸಿ, ಸಿಇಓಗಳ ಜೊತೆ ವಿಡಿಯೋ ಕಾನ್ಫರೆನ್ಸ್ ಮೂಲಕ ಸಭೆ ನಡೆಸಿ, ಯೋಜನೆ ಪ್ರಗತಿ ಬಗ್ಗೆ ಮಾಹಿತಿ ಪಡೆಯುತ್ತೇನೆ ಎಂದು ತಿಳಿಸಿದ್ದಾರೆ.**

# ಸಾರ್ವಜನಿಕ ಸ್ಥಳಗಳಲ್ಲಿ ತಂಬಾಕು ಗುಟ್ಕಾ ಉಗುಳಿದ್ರೆ 1,000 ರೂ. ದಂಡ

• ಉದಯವಾಹಿನಿ, ಬೆಂಗಳೂರು

ಸಾರ್ವಜನಿಕ ಸ್ಥಳಗಳಲ್ಲಿ ತಂಬಾಕು/ಗುಟ್ಕಾ ಉಗುಳಿದ್ರೆ ದಂಡ ಕಟ್ಟಲೇಬೇಕು. ಈ ಸಂಬಂಧ ರಾಜ್ಯ ಸರ್ಕಾರವು ಅಧಿಸೂಚನೆ ಹೊರಡಿಸಿದೆ. ಇನ್ನುಮುಂದೆ ಸಾರ್ವಜನಿಕ ಸ್ಥಳಗಳಲ್ಲಿ ಸಿಗರೇಟು ಸೇದಿದರೆ ಮತ್ತು ಗುಟ್ಕಾ ಉಗುಳಿದರೆ 1,000 ರೂ. ದಂಡ ಕಟ್ಟಬೇಕು. ರಾಜ್ಯ ಸರ್ಕಾರ ಮಸೂದೆ ತಂದಿತ್ತು. ಸಿಗರೇಟು, ಇತರೆ ತಂಬಾಕು ಉತ್ಪನ್ನಗಳ (ಜಾಹೀರಾತು ನಿಷೇಧ, ವ್ಯಾಪಾರ ಮತ್ತು ವಾಣಿಜ್ಯ ಉತ್ಪಾದನೆ, ಸರಬರಾಜು ವಿತರಣೆಯ ವಿನಿಮಯ) (ಕರ್ನಾಟಕ ತಿದ್ದುಪಡಿ) ಮಸೂದೆ 2024ಕ್ಕೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಇದೇ 23ರಂದು ಅಂಕಿತ ಹಾಕಿದರು. ಈ ಸಂಬಂಧ ರಾಜ್ಯಪತ್ರದಲ್ಲಿ ಅಧಿಸೂಚನೆ ಹೊರಡಿಸಿ, ಕಾಯ್ದೆ ಜಾರಿಗೆ ತರಲಾಗಿದೆ. ಇನ್ನು 21 ವರ್ಷಕ್ಕಿಂತ ಕಡಿಮೆ ವಯಸ್ಸಿನವರಿಗೆ ಬೀಡಿ, ಸಿಗರೇಟು, ತಂಬಾಕಿನ ಉತ್ಪನ್ನಗಳ ಮಾರಾಟವನ್ನು ನಿಷೇಧಿಸಲಾದೆ. ಈ ಕಾಯ್ದೆ ಉಲ್ಲಂಘಿಸಿದವರಿಗೆ 1,000 ರೂ. ದಂಡ ವಿಧಿಸಲಾಗುತ್ತದೆ. ಅಲ್ಲದೆ ಹೋಟೆಲ್‌ಗಳು, ಪಬ್, ಬಾರ್ ಅಥವಾ ರೆಸ್ಟೋರೆಂಟ್‌ಗಳಲ್ಲಿ ಹುಕ್ಕಾ ಸೇವನೆಗೂ ಅವಕಾಶ ಇಲ್ಲ. ನಿಷೇಧವನ್ನು ಉಲ್ಲಂಘಿಸಿದವರಿಗೆ 50,000 ದಿಂದ 1 ಲಕ್ಷದವರೆಗೆ ದಂಡ ಮತ್ತು ಒಂದು ವರ್ಷದಿಂದ ಮೂರು ವರ್ಷಗಳವರೆಗೆ ಜೈಲುಶಿಕ್ಷೆ ವಿಧಿಸಲು ಕಾಯ್ದೆಯಲ್ಲಿ ಅವಕಾಶವಿದೆ.

# ಕೆಕೆಆರ್‌ಟಿಸಿ ಬಸ್‌ಗೆ ಹಿಂಬದಿಯಿಂದ ಕಾರು ಡಿಕ್ಕಿ : ಓರ್ವ ಸಾವು

• ಉದಯವಾಹಿನಿ, ಬೆಂಗಳೂರು

ಕಲ್ಯಾಣ ಕರ್ನಾಟಕ ಸಾರಿಗೆ ಬಸ್ಸಿಗೆ ಕಾರು ಡಿಕ್ಕಿಯಾದ ಪರಿಣಾಮ ಓರ್ವ ಸ್ಥಳದಲ್ಲೇ ಸಾವನ್ನಪ್ಪಿದ್ದು, ಇಬ್ಬರು ಗಂಭೀರ ಗಾಯಗೊಂಡಿರುವ ಘಟನೆ ನೆಲಮಂಗಲ ತಾಲ್ಲೂಕಿನ ತೊಣಚಿನಕುಪ್ಪೆ ಪ್ರವಾಸಿ ಡಾಬಾದ ಬಳಿ ನಡೆದಿದೆ. ವೇಗವಾಗಿ ಬಂದ ಕಾರು ಹಿಂಬದಿಯಿಂದ ಬಸ್ಸಿಗೆ ಡಿಕ್ಕಿ ಹೊಡೆದಿದೆ. ಕಾರು ಗುದ್ದಿದ ರಭಸಕ್ಕೆ ಕಾರಿನಲ್ಲಿದ್ದ ಓಬಳಾರೆಡ್ಡಿ (35) ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಘಟನೆಯಲ್ಲಿ ಕಾರಿನಲ್ಲಿದ್ದ ಸುನಿಲ್ ಮತ್ತು ದಿವ್ಯ ಗಂಭೀರ ಗಾಯಗೊಂಡಿದ್ದು ಆಸ್ಪತ್ರೆಗೆ ದಾಖಲಿಸಲಾಗಿದೆ. ರಾಷ್ಟ್ರೀಯ ಹೆದ್ದಾರಿ 48ರ ತುಮಕೂರು-ಬೆಂಗಳೂರು ಹೆದ್ದಾರಿಯಲ್ಲಿ ಅಪಘಾತ ಸಂಭವಿಸಿದೆ. ಘಟನಾ ಸ್ಥಳಕ್ಕೆ ನೆಲಮಂಗಲ ಸಂಚಾರಿ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

# ಅಕ್ರಮ ಗೋ ಹತ್ಯೆ-ಗೋವುಗಳ ಸಾಗಾಟಕ್ಕೆ ಸರ್ಕಾರ ಬ್ರೇಕ್, ಸಮಿತಿ ರಚನೆ

• ಉದಯವಾಹಿನಿ, ಬೆಂಗಳೂರು

ಮುಸ್ಲಿಂ ಬಾಂಧವರು ತ್ಯಾಗದ ಸಂಕೇತವಾಗಿ ಆಚರಿಸುವ ಬಕ್ರೀದ್ ಹಬ್ಬಕ್ಕೆ ಇನ್ನು ಕೆಲವೇ ದಿನಗಳು ಬಾಕಿಯಿದ್ದು, ಈ ನಡುವಲ್ಲೇ ಗೋ ಹತ್ಯೆ-ಗೋವುಗಳ ಅಕ್ರಮ ಸಾಗಾಟ ತಡೆಯಲು ರಾಜ್ಯ ಸರ್ಕಾರ ಮುಂದಾಗಿದ್ದು, ಬೆಂಗಳೂರು ನಗರ ಉಪ ಆಯುಕ್ತರ ನೇತೃತ್ವದಲ್ಲಿ ಸಮಿತಿಯನ್ನು ರಚಿಸಿದೆ. ಗೋವು ಮತ್ತು ಒಂಟೆಗಳನ್ನು ವಧೆ ಮಾಡುವುದು ಶಿಕ್ಷಾರ್ಹ ಅಪರಾಧವಾಗಿದ್ದು, 13 ವರ್ಷಕ್ಕಿಂತ ಮೇಲ್ಪಟ್ಟ ಕುರಿ, ಮೇಕೆ ಮತ್ತು ಎಮ್ಮೆಗಳನ್ನು ಮಾತ್ರ ವಧೆ ಮಾಡಲು ಅವಕಾಶವಿದೆ ಎಂದು ಬಿಬಿಎಂಪಿ ಈಗಾಗಲೇ ಸಾರ್ವಜನಿಕರಿಗೆ ಎಚ್ಚರಿಕೆ ನೀಡಿದೆ. ಆರ್‌ಟಿಒ, ಸಾರಿಗೆ ಇಲಾಖೆ, ಪೊಲೀಸ್ ಮತ್ತು ಪುರಸಭೆಯ ಅಧಿಕಾರಿಗಳು ಪ್ರಾಣಿಗಳ ಸಾಗಣೆಯ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸ ಬೇಕು ಎಂದು ಜಿಲ್ಲಾಧಿಕಾರಿ ಕಚೇರಿಯ ಅಧಿಕಾರಿಗಳು ತಿಳಿಸಿದ್ದಾರೆ. ಯಾರಾದರೂ ಜಾನುವಾರುಗಳನ್ನು ವಧೆ ಮಾಡುತ್ತಿರುವುದು ಕಂಡುಬಂದರೆ ಅವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದ್ದಾರೆ. ಗೋವು ಅಥವಾ ಒಂಟೆಗಳನ್ನು ಅಕ್ರಮವಾದಿ ಸಾಗಾಟ ಮಾಡುತ್ತಿರುವುದು ಕಂಡು ಬಂದರೆ ಪ್ರಾಣಿಗಳನ್ನು ವಶಪಡಿಸಿಕೊಳ್ಳಲಾಗುತ್ತದೆ ಮತ್ತು ಪ್ರಕರಣಗಳನ್ನು ದಾಖಲಿಸಲಾಗುತ್ತದೆ ಎಂದು ತಿಳಿಸಿದ್ದಾರೆ.

# ಗ್ಯಾರಂಟಿ ಅನುಷ್ಠಾನ ಸಮಿತಿಗೆ ಭಾರೀ ಅನುದಾನ ಬಿಡುಗಡೆ

• ಉದಯವಾಹಿನಿ, ಬೆಂಗಳೂರು

ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರ ಅನುಷ್ಠಾನಗೊಳಿಸಿರುವ ಗೃಹಲಕ್ಷ್ಮಿ ಯೋಜನೆಯ ಹಣ ಬರುತ್ತಿಲ್ಲ ಎಂದು ಜನ ಆರೋಪ ಮಾಡುತ್ತಿದ್ದಾರೆ. ಈ ನಡುವೆಯೂ ಗ್ಯಾರಂಟಿ ಅನುಷ್ಠಾನ ಸಮಿತಿಗಳು ಮುಂದುವರಿದಿದೆ. ಇದೀಗ ಗ್ಯಾರಂಟಿ ಜಾರಿ ಸಮಿತಿಯ ಅಧ್ಯಕ್ಷ, ಉಪಾಧ್ಯಕ್ಷ, ಸದಸ್ಯರಿಗೆ ಬರೋಬ್ಬರಿ 7.65 ಕೋಟಿ ಹಣ ಬಿಡುಗಡೆ ಮಾಡಿ ಆರ್ಥಿಕ ಇಲಾಖೆ ಆದೇಶ ಹೊರಡಿಸಿದೆ. ಜಿಲ್ಲಾ ಪಂಚಾಯಿತಿಗಳಿಗೆ 1.31 ಕೋಟಿ ರೂ, ತಾಲ್ಲೂಕು ಪಂಚಾಯಿತಿಗಳಿಗೆ 6.33 ಕೋಟಿ ರೂ. ಹಾಗೂ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಗ್ಯಾರಂಟಿ ಯೋಜನೆಗಳ ಅನು ಷ್ಠಾನ ಸಮಿತಿಗಳ ಅಧ್ಯಕ್ಷರು, ಉಪಾಧ್ಯಕ್ಷರ ಗೌರವಧನ ಮತ್ತು ಸದಸ್ಯರ ಸಭಾ ಭತ್ಯೆಯನ್ನು ಬಿಡುಗಡೆ ಮಾಡುವಂತೆ ಆದೇಶ ಹೊರಡಿಸಿದ್ದು, ಮೂರು ತಿಂಗಳ ಅಡ್ವಾನ್ಸ್ ಹಣ ಬಿಡುಗಡೆ ಮಾಡಲು ಸೂಚನೆ ನೀಡಿದೆ. ಸರ್ಕಾರ ಸ್ಥಳೀಯ ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರನ್ನೇ ಅಧ್ಯಕ್ಷ, ಉಪಾಧ್ಯಕ್ಷ ಹಾಗೂ ಸದಸ್ಯರನ್ನಾಗಿ ನೇಮಕ ಮಾಡಿದೆ. ಈ ವಿಚಾರದ ಬಗ್ಗೆ ಕಳೆದ ಅಧಿವೇಶನದಲ್ಲಿ ಸರ್ಕಾರ ಹಾಗೂ ವಿಪಕ್ಷಗಳ ಮಧ್ಯೆ ಭಾರೀ ಜಟಾಪಟಿ ನಡೆದಿತ್ತು.

# ಶ್ರೀ ವಾದಿರಾಜರ ವಿರಚಿತ ಸ್ವಪ್ನಪದ ಪ್ರವಚನ

• ಉದಯವಾಹಿನಿ, ಬೆಂಗಳೂರು

ದೊಡ್ಡಬೊಮ್ಮಸಂದ್ರ ಪ್ರವಚನ ಬಳಗದ ವತಿಯಿಂದ ಜೂನ್ 1 ರಿಂದ 20ರ ವರೆಗೆ ಪ್ರತಿದಿನ ಸಂಜೆ 6-15ಕ್ಕೆ ಶ್ರೀ ಚಂದ್ರಶೇಖರ ಆಚಾರ್ಯರಿಂದ ಶ್ರೀ ವಾದಿರಾಜರ ವಿರಚಿತ ಸ್ವಪ್ನಪದ ವಿಷಯವಾಗಿ ಧಾರ್ಮಿಕ ಪ್ರವಚನ ಏರ್ಪಡಿಸಿದೆ. ಸ್ಥಳ : ಶ್ರೀ ರಾಘವೇಂದ್ರ ಸ್ವಾಮಿಗಳ ಮಠ, ದೊಡ್ಡಬೊಮ್ಮಸಂದ್ರ, ವಿದ್ಯಾರಣ್ಯಪುರ, ಬೆಂಗಳೂರು-560097

# ನಿವೃತ್ತ ಬ್ಯಾಂಕ್ ಉದ್ಯೋಗಿಗೆ ವಂಚನೆ

• ಉದಯವಾಹಿನಿ, ಬೆಂಗಳೂರು


ಉದಯವಾಹಿನಿ ಚಿತ್ರ

ಭಾರತೀಯ ರಿಸರ್ವ್ ಬ್ಯಾಂಕ್ ನಿಂದ ತಿರಸ್ಕರಿಸಲಾದ ಕರೆನ್ಸಿ ನೋಟುಗಳನ್ನು ರಿಯಾಯಿತಿ ದರದಲ್ಲಿ ನೀಡುವುದಾಗಿ ಭರವಸೆ ನೀಡಿ ನಿವೃತ್ತ ಬ್ಯಾಂಕ್ ಉದ್ಯೋಗಿಗೆ 15 ಲಕ್ಷ ರೂ. ವಂಚಿಸಿದ ಆರೋಪದ ಮೇಲೆ ಪೀಣ್ಯ ಪೊಲೀಸರು ಹೆಡ್ ಕಾನ್‌ಸ್ಟೆಬಲ್ ಮತ್ತು ಆತನ ಮೂವರು ಸಹಚರರನ್ನು ಬಂಧಿಸಿದ್ದಾರೆ.

ಪ್ರಮುಖ ಆರೋಪಿ ನಾಗರಾಜ್ ಚಿತ್ರದುರ್ಗ ಜಿಲ್ಲೆಯ ಹಿರಿಯೂರು ಪೊಲೀಸ್ ಠಾಣೆಯಲ್ಲಿ ಹೆಡ್ ಕಾನ್‌ಸ್ಟೆಬಲ್ ಆಗಿದ್ದಾನೆ. ಕಿರಣ್ ಕುಮಾರ್, ಗಜೇಂದ್ರ ಮತ್ತು ಪ್ರಭು ಎಲ್ಲರೂ ಚಿತ್ರದುರ್ಗದ ನಿವಾಸಿಗಳು. ಪೊಲೀಸರ ಪ್ರಕಾರ, ನಿವೃತ್ತ ಬ್ಯಾಂಕ್ ಉದ್ಯೋಗಿ ರಾಧಾ ಕೃಷ್ಣ ನಾಯಕ್ ಈ ಹಿಂದೆ ಕಿರಣ್ ಕುಮಾರ್ ಅವರ ಸಹೋದರಿಯ ನೆರೆಹೊರೆಯವರಾಗಿದ್ದರು.

ತನ್ನ ಸಹೋದರಿಯ ಮನೆಗೆ ಭೇಟಿ ನೀಡಿದಾಗ, ಕುಮಾರ್ ನಾಯಕ್ ಜೊತೆ ಸ್ನೇಹ ಬೆಳೆಸಿದರು. ತನ್ನ ಬಳಿ 50 ಲಕ್ಷ ರೂ. ಮೌಲ್ಯದ ತಿರಸ್ಕರಿಸಲಾದ ಆರ್‌ಬಿಐ ಕರೆನ್ಸಿ ನೋಟುಗಳನ್ನು ಹೊಂದಿರುವುದಾಗಿ ಹೇಳಿಕೊಂಡಿದ್ದ. 10 ಲಕ್ಷ ರೂ. ಈ ನೋಟುಗಳಿಗೆ ಬದಲಾಗಿ ಮಾನ್ಯವಾಗಿರುವ 5 ಲಕ್ಷ ರು ಹಣ ನೀಡುವಂತೆ ನಾಯಕ್ ಗೆ ಕಿರಣ್ ಕುಮಾರ್ ತಿಳಿಸಿದ್ದ, ಅದನ್ನು ನಂಬಿದ್ದ ನಾಯಕ್ ಹಂತ ಹಂತವಾಗಿ ಆತನಿಗೆ ಹಣ ನೀಡಿದರು. ಬದಲಿಗೆ ನೋಟುಗಳನ್ನು ತಲುಪಿಸದಿದ್ದಾಗ, ನಾಯಕ್ ಪೊಲೀಸ್ ದೂರು ದಾಖಲಿಸುವುದಾಗಿ ಬೆದರಿಕೆ ಹಾಕಿದರು. ಪೊಲೀಸರು ಕ್ರಮ ಕೈಗೊಳ್ಳುತ್ತಾರೆಂಬ ಭಯದಿಂದ, ಈ ಗ್ಯಾಂಗ್ ನಾಗರಾಜ್ ಸಹಾಯವನ್ನು ಕೋರಿತು, ಆಗ ನಾಗರಾಜ್ ಕುಮಾರ ನನ್ನು ಹಿರಿಯೂರು ಪೊಲೀಸರು ಅಕ್ರಮ ಕರೆನ್ಸಿ ಸಾಗಿಸಿದ್ದಕ್ಕಾಗಿ ಬಂಧಿಸಿದ್ದಾರೆ ಎಂದು ನಾಯಕ್ ಗೆ ಸುಳ್ಳು ಮಾಹಿತಿ ನೀಡಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ. ತನಿಖೆಯಲ್ಲಿ ಅವರ ಬಳಿ ಅಂತಹ ಯಾವುದೇ ತಿರಸ್ಕೃತ ಕರೆನ್ಸಿ ಇರಲಿಲ್ಲ ಮತ್ತು ಅವರು ನಾಯಕ್ ಗೆ ಸುಳ್ಳು ಹೇಳಿ ವಂಚಿಸಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ

# ಹೊಸ ಕಾರ್ಮಿಕ ಸಂಹಿತೆ ಜಾರಿಗೆ ತರಲು ಸರ್ಕಾರ ಬದ್ಧ

• ಉದಯವಾಹಿನಿ, ಬೆಂಗಳೂರು

ಹೊಸ ಕಾರ್ಮಿಕ ಸಂಹಿತೆ ಜಾರಿಗೆ ತರಲು ಕೇಂದ್ರ ಸರ್ಕಾರ ಬದ್ಧವಾಗಿದೆ ಎಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆಯವರು ಹೇಳಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾರ್ಮಿಕ ಇಲಾಖೆಯಲ್ಲಿ 29 ಲೇಬರ್ ಕಾಯ್ದೆಗಳಿವೆ. ಇವು ಬ್ರಿಟಿಷರ ಕಾಲದ ಕಾಯ್ದೆಗಳಾಗಿವೆ. ಹೀಗಾಗಿ ಈ ಕಾಯ್ದೆಗಳನ್ನು ತಿದ್ದುಪಡಿ ಮಾಡಿ ನಾಲ್ಕು ಕಾರ್ಮಿಕ ಕೋಡ್‌ಗಳಾಗಿ ಜಾರಿಗೊಳಿಸಲು ಕೇಂದ್ರ ಸರ್ಕಾರ ತೀರ್ಮಾನಿಸಿದೆ ಎಂದು ಹೇಳಿದರು.

ಈಗಾಗಲೇ ಬಹುತೇಕ ರಾಜ್ಯಗಳು ಸಕಾರಾತ್ಮಕ ಅಭಿಪ್ರಾಯ ತಿಳಿಸಿವೆ. ಕಾರ್ಮಿಕ ಯೂನಿಯನ್ ಗಳಲ್ಲಿ ಸಣ್ಣ ಪ್ರಮಾಣದ ಗೊಂದಲಗಳಿದ್ದು, ಚರ್ಚೆ ಮುಖಾಂತರ ಆ ಗೊಂದಲಗಳನ್ನು ನಿವಾರಿಸಿ ಈ ವರ್ಷದೊಳಗೆ ನಾಲ್ಕು ಕಾರ್ಮಿಕ ಕೋಡ್‌ಗಳನ್ನು ಸಂಸತ್‌ನಲ್ಲಿ ಮಂಡಿಸಿ ಜಾರಿಗೊಳಿಸಲಾಗುವುದು ಎಂದು ತಿಳಿಸಿದರು. ರಾಜ್ಯದ ಕಾರ್ಮಿಕ ಸಚಿವ ಸಂತೋಷ್ ಲಾಡ್ ಅವರು ನವದೆಹಲಿಯಲ್ಲಿ ನಡೆದ ಮೂರು ದಿನಗಳ ಪಾಲುದಾರರ ಸಭೆಯಲ್ಲಿ ಭಾಗವಹಿಸಿದ್ದರು. ಆದರೆ, ಎಂಎಸ್‌ಎಂಇ ಸಭೆಗಳಿಗೆ ಹಾಜರಾಗಲಿಲ್ಲ. ಇದು ಬೇಸರ ತರಿಸಿದೆ ಎಂದರು. ಜರ್ಮನಿಯಲ್ಲಿ ಉದ್ಯೋಗ ನೀಡುವುದಾಗಿ ಭರವಸೆ ನೀಡಿ ಥೈಲ್ಯಾಂಡ್‌ಗೆ ಕಳುಹಿಸಿದ ಹಿನ್ನೆಲೆಯಲ್ಲಿ ವಂಚನೆಗೊಳಗಾಗಿ ಆತ್ಮಹತ್ಯೆ ಮಾಡಿಕೊಂಡ ಸುಳ್ಯದ ಪಟ್ಟಣದ ಯುವಕನ ಪ್ರಕರಣ ಕುರಿತು ಪ್ರತಿಕ್ರಿಯಿಸಿ, ಯುವಕರು ಸರ್ಕಾರದ ಅಧಿಕೃತ ಪೋರ್ಟಲ್‌ನಲ್ಲಿ ನೋಂದಾಯಿಸಲಾದ ಕಂಪನಿಗಳಿಗೆ ಮಾತ್ರ ಅರ್ಜಿ ಸಲ್ಲಿಸುವಂತೆ ಸಲಹೆ ನೀಡಿದರು.

ಆಯುಷ್ಮಾನ್ ಆರೋಗ್ಯ ಕಾರ್ಡ್ ಕುರಿತು ಮಾತನಾಡಿ, ಆಯುಷ್ಮಾನ್ ಯೋಜನೆ ಯಲ್ಲಿರುವ ಎಲ್ಲಾ ಖಾಸಗಿ ಆಸ್ಪತ್ರೆಗಳಲ್ಲೂ ಇಎಸ್‌ಐಸಿ ಚಂದಾದಾರರು ನಗದುರಹಿತವಾಗಿ ಚಿಕಿತ್ಸೆ ಪಡೆಯಬಹುದು.

ಅದರ ವೆಚ್ಚವನ್ನು ಇಎಸ್‌ಐಸಿ ಭರಿಸಲಿದೆ. ಈ ಬಗ್ಗೆ ಶೀಘ್ರವೇ, ನಿಯಮಗಳಲ್ಲಿ ಬದಲಾವಣೆ ಮಾಡಿ, ಆದೇಶ ಹೊರಡಿಸಲಾಗುತ್ತದೆ. ದೊಡ್ಡಬಳ್ಳಾಪುರದಲ್ಲಿ 150 ಕೋಟಿ ರೂ. ಹೂಡಿಕೆ ಮಾಡಿ ಇಎಸ್‌ಐ ಆಸ್ಪತ್ರೆಯನ್ನು ಸ್ಥಾಪಿಸಿದ್ದೇವೆ. ಆದರೆ, ತಜ್ಞ ವೈದ್ಯರ ಕೊರತೆಯಿಂದಾಗಿ ರಾಜ್ಯ ಸರ್ಕಾರ ಅದನ್ನು ಸ್ವಾಧೀನಪಡಿಸಿಕೊಳ್ಳಲು ಸಿದ್ಧವಾಗಿಲ್ಲ ಎಂದು ಹೇಳಿದರು.


ಉದಯವಾಹಿನಿ ಚಿತ್ರ

**ದೇಶ ಸೇರಿದಂತೆ ವಿದೇಶಗಳ ಕಂಪನಿಗಳಿಗೆ ಕೌಶಲಯುತ ಉದ್ಯೋಗಿಗಳ ಅಗತ್ಯವಿದೆ. ಹೀಗಾಗಿ, ರಾಜ್ಯ ಸರ್ಕಾರ ಪೀಣ್ಯದಲ್ಲಿ ನೀಡಿರುವ ಭೂಮಿಯಲ್ಲಿ ಎನ್‌ಎಸ್‌ಐಸಿ ತಾಂತ್ರಿಕ ಸೇವಾ ಕೇಂದ್ರ (ಎನ್‌ಟಿಎಸ್‌ಸಿ) ಸ್ಥಾಪಿಸಲಾಗುತ್ತದೆ. ಮುಂದಿನ ತಲೆಮಾರಿನ ಎಐ, ಏರೋನಾಟಿಕ್ಸ್ ಸೇರಿದಂತೆ ಅತ್ಯುನ್ನತ ತಂತ್ರಜ್ಞಾನದ ಕೌಶಲಯುತ ತರಬೇತಿ ನೀಡಲಾಗುತ್ತದೆ. ದೆಹಲಿಯಲ್ಲಿರುವ ಕೇಂದ್ರಕ್ಕಿಂತ ಉನ್ನತಮಟ್ಟದಲ್ಲಿ ಈ ಕೇಂದ್ರ ನಿರ್ಮಾಣವಾಗಲಿದೆ ಎಂದು ತಿಳಿಸಿದರು.**

# ರಾಜ್ಯದ 49 ತಾಲ್ಲೂಕುಗಳಲ್ಲಿ ಪ್ರಜಾಸೌಧ ಕಟ್ಟಡ ನಿರ್ಮಾಣ

• ಉದಯವಾಹಿನಿ, ಬೆಂಗಳೂರು


ಉದಯವಾಹಿನಿ ಚಿತ್ರ

**ಮಂಜೂರಾತಿ ಪತ್ರ ವಿತರಿಸಿದ ಸಿಎಂ**

ಸರ್ಕಾರದ ವಿವಿಧ ಇಲಾಖೆಗಳ ಸೇವೆಗಳನ್ನು ಒಂದೇ ಸೂರಿನಡಿ ಲಭ್ಯವಾಗಿಸುವ ಉದ್ದೇಶದಿಂದ ರಾಜ್ಯದ 49 ತಾಲ್ಲೂಕು ಕೇಂದ್ರಗಳು ಹಾಗೂ ಹಲವು ಜಿಲ್ಲಾ ಕೇಂದ್ರಗಳಲ್ಲಿ ನೂತನ ಪ್ರಜಾಸೌಧವನ್ನು ಸ್ಥಾಪಿಸಲು ರಾಜ್ಯ ಸರ್ಕಾರ ಮುಂದಾಗಿದ್ದು, ಈ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಸಂಬಂಧಪಟ್ಟ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ಶುಕ್ರವಾರ ಮಂಜೂರಾತಿ ಪತ್ರವನ್ನು ಹಸ್ತಾಂತರಿಸಿದರು.

ಕಲಬುರಗಿ ಜಿಲ್ಲೆಯ ಕಾಳಗಿ, ಯಡ್ರಾಮಿ, ಕಮಲಾಪುರ, ಶಹಾಬಾದ್ ತಾಲ್ಲೂಕು ಆಡಳಿತಗಳಿಗೆ ಸುಸಜ್ಜಿತ, ಸುವ್ಯವಸ್ಥಿತವಾದ ಪ್ರಜಾಸೌಧ ನಿರ್ಮಾಣಕ್ಕೆ ಆಡಳಿತಾತ್ಮಕ ಮಂಜೂರಾತಿ ಪತ್ರವನ್ನು ಸಿದ್ಧರಾಮಯ್ಯ ಅವರು ಜಿಲ್ಲಾಧಿಕಾರಿಗಳು ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳ ಸಭೆಯಲ್ಲಿ ಜಿಲ್ಲಾಧಿಕಾರಿ ಬಿ. ಫೌಜಿಯಾ ತರನ್ನುಮ್ ಅವರಿಗೆ ಹಸ್ತಾಂತರಿಸಿದರು. ಜಿಲ್ಲೆಯ ತಾಲ್ಲೂಕು ಆಡಳಿತಗಳ ಅನುಕೂಲಕ್ಕೆ ಮಹತ್ವದ ಪ್ರಜಾಸೌಧ ಕಟ್ಟಡಗಳನ್ನು ಒದಗಿಸಿದ ಮುಖ್ಯಮಂತ್ರಿಗಳಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಒಂದೇ ಸೂರಿನ ಅಡಿಯಲ್ಲಿ ಎಲ್ಲಾ ಸರ್ಕಾರಿ ಸೇವೆಗಳನ್ನು ಒದಗಿಸುವಂತಹ ಸುಸಜ್ಜಿತ ಕಟ್ಟಡಗಳು ದೊರಕಿದಾಗ ಜನತೆಗೆ ಹೆಚ್ಚು ಅನುಕೂಲವಾಗಲಿದೆ ಎಂದು ಜಿಲ್ಲಾಧಿಕಾರಿಗಳು ಹೇಳಿದರು. ಈ ಸಂದರ್ಭದಲ್ಲಿ ರಾಜ್ಯದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಚಿವರಾದ ಕೆ.ಜೆ. ಜಾರ್ಜ್, ಪ್ರಿಯಾಂಕ್ ಖರ್ಗೆ ಮುಂತಾದವರು ಉಪಸ್ಥಿತರಿದ್ದರು. ನೂತನ ತಾಲ್ಲೂಕುಗಳ ಘೋಷಣೆಯಿಂದಾಗಿ ತಾಲ್ಲೂಕು ಮಟ್ಟದ ಕಚೇರಿಗಳು ಕಾರ್ಯ ನಿರ್ವಹಿಸಲು ಕಾಳಗಿ, ಯಡ್ರಾಮಿ, ಕಮಲಾಪುರ, ಶಹಾಬಾದ್‌ಗಳಲ್ಲಿ ಸಾಕಷ್ಟು ಸಮಸ್ಯೆ ಆಗಿತ್ತು. ಹೀಗಾಗಿ ಮಂಜೂರಾತಿಯಿಂದಾಗಿ ಪ್ರಜಾಸೌಧಗಳು ಸರ್ಕಾರಿ ಕಚೇರಿಗಳ ಸಮಸ್ಯೆಗಳು ನಿವಾರಣೆಯಾಗಲಿದೆ.

# ದಿವ್ಯ ದರ್ಶನ ವಿಶೇಷ ಟೂರ್ ಪ್ಯಾಕೇಜ್ ಆರಂಭ

• ಉದಯವಾಹಿನಿ, ಬೆಂಗಳೂರು


ಉದಯವಾಹಿನಿ ಚಿತ್ರ

ಬಿಎಂಟಿಸಿಯ ವಿಶೇಷ ಟೂರ್ ಪ್ಯಾಕೇಜ್ ದಿವ್ಯ ದರ್ಶನ ಆರಂಭವಾಗಿದೆ. ಈ ವಿಶೇಷ ಪ್ಯಾಕೇಜ್‌ಗೆ ಮೊದಲ ದಿನವೇ ಬೆಂಗಳೂರಿಗರಿಂದ ಭರ್ಜರಿ ರೆಸ್ಪಾನ್ಸ್ ದೊರೆತ್ತಿದ್ದು, ಬಿಎಂಟಿಸಿಯ 3 ಎಸಿ ಬಸ್‌ಗಳಲ್ಲಿ 200ಕ್ಕೂ ಹೆಚ್ಚು ಜನ ಬೆಂಗಳೂರಿನ ಪ್ರಸಿದ್ಧ ದೇವಾಲಯಗಳ ದರ್ಶನ ಪಡೆಯುತ್ತಿದ್ದಾರೆ.

ಬೆಳಗ್ಗೆ 8.30ಕ್ಕೆ ಮೆಜೆಸ್ಟಿಕ್‌ನಿಂದ ಬಸ್ ಹೊರಟಿದ್ದು, ಬಸ್‌ಗಳ ಸಿಬ್ಬಂದಿ, ಪ್ರಯಾಣಿಕರಿಗೆ ನಗರದ 8 ದೇವಾಲಯಗಳಲ್ಲಿ ನೇರ ದರ್ಶನ ಮಾಡಿಸಲಿದ್ದಾರೆ. ಪ್ರಮುಖವಾಗಿ ಗಾಳಿ ಆಂಜನೇಯ ಸ್ವಾಮಿ ದೇವಸ್ಥಾನ, ರಾಜರಾಜೇಶ್ವರಿ ದೇವಸ್ಥಾನ, ಶೃಂಗಗಿರಿ ಷಣ್ಮುಖ ದೇವಸ್ಥಾನ, ಕುರುಮಾರಿ ಅಮ್ಮ ದೇವಾಲಯ, ಓಂಕಾರ ಹಿಲ್ಸ್, ಇಸ್ಕಾನ್ ವೈಕುಂಠ ದೇವಾಲಯ, ಆರ್ಟ್ ಆಫ್ ಲಿವಿಂಗ್, ಬನಶಂಕರಿ ದೇವಾಲಯದ ವೀಕ್ಷಣೆ ಮಾಡಬಹುದಾಗಿದೆ. ಪ್ರತೀ ವಾರಾಂತ್ಯದಲ್ಲಿ ಹಾಗೂ ರಜಾ ದಿನಗಳಲ್ಲಿ ಬಿಎಂಟಿಸಿಯಿಂದ ಟೆಂಪಲ್ ಟೂರ್ ನಡೆಯಲಿದ್ದು, ವಯಸ್ಕರಿಗೆ 450 ರೂ., ಮಕ್ಕಳಿಗೆ 350 ರೂ. ಟಿಕೆಟ್ ದರವನ್ನು ನಿಗದಿ ಮಾಡಲಾಗಿದೆ.

ಭಾನುವಾರ ಟೂರ್ ಪ್ಯಾಕೇಜ್‌ನ ಸೀಟ್‌ಗಳು ಸಹ ಬಹುತೇಕ ಬುಕ್ ಆಗಿವೆ. ಶನಿವಾರ ಬಿಎಂಟಿಸಿಯ ದಿವ್ಯದರ್ಶನ ಬಸ್‌ನಲ್ಲಿ ಪ್ರಯಾಣಿಸಿದ ಪ್ರಯಾಣಿಕರು ಟೂರ್ ಪ್ಯಾಕೇಜ್ ಬಗ್ಗೆ ಸಂತಸ ವ್ಯಕ್ತಪಡಿಸಿದ್ದಾರೆ

# ಜನೌಷಧಿ ಕೇಂದ್ರಗಳ ಮುಚ್ಚಲು ರಾಜ್ಯ ಸರ್ಕಾರ ಮುಂದು: ಬಿಜೆಪಿ ಆರೋಪ



ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ಮೆಡಿಸಿನ್ ಮಾಫಿಯಾಗೆ ಮಣಿದು ಬಡವರ ಪಾಲಿನ ಸಂಜೀವಿನಿಯಾದ ಜನೌಷಧಿಗೆ ಕೇಂದ್ರಗಳ ಮುಚ್ಚಲು ರಾಜ್ಯ ಸರ್ಕಾರ ಮುಂದಾಗಿದೆ ಎಂದು ಬಿಜೆಪಿ ಕಿಡಿಕಾರಿದೆ. ಜನೌಷಧಿ ಕೇಂದ್ರ ಮುಚ್ಚಲು ರಾಜ್ಯ ಸರ್ಕಾರ ನೋಟಿಸ್ ನೀಡಿರುವುದನ್ನು ಖಂಡಿಸಿ ಕೃಷ್ಣರಾಜ ಶಾಸಕ ಟಿ ಎಸ್ ಶ್ರೀವತ್ಸ ಮತ್ತು ಬಿಜೆಪಿ ನಗರಾಧ್ಯಕ್ಷ ಎಲ್ ನಾಗೇಂದ್ರ ನೇತೃತ್ವದಲ್ಲಿ ಕೆ.ಆರ್.ಆಸ್ಪತ್ರೆ ಆವರಣದಲ್ಲಿ ನಗರ ಬಿಜೆಪಿ ಘಟಕದ ಮುಖಂಡರು ಹಾಗೂ ಕಾರ್ಯಕರ್ತರು ಪ್ರತಿಭಟಿಸಿದರು. ಆಸ್ಪತ್ರೆಯ ಮುಂಭಾಗ ಆವರಿಸಿದ ಪ್ರತಿಭಟನಕಾರರು, ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು. ಸರ್ಕಾರ ಆದೇಶವನ್ನು ಈ ಕೂಡಲೇ ಹಿಂಪಡೆಯಬೇಕೆಂದು ಒತ್ತಾಯಿಸಿದರು.

ಜನೌಷಧಿ ಕೇಂದ್ರ ಮುಚ್ಚುವ ಮೂಲಕ ಮಧ್ಯಮ ವರ್ಗಕ್ಕೆ ತೊಂದರೆ ನೀಡಲು ಸರ್ಕಾರ ಮುಂದಾಗಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿಯವರ ಫೋಟೊ ಇರುವ ಕಾರಣಕ್ಕೆ ಜನೌಷಧಿ ಕೇಂದ್ರಗಳನ್ನು ಮುಚ್ಚುತ್ತಿದ್ದಾರೆ. ಹಾಗಿದ್ದರೆ ಇಂದಿರಾ ಕ್ಯಾಂಟೀನ್, ಬಸ್‌ಗಳಲ್ಲಿ ನಿಮ್ಮ ಪಕ್ಷದವರ ಫೋಟೋ ಯಾಕೆ ಹಾಕಿದ್ದೀರಿ, ಪ್ರಧಾನ ಮಂತ್ರಿ ಫೋಟೋ ಬಂದಿದ್ದಕ್ಕೆ ರಾಜಕಾರಣ ಮಾಡುವ ಹಾಗಿದ್ದರೆ ಯಾರೊಬ್ಬರ ಫೋಟೊವನ್ನೂ ಪ್ರದರ್ಶಿಸಬಾರದೆಂಬ ನಿರ್ಣಯ ಮಾಡಲಿ ಶಾಸಕ ಟಿ.ಎಸ್. ಶ್ರೀವತ್ಸ ಅವರು ಆಗ್ರಹಿಸಿದರು. ಸರ್ಕಾರಿ ಆಸ್ಪತ್ರೆಗಳಿಂದ ಜನೌಷಧಿ ಕೇಂದ್ರಗಳನ್ನು ಮುಚ್ಚಲು ಯೋಜಿಸುತ್ತಿರುವ ರಾಜ್ಯ ಸರ್ಕಾರವು ರೋಗಿಗಳಿಗೆ ಉಚಿತ ಔಷಧಿಗಳನ್ನು ನೀಡುವಲ್ಲಿ ವಿಫಲವಾಗಿದೆ. ಸರ್ಕಾರ ಸೇಡಿನ ರಾಜಕೀಯವನ್ನು ತ್ಯಜಿಸಿ ಬಡವರ ಹಿತಾಸಕ್ತಿಗಾಗಿ ಕೆಲಸ ಮಾಡಬೇಕು. ಈ ಸರ್ಕಾರಿ ಆದೇಶದ ಹಿಂದೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್ ಅವರ ಕೈವಾಡವಿದೆ. ಅವರಿಗೆ ಬಡವರ ಬಗ್ಗೆ ಯಾವುದೇ ಕಾಳಜಿ ಇಲ್ಲ ಎಂದು ಕಿಡಿಕಾರಿದರು. ನಗರ ಘಟಕದ ಅಧ್ಯಕ್ಷ ಎಲ್.ನಾಗೇಂದ್ರ ಮಾತನಾಡಿ, ಕಾಂಗ್ರೆಸ್ ಸರ್ಕಾರವು ದಿನನಿತ್ಯ ಉಪಯೋಗಿಸುವ ವಸ್ತುಗಳಿಗೆ ಬೆಲೆಯೇರಿಕೆ ಮಾಡಿದೆ. ಈಗ ಖಾಸಗಿ ಮೆಡಿಕಲ್ ಮಾಫಿಯಾದೊಂದಿಗೆ ಹೊಂದಾಣಿಕೆ ಮಾಡಿಕೊಂಡು ಜನೌಷಧಿ ಕೇಂದ್ರಗಳನ್ನು ಮುಚ್ಚಲು ಹೊರಟಿದೆ. ಜನೌಷಧಿ ಕೇಂದ್ರಗಳಲ್ಲಿ 800 ಕ್ಕೂ ಹೆಚ್ಚು ಔಷಧಿಗಳು ಲಭ್ಯವಿದೆ. ಬಡವರ ಹಿತದೃಷ್ಟಿಯಿಂದ ಸರ್ಕಾರ ತನ್ನ ನಿರ್ಧಾರವನ್ನು ಮರುಪರಿಶೀಲಿಸದಿದ್ದರೆ ಬಿಜೆಪಿ ಪ್ರತಿಭಟನೆಯನ್ನು ತೀವ್ರಗೊಳಿಸಲಿದೆ ಎಂದು ಎಚ್ಚರಿಸಿದರು.

# ಮೇಲ್ಸೇತುವೆ ಕಾಮಗಾರಿ ತ್ವರಿತಗತಿಯಲ್ಲಿ ಪೂರ್ಣಗೊಳಿಸಿ

## ಸೆಂಟ್ ಜಾನ್ಸ್ ಬಳಿ ರಾಂಪ್ ನಿರ್ಮಾಣಕ್ಕೆ ಅಗತ್ಯವಿರುವ ಭೂಸ್ವಾಧೀನಕ್ಕೆ ಸಂಬಂಧಿಸಿದವರೊಂದಿಗೆ ಸಭೆ

• ಉದಯವಾಹಿನಿ, ಬೆಂಗಳೂರು


ಉದಯವಾಹಿನಿ ಚಿತ್ರ

**ಆಯುಕ್ತ ಮಹೇಶ್ವರ್ ರಾವ್ ಅವರು ಸೂಚನೆ**

ಈಜೀಪುರ ಮೇಲ್ಸೇತುವೆ ನಿರ್ಮಾಣಕ್ಕೆ ಅಡ್ಡಿಯಾಗಿರುವ ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಳಿಸಿ ತ್ವರಿತಗತಿಯಲ್ಲಿ ಕಾಮಗಾರಿ ಪೂರ್ಣಗೊಳಿಸುವಂತೆ ಅಧಿಕಾರಿಗಳಿಗೆ ಬಿಬಿಎಂಪಿ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅವರು ಸೂಚನೆ ನೀಡಿದ್ದಾರೆ.

ಡೈರಿ ವೃತ್ತದಿಂದ ಕಾಲ್ನಡಿಗೆ ಮೂಲಕ ತೆರಳಿ ಪರಿಶೀಲನೆ ನಡೆಸಿದ ಅವರು, ಈಜೀಪುರ ಮೇಲೇತುವೆ ಕಾಮಗಾರಿಗೆ ವೇಗ ನೀಡಿ ತ್ವರಿತವಾಗಿ ಪೂರ್ಣಗೊಳಿಸಿ ಸಾರ್ವಜನಿಕರ ಸೇವೆಗೆ ಅನುವು ಮಾಡಿಕೊಡಲು ಗುತ್ತಿಗೆದಾರರಿಗೆ ಸೂಚಿಸಿದರು. ಸೆಂಟ್ ಜಾನ್ಸ್ ಬಳಿ ರಾಂಪ್ ನಿರ್ಮಾಣಕ್ಕೆ ಅಗತ್ಯವಿರುವ ಭೂಸ್ವಾಧೀನಕ್ಕೆ ಸಂಬಂಧಿಸಿದವರೊಂದಿಗೆ ಸಭೆ ನಡೆಸಿ ಕೂಡಲೇ ಕಾಮಗಾರಿ ಆರಂಭಿಸಿ ಎಂದು ಅಧಿಕಾರಿಗಳಿಗೆ ತಿಳಿಸಿದರು.

ಇದೇ ವೇಳೆ ಕಾಮಗಾರಿ ಸ್ಥಳದ ರಸ್ತೆಯನ್ನು ಸರಿಯಾಗಿ ನಿರ್ವಹಣೆ ಮಾಡಬೇಕು. ರಸ್ತೆಯ ಎರಡೂ ಬದಿಯ ಪಾದಚಾರಿ ಮಾರ್ಗಗಳ ದುರಸ್ತಿ, ಮಳೆ ನೀರು ಚರಂಡಿಗಳಿಗೆ ಸರಾಗವಾಗಿ ಹರಿದು ಹೋಗುವಂತೆ ವ್ಯವಸ್ಥೆ ಮಾಡಲು ಗುತ್ತಿಗೆದಾರರಿಗೆ ಸೂಚಿಸಿದರು. ಇದೇ ವೇಳೆ ಮಡಿವಾಳ ಬಸ್ ಪಿಕ್-ಅಪ್ ಪಾಯಿಂಟ್ ಬಳಿಯ ರಸ್ತೆಬದಿಯಲ್ಲಿ, ಹೆಚ್ಚಿನ ಪ್ರಮಾಣದಲ್ಲಿ ಕಸ ಸುರಿಯಲಾಗುತ್ತಿದ್ದು, ಈ ಪ್ರದೇಶದ ಪೌರಕಾರ್ಮಿಕರು ಪ್ರತಿದಿನ ಬೆಳಿಗ್ಗೆ 6 ಗಂಟೆಯಿಂದ ಸ್ವಚ್ಛಗೊಳಿಸಲು ಪ್ರಾರಂಭಿಸಬೇಕು ಎಂದು ಆದೇಶಿಸಿದರು. ಇದು ಹೆಚ್ಚು ವಾಹನ ದಟ್ಟಣೆ ಇರುವ ಪ್ರದೇಶವಾಗಿರುವುದರಿಂದ, ಅನೇಕ ಬಸ್‌ಗಳು ನಿಲ್ಲುವುದರಿಂದ, ನಿರಂತರ ಸ್ವಚ್ಛತೆ ಮತ್ತು ನೈರ್ಮಲ್ಯವನ್ನು ಖಚಿತಪಡಿಸಿಕೊಳ್ಳಬೇಕು ಎಂದು ಹೇಳಿದರು. ಬಳಿಕ ಮಡಿವಾಳ ಅಂಡರ್‌ಪಾಸ್‌ನ ಮೇಲಿನ ಜಂಕ್ಷನ್‌ನಲ್ಲಿ, ಪಾದಚಾರಿ ಮಾರ್ಗಗಳು ಮತ್ತು ರಸ್ತೆ ಮೂಲಸೌಕರ್ಯಗಳನ್ನು ನವೀಕರಿಸುವುದು ಸೇರಿದಂತೆ ಸಮಗ್ರ ಅಭಿವೃದ್ಧಿಯನ್ನು ಕೈಗೊಳ್ಳಲು ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಂಕ್ಷನ್‌ನಲ್ಲಿರುವ ಪೊಲೀಸ್ ಹೊರಠಾಣೆ ಪಾದಚಾರಿಗಳ ಸಂಚಾರಕ್ಕೆ ಅಡ್ಡಿಯಾಗುತ್ತಿದೆ ಎಂದು ವರದಿಯಾಗಿದೆ ಇದನ್ನು ತಕ್ಷಣವೇ ಸರಿಪಡಿಸಲು ಕ್ರಮ ಕೈಗೊಳ್ಳಬೇಕು ಎಂದು ಸೂಚಿಸಿದರು.

ಈ ವೇಳೆ ವಲಯ ಆಯುಕ್ತರಾದ ದಿಗ್ವಿಜಯ್ ಬೋಡ್ಕೆ, ಮುಖ್ಯ ಎಂಜಿನಿಯರ್‌ಗಳಾದ ಡಾ. ರಾಘವೇಂದ್ರ ಪ್ರಸಾದ್, ರಾಜೇಶ್ ಮತ್ತು ಇತರ ಕಾರ್ಯನಿರ್ವಾಹಕ ಎಂಜಿನಿಯರ್‌ಗಳು ಮತ್ತು ಸಂಬಂಧಪಟ್ಟ ಅಧಿಕಾರಿಗಳು ಉಪಸ್ಥಿತರಿದ್ದರು.

**ಬಳಿಕ ಆಯುಕ್ತರು ಅಧಿಕಾರಿಗಳೊಂದಿಗೆ, ಡಬಲ್ ರಸ್ತೆಯ ಡೈರಿ ಸರ್ಕಲ್ ಬಳಿಯ ಕ್ರೈಸ್ಟ್ ಕಾಲೇಜಿನಿಂದ ಸೇಂಟ್ ಜಾನ್ಸ್ ಕಾಲೇಜು ಜಂಕ್ಷನ್, ಮಡಿವಾಳ ಅಂಡರ್‌ಪಾಸ್, ಕೋರಮಂಗಲ 100 ಅಡಿ ರಸ್ತೆ, ಕೇಂದ್ರೀಯ ಸದನ, ಈಜಿಪುರ ಫ್ಲೈಓವರ್ ರಸ್ತೆ ಮತ್ತು ಸೋನಿ ಜಂಕ್ಷನ್ ವರೆಗೆ ಪರಿಶೀಲನೆ ನಡೆಸಿದರು. ರಸ್ತೆಗಳು, ಪಾದಚಾರಿ ಮಾರ್ಗಗಳ ಸ್ಥಿತಿಯನ್ನು ಪರಿಶೀಲಿಸಿದರು. ಬಳಿಕ ಸೂಕ್ತ ನಿರ್ವಹಣೆ ಮತ್ತು ಸುಧಾರಿತ ಮೂಲಸೌಕರ್ಯಗಳನ್ನು ಖಚಿತಪಡಿಸಿಕೊಳ್ಳಲು ಅಧಿಕಾರಿಗಳಿಗೆ ಸೂಚನೆ ನೀಡಿದರು.**

# ಭ್ರಷ್ಟ ಅಧಿಕಾರಿಗಳ ಬೇಟೆ: ಹಲವು ಜಿಲ್ಲೆಗಳಲ್ಲಿ ಲೋಕಾಯುಕ್ತ ದಾಳಿ


• ಉದಯವಾಹಿನಿ, ಬೆಂಗಳೂರು

ರಾಜ್ಯದಲ್ಲಿ ಭ್ರಷ್ಟ ಅಧಿಕಾರಿಗಳ ವಿರುದ್ಧ ಲೋಕಾಯುಕ್ತ ಪೊಲೀಸರ ದಾಳಿ ಮುಂದುವರಿದಿದೆ. ಶನಿವಾರ ಬೆಳ್ಳಂಬೆಳಗ್ಗೆ ರಾಜ್ಯದ ಹಲವು ಕಡೆ ಲೋಕಾಯುಕ್ತ ಅಧಿಕಾರಿಗಳು ದಾಳಿ ನಡೆಸಿ ದಾಖಲೆಗಳ ಪರಿಶೀಲನೆ ನಡೆಸುತ್ತಿದ್ದಾರೆ. ಬಾಗಲಕೋಟೆ, ಗದಗದ ಹುನಗುಂದ, ಹಾವೇರಿ ಸೇರಿ ಹಲವು ಕಡೆ ಲೋಕಾಯುಕ್ತ ಅಧಿಕಾರಿಗಳು ಬೆಳಗ್ಗೆಯೇ ದಾಳಿ ನಡೆಸಿ ಪರಿಶೀಲನೆ ನಡೆಸುತ್ತಿದ್ದಾರೆ. ಗದಗ ನಿರ್ಮಿತಿ ಕೇಂದ್ರ ಯೋಜನಾ ನಿರ್ದೇಶಕ ಗಂಗಾಧರ್ ಶಿರೋಳ ಅವರ ಮನೆ, ಕಚೇರಿ ಸೇರಿ 6 ಕಡೆ ಲೋಕಾಯುಕ್ತ ಅಧಿಕಾರಿಗಳು ದಾಳಿ ನಡೆಸಿದ್ದಾರೆ. ಗಂಗಾಧರ್ ಮನೆ, ಕಚೇರಿಗಳ ಮೇಲೆ ಅವರ ಅಳಿಯ, ಭಾವನ ಮನೆ ಸೇರಿ 6 ಕಡೆ ಲೋಕಾಯುಕ್ತ ಅಧಿಕಾರಿಗಳು ದಾಳಿ ನಡೆಸಿದ್ದಾರೆ. ಲೋಕಾಯುಕ್ತ ಎಸ್ ಪಿ ಹಣಮಂತರಾಯ ನೇತೃತ್ವದಲ್ಲಿ ದಾಳಿ ನಡೆದಿದೆ. ಬಳ್ಳಾರಿ ಜಿಲ್ಲೆ ಹೂವಿನಹಡಗಲಿ, ಹಾವೇರಿ ಜಿಲ್ಲೆಯಲ್ಲಿ ಕೂಡ ಲೋಕಾಯುಕ್ತ ದಾಳಿ ನಡೆದಿದೆ.

## ಚಿತ್ರನಗರಿಗಾಗಿ ಸರ್ಕಾರದಿಂದ ಭೂಸ್ವಾಧೀನ – ಸೂಕ್ತ ಪರಿಹಾರಕ್ಕೆ ಒತ್ತಾಯಿಸಿ ರೈತರ ಪ್ರತಿಭಟನೆ

# ಅರ್ಹ ರೈತರಿಗೆ ಈವರೆಗೂ ಪರಿಹಾರ ನೀಡದೆ ವಂಚನೆ

• ಉದಯವಾಹಿನಿ, ನಂಜನಗೂಡು



ತಾಲ್ಲೂಕಿನ ಇಮ್ಮಾವು ಗ್ರಾಮದಲ್ಲಿ ಚಿತ್ರನಗರಿ ನಿರ್ಮಾಣ ಮಾಡುವ ಸಲುವಾಗಿ ರಾಜ್ಯ ಸರಕಾರ ಸ್ವಾಧೀನ ಪಡಿಸಿಕೊಂಡಿರುವ ರೈತರ ಭೂಮಿಗೆ ಪರಿಹಾರ ನೀಡುವಂತೆ ಒತ್ತಾಯಿಸಿ ರಾಜ್ಯ ರೈತ ಸಂಘದ ಕಾರ್ಯ ಕರ್ತರು ಇಮ್ಮಾವು ಗ್ರಾಮದಲ್ಲಿ ಪ್ರತಿಭಟನೆ ನಡೆಸಿದರು. ತಾಲ್ಲೂಕಿನ ಇಮ್ಮಾವು ಗ್ರಾಮದ ಹೊರ ವಲಯದ ಕೈಗಾರಿಕಾ ಪ್ರದೇಶಕ್ಕೆ ಹೊಂದಿ ಕೊಂಡಿರುವ ಪ್ರದೇಶದಲ್ಲಿ ಚಿತ್ರನಗರಿ ನಿರ್ಮಾಣಕ್ಕಾಗಿ ಮೀಸಲಿಟ್ಟಿರುವ ಜಾಗದಲ್ಲಿ ಶನಿವಾರ ಬೆಳಗ್ಗೆ ಸಂಘಟಿತರಾದ ನೂರಕ್ಕೂ ಹೆಚ್ಚು ರೈತರು ಪರಿಹಾರಕ್ಕಾಗಿ ಒತ್ತಾಯಿಸಿ ಘೋಷಣೆ ಕೂಗಿದರು.

ರೈತ ಸಂಘದ ಜಿಲ್ಲಾಕಾರ್ಯದರ್ಶಿ ಹೊಸಕೋಟೆ ಬಸವರಾಜು ಮಾತನಾಡಿ, 2008ರಲ್ಲಿ ಇಮ್ಮಾವು ಗ್ರಾಮದ ಒಂದು ಸಾವಿರಕ್ಕೂ ಹೆಚ್ಚು ಎಕರೆ ಭೂ ಪ್ರದೇಶವನ್ನು ವಶಪಡಿಸಿಕೊಂಡಿದ್ದು, ಇದರಲ್ಲಿ 500 ಎಕರೆಗೂ ಹೆಚ್ಚು ಪ್ರದೇಶ ಖರಾಬು ಭೂಮಿಯಾಗಿರುತ್ತದೆ. ಇತ್ತೀಚೆಗೆ 2024ರ ಸೆ. 19ರಂದು ಬೆಂಗಳೂರಿನಲ್ಲಿ ಸಭೆ ನಡೆಸಿರುವ ಕೈಗಾರಿಕಾ ಮಂಡಳಿಯವರು ಸರ್ವೆ ನಂಬರ್ 376ರಿಂದ 525ರಲ್ಲಿ ಕೃಷಿ ಚಟುವಟಿಕೆ ನಡೆಸುತ್ತಿದ್ದ ಅರ್ಹ ರೈತರಿಗೆ 4 ಲಕ್ಷ ರೂ.ಗಳ ಪರಿಹಾರ ನೀಡುವಂತೆ ಸೂಚಿಸಲಾಗಿತ್ತು.

ಆದರೆ ಈ ಆದೇಶವನ್ನು ಬಳಸಿಕೊಂಡು ರಾಜಕೀಯ ಪ್ರಭಾವ ಬೀರಿರುವ ಹಲವು ಮಂದಿ ಹೊರ ಜಿಲ್ಲೆಗಳವರೂ ಸೇರಿದಂತೆ ರಾಜಕೀಯ ಪಕ್ಷಗಳ ಕಾರ್ಯಕರ್ತರಿಗೆ ಪರಿಹಾರ ನೀಡಲಾಗಿದ್ದು, ಸ್ಥಳೀಯರಾದ ಅರ್ಹ ರೈತರಿಗೆ ಈವರೆಗೂ ಪರಿಹಾರ ನೀಡದೆ ವಂಚಿಸಲಾಗಿದೆ ಎಂದರು.

ಹೀಗಾಗಿ ಸರಕಾರದಿಂದ ಪರಿಹಾರ ನೀಡಲಾಗಿರುವ ರೈತರ ಪಟ್ಟಿಯನ್ನು ಜಿಲ್ಲಾಡಳಿತ ತಕ್ಷಣ ಬಿಡುಗಡೆ ಮಾಡಬೇಕು. ಜತೆಗೆ ರೈತರಿಗೆ ಪರಿಹಾರ ವಿತರಣೆ ಹೆಸರಿನಲ್ಲಿ ಅಧಿಕಾರಿಗಳು ಅಕ್ರಮ ನಡೆಸಿದ್ದು, ಈ ಬಗ್ಗೆ ಉನ್ನತ ಮಟ್ಟದ ತನಿಖೆ ನಡೆಸಿ ತಪ್ಪಿತಸ್ಥರಿಗೆ ಶಿಕ್ಷೆ ನೀಡಲು ಕ್ರಮ ಕೈಗೊಳ್ಳಬೇಕು, ಇಲ್ಲವಾದಲ್ಲಿ ಮುಂಬರುವ ದಿನಗಳಲ್ಲಿ ಸ್ಥಳೀಯ ರೈತರನ್ನು ಸಂಘಟಿಸಿ ಹೋರಾಟ ತೀವ್ರಗೊಳಿಸಲಾಗುವುದು ಎಂದು ಎಚ್ಚರಿಸಿದರು. ಬಳಿಕ ಸ್ಥಳಕ್ಕಾಗಮಿಸಿದ ತಹಶೀಲ್ದಾರ್‌ಗೆ ಮನವಿ ಪತ್ರ ನೀಡಿ ಪ್ರತಿಭಟನೆ ಅಂತ್ಯಗೊಳಿಸಲಾಯಿತು. ರೈತ ಸಂಘದ ತಾಲ್ಲೂಕು ಅಧ್ಯಕ್ಷ ಶಿರಮಳ್ಳಿ ಸಿದ್ದಪ್ಪ, ಕಾರ್ಯದರ್ಶಿ ಹೆಜ್ಜಿಗೆ ಪ್ರಕಾಶ್, ವೆಂಕಟೇಗೌಡ, ಶ್ರೀಕಂಠ, ರವಿ, ಬಸವರಾಜು, ಸ್ವಾಮಿ ಇನ್ನಿತರರಿದ್ದರು.

### ಸುತ್ತಲಿನ ಜಿಲ್ಲೆಗಳಲ್ಲೂ ಪ್ರವಾಸೋದ್ಯಮ ಬೂಸ್ಟ್

ಕನ್ನಡ ಚಿತ್ರೋದ್ಯಮಕ್ಕೊಂದು ಚಿತ್ರನಗರಿಯನ್ನು ಕಟ್ಟಿಕೊಡುವಂತೆ ಕನ್ನಡ ಚಿತ್ರರಂಗ ಹಲವಾರು ವರ್ಷಗಳಿಂದ ಮಾಡುತ್ತಿದ್ದ ಮನವಿಗೆ ರಾಜ್ಯ ಸರ್ಕಾರ 2023ರಲ್ಲಿ ಸ್ಪಂದಿಸಿ, ಮೈಸೂರಿನಲ್ಲಿ ಚಿತ್ರನಗರಿ ಕಟ್ಟುವುದಾಗಿ ಘೋಷಿಸಿದೆ. ಸಿಎಂ ಸಿದ್ದರಾಮಯ್ಯನವರ ಅಧಿಕಾರಾವಧಿಯಲ್ಲೇ ಈ ಯೋಜನೆ ಲೋಕಾರ್ಪಣೆಗೊಳ್ಳಲಿ ಎಂಬುದು ಎಲ್ಲರ ಬೇಡಿಕೆಯಾಗಿದೆ. ಮೈಸೂರಿನಲ್ಲಿ ಚಿತ್ರನಗರಿ ನಿರ್ಮಾಣದಿಂದ ಸುತ್ತಲಿನ ಜಿಲ್ಲೆಗಳ ಪ್ರವಾಸೋದ್ಯಮಕ್ಕೂ ಬೂಸ್ಟ್ ಸಿಗುವ ನಿರೀಕ್ಷೆ ಹೆಚ್ಚಾಗಿದೆ.

### 2023ರ ಬಜೆಟ್‌ನಲ್ಲಿ ಸಿನಿಮಾ ಮಂದಿಗೆ 3 ಗುಡ್ ನ್ಯೂಸ್

2023ರ ಬಜೆಟ್‌ನಲ್ಲಿ ಸಿನಿಮಾ ಮಂದಿಗೆ ಸಿಎಂ ಸಿದ್ದರಾಮಯ್ಯ ಮೂರು ಗುಡ್ ನ್ಯೂಸ್ ನೀಡಿದ್ದರು. ಸಿಎಂ ಸಿದ್ದರಾಮಯ್ಯ ಮಂಡನೆ ಮಾಡುತ್ತಿರುವ 16ನೇ ಬಜೆಟ್‌ನಲ್ಲಿ ಕನ್ನಡ ಚಿತ್ರರಂಗಕ್ಕೆ.. ಅದರಲ್ಲೂ ಕನ್ನಡ ಸಿನಿ ಪ್ರೇಮಿಗಳಿಗೆ ಬಂಪರ್ ಕೊಡುಗೆಯನ್ನೇ ನೀಡಿದ್ದರು. ರಾಜ್ಯದ ಎಲ್ಲಾ ಮಲ್ಟಿಪ್ಲೆಕ್ಸ್ ಹಾಗೂ ಚಿತ್ರಮಂದಿರಗಳಿಗೆ ಏಕರೂಪ ಟಿಕೆಟ್ ದರ ನಿಗದಿ ಪಡಿಸುವ ಮಹತ್ವದ ಘೋಷಣೆ ಮಾಡಿದ್ದರು ಸಿಎಂ ಸಿದ್ದರಾಮಯ್ಯ.

# ಸಾಮಾಜಿಕ-ಆರ್ಥಿಕ ಅಭಿವೃದ್ಧಿಗೆ ಗ್ಯಾರಂಟಿ ಯೋಜನೆ ನೆರವು

• ಉದಯವಾಹಿನಿ, ಚಿಕ್ಕನಾಯಕನಹಳ್ಳಿ



ಉದಯವಾಹಿನಿ ಚಿತ್ರ

ಸರ್ಕಾರದ ಗೃಹಲಕ್ಷ್ಮಿಯ ಗ್ಯಾರಂಟಿ ಯೋಜನೆಯಡಿ ತಾಲ್ಲೂಕಿನಲ್ಲಿ ಸುಮಾರು 185 ಕೋಟಿ ರೂ.ಗಳು ಫಲಾನುಭವಿಗಳಿಗೆ ಹಂಚಿಕೆಯಾಗುವ ಮೂಲಕ ಸಾಮಾಜಿಕ, ಆರ್ಥಿಕಾಭಿವೃದ್ಧಿಗೆ ನೆರವಾಗಿದೆ ಎಂದು ಅನುಷ್ಠಾನ ಸಮಿತಿ ಅಧ್ಯಕ್ಷ ಸಿ.ಡಿ. ಚಂದ್ರಶೇಖರ್ ತಿಳಿಸಿದರು. ಪಟ್ಟಣದ ತಾಲ್ಲೂಕು ಪಂಚಾಯಿತಿ ಸಭಾಂಗಣದಲ್ಲಿ ನಡೆದ ಪಂಚ ಗ್ಯಾರಂಟಿ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.


ಸರ್ಕಾರದ ಗ್ಯಾರಂಟಿ ಯೋಜನೆ ಗಳು ಅರ್ಹರಿಗೆ ತಲುಪಬೇಕು, ಯೋಜನೆಯಡಿ ನೊಂದಾಯಿಸಿಕೊಂಡು ಹೊರಗುಳಿದವರನ್ನು ಸಂಬಂಧಿಸಿದ ಇಲಾಖಾಧಿಕಾರಿಗಳು ಸಂಪರ್ಕದಲ್ಲಿದ್ದು ಅಗತ್ಯವಿರುವ ದಾಖಲಾತಿಗಳನ್ನು ಒದಗಿಸುವಲ್ಲಿ ಸಹಕರಿಸಿ ಯೋಜನೆಯಡಿ ಸೇರ್ಪಡೆಗೊಳಿಸಿ ಶೇ.100 ರಷ್ಟು ಸಾಧನೆ ಮಾಡಬೇಕು ಎಂದರು. ಮಹಿಳಾ, ಮಕ್ಕಳ ಕಲ್ಯಾಣ ಇಲಾಖಾಧಿಕಾರಿ ಹೊನ್ನಪ್ಪ ಮಾತನಾಡಿ, ತಾಲ್ಲೂಕಿನಲ್ಲಿ ಗೃಹಲಕ್ಷ್ಮಿ ಯೋಜನೆಯಡಿ 54746 ಕುಟುಂಬಗಳು ನೊಂದಣಿಯಾಗಿದ್ದು ಜನವರಿ 2025ರವರೆಗೆ ಸುಮಾರು 188.01 ಕೋಟಿ ರೂ. ಜಮಾ ಆಗಿದೆ. 312 ನೊಂದಾಯಿತ ಕುಟುಂಬಗಳು ಆಧಾರ್, ಬ್ಯಾಂಕ್ ಪಾಸ್‌ಪುಸ್ತಕಗಳ ದಾಖಲೆಗಳನ್ನು ಸರಿಹೊಂದಿಸದ, ಮೃತಹೊಂದಿದ ಯಜಮಾನಿಯ ಮರಣ ಪ್ರಮಾಣ ಪತ್ರ ನೀಡದ ಕಾರಣಕ್ಕೆ ಬಾಕಿ ಉಳಿದಿದೆ ಎಂದರು. ಹೊರಗುಳಿದವರ ಪಟ್ಟಿಯನ್ನು ಆಯಾ ವ್ಯಾಪ್ತಿಯ ಅನುಷ್ಠಾನ ಸಮಿತಿಯ ಸದಸ್ಯರ ಗಮನಕ್ಕೆ ತನ್ನಿ. ಇದರಿಂದ ಸಮಸ್ಯೆಯ ಶೀಘ್ರ ನಿವಾರಣೆಗೆ ಸಹಕಾರಿಯಾಗಲಿದೆ ಎಂದು ಅಧ್ಯಕ್ಷರು ಅಧಿಕಾರಿಗೆ ಸೂಚಿಸಿದರು.

ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಮಾರ್ಗಗಳನ್ನು ಸರಿಹೊಂದಿಸಿಕೊಳ್ಳಿ ಎಂದರು. ಅನ್ನಭಾಗ್ಯ ಯೋಜನೆಯಡಿ ಪಡಿತರ ವಿತರಣೆ ದಿನಾಂಕವನ್ನು ಫಲಾನುಭವಿಗಳಿಗೆ ಮೊದಲೆ ತಿಳಿಸಬೇಕು, ಪಾರದರ್ಶಕವಾಗಿ ಅಳತೆ ಮಾಡಿ ವಿತರಿಸಬೇಕೆಂದು ಸದಸ್ಯ ಚೌಳಕಟ್ಟೆ ನಟರಾಜ್ ತಿಳಿಸಿದರು. ಗೃಹಜ್ಯೋತಿ ಯೋಜನೆಯಡಿ 526 ಮಂದಿ ಹೊರಗುಳಿದಿದ್ದು ಈಗಾಗಲೇ ಅವರಿಗೆ ನೋಟೀಸ್ ನೀಡಲಾಗಿದೆ. ಇದರ ಹೊರತಾಗಿಯೂ ನಾವು ಫಲಾನುಭವಿಗಳನ್ನು ಭೇಟಿ ಮಾಡಿ ಯೋಜನೆಯಡಿ ಸೇರಿಸಿಕೊಳ್ಳಲಾಗುವುದೆಂದು ಬೆಸ್ಕಾಂನ ಎಇಇ ಗವಿರಂಗಯ್ಯ ಮಾಹಿತಿ ನೀಡಿದರು.

> ಶಕ್ತಿ ಯೋಜನೆಯಡಿ ಉತ್ತಮ ಸೇವೆ ಒದಗಿಸಲಾಗುತ್ತಿದೆ. ಇದರಿಂದ ಪ್ರತಿ ಕಿ.ಮೀಗೆ. 25 ರೂ. ಇದ್ದ ಆದಾಯ ಈಗ 43 ರೂ.ಗೆ ಹೆಚ್ಚಳವಾಗಿದೆ. ಇದರ ಹೆಚ್ಚಳಕ್ಕೆ ಇನ್ನೂ ಹೆಚ್ಚಿನ ಬಸ್‌ಗಳ ಅವಶ್ಯಕತೆಯಿದೆ
> –ಮಂಜುನಾಥ್
> ತುರುವೇಕೆರೆ ಘಟಕಾಧಿಕಾರಿ

# ಜನ ಔಷಧಿ ಕೇಂದ್ರ ಮುಚ್ಚುವ ನಿರ್ಧಾರ ಖಂಡನೀಯ

• ಉದಯವಾಹಿನಿ, ಹನೂರು



ಉದಯವಾಹಿನಿ ಚಿತ್ರ

ಜನ ಔಷಧಿ ಕೇಂದ್ರವನ್ನು ಮುಚ್ಚುವುದರಿಂದ ಬಡ ಜನರಿಗೆ ರೋಗಿಗಳಿಗೆ ತುಂಬಾ ತೊಂದರೆಯಾಗಿ ಆರ್ಥಿಕವಾಗಿ ಹೊರೆ ಬೀಳಲಿದೆ. ಇದನ್ನು ಮನಗೊಂಡು ರಾಜ್ಯ ಸರ್ಕಾರ ತಮ್ಮ ನಿರ್ಧಾರವನ್ನು ಹಿಂಪಡೆಯ ಬೇಕು ಎಂದು ಮಾಜಿ ಶಾಸಕಿ ಪರಿಮಳ ನಾಗಪ್ಪ ಅವರು ತಿಳಿಸಿದರು. ರಾಜ್ಯ ಸರ್ಕಾರ ಜನೌಷಧಿ ಕೇಂದ್ರಗಳನ್ನು ಮುಚ್ಚುವ ನಿರ್ಧಾರದಿಂದ ಹಳ್ಳಿಗಳಲ್ಲಿನ ಬಡಜನರಿಗೆ ತುಂಬಾ ತೊಂದರೆಯಾಗಲಿದೆ.

ಬೆಲೆ ಏರಿಕೆ ಆಗಿರುವುದು ಜೊತೆಗೆ ಔಷಧಿಗಳ ಬೆಲೆಯೂ ಸಹ ಏರಿಕೆಯಾಗಿದೆ. ಇವತ್ತಿನ ದಿನಗಳಲ್ಲಿ ಬಿ.ಪಿ, ಶುಗರ್, ಹೃದಯ ಸಂಬಂಧಿ ಖಾಯಿಲೆಗಳು ಯಾವುದೇ ಇರಲಿ ಪ್ರತಿಯೊಂದು ರೋಗಿಗಳಿಗೆ ಇತ್ತೀಚಿನ ದಿನಗಳಲ್ಲಿ ಪ್ರತಿಯೊಬ್ಬರಿಗೂ ಔಷಧಿ ಮುಖ್ಯವಾಗಿದೆ. ಕೇಂದ್ರ ಸರ್ಕಾರ ಸನ್ಮಾನ್ಯ ನರೇಂದ್ರ ಮೋದಿಯವರು ದೇಶಾದ್ಯಂತ ಜನ ಔಷಧಿ ಕೇಂದ್ರವನ್ನು ತೆರೆದು ಬಡ ಜನರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಕಡಿಮೆ ದರದಲ್ಲಿ ಔಷಧಿಯನ್ನು ಸಿಗುವಂತೆ ಪ್ರತಿ ತಾಲ್ಲೂಕು ಹೋಬಳಿ ಮಟ್ಟದಲ್ಲೂ ಸರ್ಕಾರಿ ಆಸ್ಪತ್ರೆಯ ಆವರಣ ಅಕ್ಕಪಕ್ಕದಲ್ಲಿ ಜನ ಔಷಧಿ ಕೇಂದ್ರವನ್ನು ತೆರೆಯುವಂತೆ ಮಾಡಿದ್ದಾರೆ.

> ಸಾಕಷ್ಟು ಜನರಿಗೆ ಕೈಗೆಟುಕುವ ದರದಲ್ಲಿ ಔಷಧಿ ಸಿಗುತ್ತಿತ್ತು. ಕೇಂದ್ರಗಳಲ್ಲಿ ಉತ್ತಮ ಗುಣಮಟ್ಟದ ಔಷಧಿಗಳು ಹಾಗೂ ಸರ್ಜಿಕಲ್ ಐಟಂಗಳು ರೋಗಿಗಳಿಗೆ ಅತ್ಯಂತ ಕಡಿಮೆ ದರದಲ್ಲಿ ದೊರಕುತ್ತಿತ್ತು. ಖಾಸಗಿಯವರ ಒತ್ತಡಕ್ಕೆ ಮಣಿದು ಈ ಔಷದಿ ಕೇಂದ್ರಗಳನ್ನು ಮುಚ್ಚಲು ಸರ್ಕಾರ ಮುಂದಾಗಿದೆ. ರಾಜ್ಯ ಸರ್ಕಾರದ ಕ್ರಮವನ್ನು ಖಂಡಿಸುತ್ತೇವೆ ಎಂದು ತಿಳಿಸಿದರು.

# ಪೌರ ಕಾರ್ಮಿಕರ ಮುಷ್ಕರಕ್ಕೆ ಪ.ಪಂ ಪತ್ರಕರ್ತರ ಸಂಘ ಬೆಂಬಲ

• ಉದಯವಾಹಿನಿ, ಕೊರಟಗೆರೆ



ಉದಯವಾಹಿನಿ ಚಿತ್ರ

ಇಲ್ಲಿನ ಪಟ್ಟಣ ಪಂಚಾಯಿತಿ ಮುಂಭಾಗದಲ್ಲಿ ಕಳೆದ 3 ದಿನಗಳಿಂದ ನಡೆಯುತ್ತಿರುವ ಪೌರ ಕಾರ್ಮಿಕರು, ಇತರ ನೌಕರರ ಅನಿಧಿಷ್ಠಾವಧಿ ಮುಷ್ಕರಕ್ಕೆ ಪಟ್ಟಣ ಪಂಚಾಯ್ತಿ ಅಧ್ಯಕ್ಷರು, ಮುಖ್ಯಾಧಿಕಾರಿ, ಸದಸ್ಯರು, ತಾಲ್ಲೂಕು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷರು, ಪಧಾದಿಕಾರಿಗಳು ಭಾಗವಹಿಸಿ ಬೆಂಬಲ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಪಟ್ಟಣ ಪಂಚಾಯಿತಿ ಅಧ್ಯಕ್ಷೆ ಅನಿತಾ ಮಾತನಾಡಿ, ಕೊರಟಗೆರೆ ಪಟ್ಟಣ ಪಂಚಾಯ್ತಿಯ ಎಲ್ಲಾ ಸದಸ್ಯರು ಪೌರ ಕಾರ್ಮಿಕರ, ಇತರ ಕಾರ್ಮಿಕರ ಬೇಡಿಕೆಗಳನ್ನು ಸರ್ಕಾರ ಕೂಡಲೆ ಈಡೇರಿಸಬೇಕು. ಈ ದಿನ ಪಟ್ಟಣ ಪಂಚಾಯ್ತಿಯಲ್ಲಿ ಸಾಮಾನ್ಯ ಸಭೆಯನ್ನು ಮುಗಿಸಿ ಪೌರಕಾರ್ಮಿಕರ ಮುಷ್ಮರಕ್ಕೆ ಬೆಂಬಲವಾಗಿ ನಿಂತಿದ್ದೇವೆ ಎಂದರು.

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ವಿ.ಪುರಷೋತ್ತಮ್ ಮಾತನಾಡಿ, ಸಮಾಜದಲ್ಲಿ ಪೌರ ಕಾರ್ಮಿಕರು, ನೀರು ಸರಬರಾಜು ಮಾಡುವವರರು ಮಾಡುತ್ತಿರುವಸೇವೆ ಅತ್ಯಂತ ಪವಿತ್ರವಾದುದು, ಸಮಾಜವನ್ನು ಆರೋಗ್ಯ ಸ್ಥಿತಿಯಲ್ಲಿಡಲು ಪೌರ ಕಾರ್ಮಿಕರು ಮಾಡುವ ಕಾರ್ಯ ಯಾವೊಬ್ಬ ಸಾಮಾನ್ಯ ಜನರು ಮಾಡಲು ಸಾಧ್ಯವಿಲ್ಲ. ಸರ್ಕಾರ ಇದನ್ನು ಮನ ಗಂಡು ಪೌರ ಕಾರ್ಮಿಕರಿಗೆ ಒಬ್ಬ ಸಾಮಾನ್ಯ ಸರ್ಕಾರಿ ನೌಕರರಿಗೆ ನೀಡುವ ಎ ಸವಲತ್ತು, ವೇತನ ನೀಡಬೇಕು. ಬಾಬಾ ಸಾಹೇಬ್ ಅಂಬೇಡ್ಕರ್ ರವರ ಅಲೋಚನೆಯಂತೆ ಎಲ್ಲರಿಗೂ ಸಮಾನ ಅವಕಾಶ ಮತ್ತು ಸಮಾನ ಶಿಕ್ಷಣವನ್ನು ನೀಡಬೇಕು. ಸರ್ಕಾರ ಪೌರ ಕಾರ್ಮಿಕರಿಗೆ ನೀಡುತ್ತಿರುವ ಕನಿಷ್ಠ ವೇತನ ಮತ್ತು ಸೌಲಭ್ಯಗಳಿಂದ ಇದು ಸಾಧ್ಯವಾಗುತಿಲ್ಲ. ಇನ್ನಾದರೂ ಸರ್ಕಾರ ಈ ತಾರತಮ್ಯವನ್ನು ಬಗೆಹರಿಸಬೇಕು ಎಂದರು. ಪ.ಪಂ.ಸದಸ್ಯ ಕೆ.ಆರ್.ಓಬಳರಾಜು ಮಾತನಾಡಿ, ಜನತೆಗೆ ಮೂಲಭೂತ ಸೌಕರ್ಯಗಳಾದ ನೀರು, ಬೆಳಕು, ಸ್ವಚ್ಚತೆ ಸೇರಿದಂತೆ ಇನ್ನಿತರ ಸೇವೆಯನ್ನು ಮಾಡುತ್ತಿರುವುದು ನಮ್ಮ ಪಟ್ಟಣ ಪಂಚಾಯ್ತಿಯ ನೌಕರರೇ. ಪೌರ ಕಾರ್ಮಿಕರು ಬೆಳಗ್ಗೆ 5 ಗಂಟೆಯಿಂದಲೇ ಮಳೆ, ಚಳಿ, ಗಾಳಿ ಎನ್ನದೆ ಸ್ವಚ್ಚತಾ ಕಾರ್ಯವನ್ನು ಪ್ರಾರಂಭಿಸುತ್ತಾರೆ.

ಅದೇ ರೀತಿ ನಮ್ಮ ನೀರು ಸರಬರಾಜು ಮಾಡುವವರೂ ಸಹ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳು ವಿಶೇಷವಾಗಿ ಗಮನಿಸಬೇಕಾದ ವಿಷಯವೆಂದರೆ ರಾಜ್ಯದಲ್ಲಿ ಬಹುತೇಕ ಪೌರಕಾರ್ಮಿಕರು ಪರಿಶಿಷ್ಠ ಜಾತಿ ಮತ್ತು ಪಂಗಡಕ್ಕೆ ಸೇರಿದವರಾಗಿದ್ದಾರೆ. ಸಂವಿಧಾನದಂತೆ ಅವರಿಗೆ ಮೂಲಭೂತ ಸೌಕರ್ಯ, ಆರೋಗ್ಯ ಭದ್ರತೆ, ಇತರರಂತೆ ವೇತನ, ಪಿಂಚಣಿ ನೀಡಬೇಕಾಗಿರುವುದು ಸರ್ಕಾರದ ಆದ್ಯ ಕರ್ತವ್ಯ. ಇನ್ನಾದರೂ ಪೌರಕಾರ್ಮಿಕರ ಬೇಡಿಕೆಗೆ ಸರ್ಕಾರ ಸ್ಪಂದಿಸಬೇಕು ಎಂದರು. ತಾಲ್ಲೂಕು ಪೌರ ಕಾರ್ಮಿಕ ನೌಕರರ ಸಂಘದ ಅಧ್ಯಕ್ಷ ನರಸಿಂಹಯ್ಯ ಮಾತನಾಡಿ, ನಮ್ಮ ಪೌರ ಕಾರ್ಮಿಕರ ಬೇಡಿಕೆಗಳು ನ್ಯಾಯಸಮ್ಮತವಾಗಿವೆ. ಬೇಡಿಕೆ ಈಡೇರುವವರೆಗೂ ಅನಿರ್ಧಿಷ್ಠಾವಧಿ ಮುಷ್ಕರ ಮುಂದುವರೆಸುತ್ತೇವೆ. ನಮ್ಮ ರಾಜ್ಯ ಸಂಘದ ಸೂಚನೆ ಬಂದಲ್ಲಿ ಉಪವಾಸ ಸತ್ಯಗ್ರಹಕ್ಕೂ ಸಿದ್ದರಿದ್ದೇವೆ. ನಮಗೆ ಬೆಂಬಲ ನೀಡಿದ ಪ.ಪಂ. ಅಧ್ಯಕ್ಷರು, ಸದಸ್ಯರು, ಅಧಿಕಾರಿ ವರ್ಗದವರಿಗೆ ಹಾಗೂ ತಾಲ್ಲೂಕು ಕಾರ್ಯನಿತರ ಪತ್ರಕರ್ತರ ಸಂಘದ ಅಧ್ಯಕ್ಷರು ಹಾಗೂ ಪದಾಧಿಕಾರಿಗಳಿಗೆ ಧನ್ಯವಾದ ತಿಳಿಸಿದರು.

**ಜನರು ಮಾಡಲು ಸಾಧ್ಯವಿಲ್ಲ**

> ಪೌರ ಕಾರ್ಮಿಕರ ಬೇಡಿಕೆಗಳು ನ್ಯಾಯಸಮ್ಮತವಾಗಿದೆ. ಸ್ಥಳೀಯ ಸಂಸ್ಥೆಗಳ ನೌಕರರನ್ನು ರಾಜ್ಯ ಸರ್ಕಾರಿ ನೌಕರರಂತೆ ಪರಿಗಣಿಸಿ, ದಿನಗೂಲಿ, ಹೊರಗುತ್ತಿಗೆ ನೌಕರರನ್ನು ಖಾಯಂಗೊಳಿಸುವಂತೆ ಮುಂದುವರೆದು ಸ್ಥಳೀಯ ಸಂಸ್ಥೆಗಳ ನೌಕರರಿಗೆ ಜನರ ತೆರಿಗೆಯಲ್ಲಿ ವೇತನ ನೀಡದೆ ರಾಜ್ಯ ಸರ್ಕಾರಿ ನೌಕರರಿಗೆ ವೇತನ ನೀಡುತಿರುವಂತೆ ಸ್ಥಳೀಯ ಸಂಸ್ಥೆಗಳ ನೌಕರರಿಗೂ ಸರ್ಕಾರವೇ ನೇರವಾಗಿ ವೇತನ ಪಾವತಿಸುವಂತೆ ಕೋರಿದ್ದು ಈ ಬೇಡಿಕೆಗಳು ಈಡೇರಲಿ
> –ಉಮೇಶ್, ಪ.ಪಂ ಮುಖ್ಯಾಧಿಕಾರಿ

# ವಿವಿಧ ಬೇಡಿಕೆ ಈಡೇರಿಸುವಂತೆ ಒತ್ತಾಯಿಸಿ ಮುಷ್ಕರ

• ಉದಯವಾಹಿನಿ, ಮುಳಬಾಗಿಲು



ಉದಯವಾಹಿನಿ ಚಿತ್ರ

ಬೇಡಿಕೆಗಳನ್ನು ಈಡೇರಿಸಬೇಕೆಂದಒತ್ತಾಯಿಸಿ ಶನಿವಾರ ನಗರದ ನಗರಸಭೆಯ ಆವರಣದಲ್ಲಿ ಕರ್ನಾಟಕ ರಾಜ್ಯ ಪೌರಸೇವಾ ನೌಕರರಸಂಘದ ಮುಳಬಾಗಿಲು ಶಾಖೆಯ ನೌಕರರು ಅನಿರ್ದಿಷ್ಟಾವಧಿ ಪ್ರತಿಭಟನೆ ನಡೆಸಿದರು. ಸರ್ಕಾರ ಎಲ್ಲಾ ರೀತಿಯ ನೌಕರರಿಗೆ ನೀಡುವ ಸೌಲಭ್ಯಗಳನ್ನು ಪೌರಕಾರ್ಮಿಕರಿಗೂ ನೀಡಬೇಕು.

ಐಟಿ, ಅಕೌಂಟೆಂಟ್, ಕನ್ಸಲ್ಟೆಂಟ್, ಕಂಪ್ಯೂಟರ್ ಆಪರೇಟರ್, ವಾಹನ ಚಾಲಕರು, ಸ್ಯಾನಿಟರಿ ಸೂಪರ್‌ವೈಸರ್ ಮತ್ತಿತರ ವೃಂದದ ನೌಕರರನ್ನು ಸೇವೆಯಲ್ಲಿ ವಿಲೀನಗೊಳಿಸಬೇಕು ಸೇರಿದಂತೆ ವಿವಿಧ ಬೇಡಿಕೆಗಳನ್ನು ಸರ್ಕಾರ ಕೂಡಲೇ ಈಡೇರಿಸಬೇಕೆಂದು ಒತ್ತಾಯಿಸಿ ಪ್ರತಿಭಟನೆ ನಡೆಸಿದರು. ಈ ವೇಳೆ ಪೌರ ಕಾರ್ಮಿಕರ ಸಂಘದ ತಾಲ್ಲೂಕು ಅಧ್ಯಕ್ಷ ಮುನಿವೆಂಕಟಪ್ಪ ಮಾತನಾಡಿ, ಪೌರಕಾರ್ಮಿಕರು ನಗರದ ಸ್ವಚ್ಛಗೊಳಿಸುವಲ್ಲಿ ಮುಖ್ಯ ಪಾತ್ರವಹಿಸುತ್ತಾರೆ.


ಆದರೆ ಅವರಿಗೆ ಸೌಲಭ್ಯ ಒದಗಿಸದಿರುವುದು ಬೇಸರದ ಸಂಗತಿ ಎಂದರು. ರಾಜ್ಯದ ಸ್ವಚ್ಛತೆಯ ಭಾರ ಹೊತ್ತಿರುವ ಪೌರಕಾರ್ಮಿಕರು ನಾನಾ ಬಗೆಯ ಸಮಸ್ಯೆಗಳನ್ನು ಅನುಭವಿಸುತ್ತಿದ್ದಾರೆ. ಹಾಗಾಗಿ ಅವರ ಬೇಡಿಕೆ ಈಡೇರಿಸುವವರೆಗೂ ಮುಷ್ಕರ ವಾಪಸ್ ಪಡೆಯುವುದಿಲ್ಲ ಎಂದರು. ಸುನಿಲ್ ಕುಮಾರ್, ಪ್ರತಿಭಾ, ನಾಗರಾಜ್, ಅಮೀರ್ ಜಾನ್, ಪೌರಕಾರ್ಮಿಕರು ಮುಷ್ಕರದಲ್ಲಿ ಭಾಗವಹಿಸಿದ್ದರು.

### ನಗದು ರಹಿತ ಚಿಕಿತ್ಸೆ ನೀಡಿ

ದಿನಗೂಲಿ ನೌಕರರನ್ನು ಸಕ್ರಮಾತಿಗೊಳಿಸಬೇಕು. 2022ರ ವಿಶೇಷ ನೇಮಕಾತಿ ಅಡಿಯಲ್ಲಿ ಆಯ್ಕೆಯಾದ ಪೌರಕಾರ್ಮಿಕರು, ಲೋಡರ್ಸ್‌ಗಳಿಗೆ ಎಸ್‌ಎಫ್‌ಸಿ ವೇತನ ನಿಧಿಯಿಂದ ವೇತನ ಪಾವತಿಸಬೇಕು. ನಗರ, ಸ್ಥಳೀಯ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನೀರು ಸರಬರಾಜು ನೌಕರರನ್ನು ವಿಶೇಷ ನೇಮಕಾತಿ ಎಂದು ಪರಿಗಣಿಸಬೇಕು. ಪೌರಸೇವಾ ನೌಕರರಿಗೆ ಜ್ಯೋತಿ ಸಂಜೀವಿನಿ ನಗದು ರಹಿತ ಚಿಕಿತ್ಸಾ ಸೌಲಭ್ಯ ನೀಡಬೇಕು.

# ಕಾರ್ಮಿಕರು ಒಂದಾಗಿ ಹೊರತು ಬಿಜಿಎಂಎಲ್ ಸಮಸ್ಯೆಗೆ ಪರಿಹಾರ ಅಸಾಧ್ಯ

• ಉದಯವಾಹಿನಿ, ಕೆಜಿಎಫ್



ಉದಯವಾಹಿನಿ ಚಿತ್ರ

ಬಿಜಿಎಂಎಲ್ ಕಾರ್ಮಿಕರ ಸಮಸ್ಯೆ ಶಾಶ್ವತ ಪರಿಹಾರ ಕಾಣಬೇಕಾದರೆ ಎಲ್ಲಾ 18 ಕಾರ್ಮಿಕ ಸಂಘಟನೆಗಳ ಮುಖಂಡರು ಒಂದಾಗಿ ಮುಂದೆ ಬಂದರೆ ಸಮಸ್ಯೆಯನ್ನು ಬಗೆಹರಿಸಲು ಸಾಧ್ಯವಿದೆ ಎಂದು ಕೋಲಾರ ಸಂಸದ ಮಲ್ಲೇಶಬಾಬು ಹೇಳಿದರು. ಬಿಜಿಎಂಎಲ್ ಮಾರಿಕುಪ್ಪಂ ಆರ್. ಡಿ. ಬ್ಲಾಕ್ ನ ನಿವಾಸಿ 25 ವರ್ಷ ಮಹಿಳೆ ಮೇಲೆ ಮರ ಬಿದ್ದ ಪರಿಣಾಮ ಮೃತಪಟ್ಟಿದ್ದರು. ಮೃತ ಗ್ರೇಸಿ ಕುಟುಂಬಸ್ಥರಿಗೆ ಸಾಂತ್ವನ ಹೇಳಲು ಕೆಜಿಎಫ್ ವಿಧಾನಸಭಾ ಕ್ಷೇತ್ರಕ್ಕೆ ಭೇಟಿ ನೀಡಿದ್ದ ಸಂದರ್ಭದಲ್ಲಿ ಉರಿಗಾಂ ಲೋಕೋಪಯೋಗಿ ಇಲಾಖೆ ಅಥಿತಿ ಗೃಹದಲ್ಲಿ ಸುದ್ದಿಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಸಂಸದ ಮಲ್ಲೇಶಬಾಬು ಬಿಜಿಎಂಎಲ್ ವ್ಯಾಪ್ತಿಯಲ್ಲಿರುವ ಹಳೆಯದಾದ ಮರಗಳನ್ನು ಕಟಾವ್ ಮಾಡಲು ಅಧಿಕಾರಿಗಳಿಗೆ ಸೂಚಿಸಲಾಗಿದೆ ಇಂತಹ ದುರ್ಘಟನೆ ಯಾವಕುಟುಂಬದಲ್ಲೂ ಸಂಭವಿಸಬಾರದು. ಆ ಕುಟುಂಬದವರಿಗೆ ನನ್ನ ಕೈಲಾದ ಸಹಾಯವನ್ನು ವೈಯುಕ್ತಿಕವಾಗಿ ನೀಡಿದ್ದು ಮುಂದೆ ಬೇರೆ ಮಾರ್ಗಗಳಿಂದ ಲಭಿಸಬಹುದಾದ ಮಾರ್ಗಗಳಿಂದ ಅನುಕೂಲ ಮಾಡಿ ಕೊಡಲಾಗುವುದು ಎಂದು ಹೇಳಿದರು.

ಬಿಜಿಎಂಎಲ್ ಕಾರ್ಮಿಕರ ಮಧ್ಯೆ ಸಮನ್ವಯತೆ ಕೊರತೆ, ಪ್ರತಿಷ್ಠೆ ಯಿಂದ ಕಾರ್ಮಿಕರ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಸಾಧ್ಯವಾಗಿಲ್ಲ ಒಂದು ಸಂಘಟನೆ ಒಂದು ಮನವಿ ಪತ್ರವನ್ನು ಕೇಂದ್ರ ಸರ್ಕಾರಕ್ಕೆ ನೀಡಿದ ನಂತರ ಮತ್ತೊಂದು ಸಂಘಟನೆ ನಮ್ಮದೇ ನಿಜವಾದ ಸಂಘಟನೆ ಎಂದು ಮನವಿ ಪತ್ರ ವನ್ನು ನೀಡುತ್ತಾರೆ ಹಾಗಾಗಿ ಯಾವುದು ಇಲ್ಲಿ ಯಾವ ಕಾರ್ಮಿಕ ಸಂಘಟನೆ ನಿಜವಾಗಿಯೂ ಕೆಲಸ ಮಾಡುತ್ತಿದೇ ಎಂಬುದರ ಬಗ್ಗೆ ಗೊಂದಲವಿರುವುದರಿಂದ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಸಾಧ್ಯವಾಗಿಲ್ಲ ಕಾರ್ಮಿಕರು ವಾಸ ಸ್ಥಳದ ದೃಡಿಕರಣ ಪ್ರಮಾಣ ಪತ್ರ ಪಡೆಯುವ ಸಂದರ್ಭದಲ್ಲಿ ಒಂದು ಮನೆಗಿಂತ ಹೆಚ್ಚುವರಿ ಮನೆ ಇದ್ದರೆ ಹಿಂತಿರುಗಿ ಸುವಂತೆ ಬಿಜಿಎಂಎಲ್ ಆಡಳಿತ ಮಂಡಳಿ ಕರಾರು ಪತ್ರದಲ್ಲಿ ಸ್ಪಷ್ಟವಾಗಿ ತಿಳಿಸಿದ್ದಾರೆ.

ಬಿಇಎಂಎಲ್ ಹೊರ ಗುತ್ತಿಗೆ ಕಾರ್ಮಿಕರು ಹೋರಾಟಕ್ಕೆ ಮುಂದಾಗುವ ಮುನ್ನ ನನ್ನ ಬಳಿ ಬಂದು ಚರ್ಚೆ ನಡೆಸಿ ಬಿಇಎಂಎಲ್ ಆಡಳಿತ ಮಂಡಳಿಯೊಂದಿಗೆ ಚರ್ಚೆ ನಡೆಸಿದರೆ ಉತ್ತಮ ನನ್ನ ಬಳಿ ಪ್ರಸ್ತಾಪ ಮಾಡದೆ ಹೋರಾಟ ಕ್ಕೆ ಇಳಿದು ಸಂಸದರು ನಮ್ಮ ಹೋರಾಟಕ್ಕೆ ಬೆಂಬಲ ವ್ಯಕ್ತಪಡಿಸಲ್ಲ ಎಂದು ಹೇಳುವುದು ಸರಿಯಲ್ಲ ಎಂದು ಹೇಳಿದರು.

> ಕರಾರು ಪತ್ರದಲ್ಲಿರುವ ಅಂಶಗಳನ್ನು ಗಮನಿಸದೆ ವಾಸ ಸ್ಥಳದ ದೃಡಿಕರಣ ಪ್ರಮಾಣ ಪತ್ರವನ್ನು ಪಡೆದು ಇದೀಗ ಬೇರೆ ಮಾತುಗಳನ್ನು ಹೇಳುತಿರುವುದು ಎಷ್ಟು ಸರಿ ನಿಮ್ಮ ಮನೆಗಳಿಗೆ ಯಾವುದೇ ತೊಂದರೆ ಯಾಗದಂತೆ ನಾನು ನೋಡಿ ಕೊಳ್ಳುತ್ತೇನೆ ಎಂದು ಹೇಳಿದರು.

# ಈ ಬಾರಿ ಬೆಂಗಳೂರಿನ ಜನಕ್ಕಿಲ್ಲ ನೀರಿನ ಸಮಸ್ಯೆ

## ನೂರಡಿ ತಲುಪಿದ ಕನ್ನಂಬಾಡಿ ಕಟ್ಟೆ–35 ವರ್ಷಗಳ ಇತಿಹಾಸದಲ್ಲೇ ಇದು 2ನೇ ಬಾರಿ

• ಉದಯವಾಹಿನಿ, ಮಂಡ್ಯ

ಮೈಸೂರು, ಬೆಂಗಳೂರಿಗೆ ಕುಡಿಯುವ ನೀರೊದಗಿಸುವ ಹಾಗೂ ಸಕ್ಕರೆ ನಾಡಿನ ರೈತರ ಜೀವನಾಡಿ ಶ್ರೀರಂಗಪಟ್ಟಣ ತಾಲ್ಲೂಕಿನ ಕೃಷ್ಣರಾಜಸಾಗರದ ನೀರಿನ ಮಟ್ಟ ಮೇ ತಿಂಗಳಲ್ಲೇ ನೂರಡಿದಾಟಿದೆ.

| ವರ್ಷ | ನೀರಿನ ಮಟ್ಟ |
| --- | --- |
| 2014(ಜು.22) | 102.40 |
| 2015(ಜೂ.28) | 101.25 |
| 2016 | ನೂರಡಿ ತಲುಪಲೇ ಇಲ್ಲ |
| 2017(ಸೆ.4) | 100.10 |
| 2018(ಜೂ.17) | 100.75 |
| 2019(ಆ.10) | 108.50 |
| 2020(ಜು.8) | 100.33 |
| 2021(ಜು.21) | 100.76 |
| 2022(ಮೇ 11) | 100.00 |
| 2023(ಜು.25) | 100.00 |
| 2024(ಜು.5) | 100.30 |
| 2025(ಮೇ 30) | 100.10 |


ಕಳೆದ 35 ವರ್ಷಗಳ ಇತಿಹಾಸದಲ್ಲೇ ಇದು ಎರಡನೇ ಬಾರಿಯಾಗಿದೆ. ಸಾಮಾನ್ಯವಾಗಿ ಜೂನ್, ಜುಲೈನಲ್ಲಿ ಕೆಆರ್‌ಎಸ್ ಜಲಾಶಯದ ನೀರಿನ ಮಟ್ಟ ನೂರಡಿ ತಲುಪುತ್ತದೆ. ಜಲಾಶಯದ ಇತಿಹಾಸದಲ್ಲೇ ಅತಿ ಹೆಚ್ಚು ಬಾರಿ ನೂರಡಿ ತಲುಪಿರುವುದು ಜೂನ್‌ನಲ್ಲಿ. ಬರಳೆಣಿಕೆಯ ವರ್ಷಗಳಲ್ಲಿ ಮೇ ತಿಂಗಳಲ್ಲಿ ತುಂಬಿದೆ. ಅದರ ಹೊರತಾಗಿ ಮುಂಗಾರು ವಿಳಂಬವಾದಾಗ ಜುಲೈನಲ್ಲಿ ಶತಕ ದಾಟಿದೆ. ಆಗಸ್ಟ್‌ನಲ್ಲೂ ನೂರಡಿ ತಲುಪಿರುವ ಉದಾಹರಣೆ ಇದೆ.

**35 ವರ್ಷಗಳಲ್ಲಿಎರಡಬೇ ಬಾರಿ ದಾಖಲೆ:** 124.80 ಅಡಿ ಸಾಮರ್ಥ್ಯದ ಜಲಾಶಯ, 2023ರಲ್ಲಿ ಬರಗಾಲದ ಪರಿಣಾಮ ಜಲಾಶಯ ಭರ್ತಿಯಾಗಿರಲಿಲ್ಲ. ಇನ್ನು 2022ರಲ್ಲಿಮೇ 11ರಂದೇ ನೂರಡಿ ತಲುಪಿತ್ತು. 2023ರಲ್ಲಿ ಸಾಕಷ್ಟು ವಿಳಂಭವಾಗಿ ಜುಲೈ 25ರಂದು ನೂರಡಿ ಮುಟ್ಟಿತ್ತು. ಕಳೆದ ವರ್ಷ ಜುಲೈ ಮೊದಲ ವಾರದಲ್ಲಿ 100 ಅಡಿ ತಲುಪಿತ್ತು. 2024ರಲ್ಲಿ ಜು.11ರಂದೇ ಜಲಾಶಯದ ನೀರಿನ ಮಟ್ಟವು 124 ಅಡಿ ತಲುಪಿದರೂ ಜು.25ರಂದು ಸಂಪೂರ್ಣ ಭರ್ತಿ (124.80 ಅಡಿಗಳು) ಮಾಡಿಸಲಾಗಿತ್ತು. ಆ ಬಳಿಕ ಬರೋಬ್ಬರಿ 154ದಿನಗಳ ಕಾಲ ಅಂದರೆ ಡಿ.25ರವರೆಗೂ ಗರಿಷ್ಠ ಮಟ್ಟವನ್ನು ಕಾಯ್ದುಕೊಳ್ಳಲಾಗಿತ್ತು. 2025 ಏಪ್ರಿಲ್ 20 ರಂದು ಕೇವಲ 81 ಕ್ಯುಸೆಕ್ ಒಳ ಹರಿವು ಮತ್ತು 3841 ಕ್ಯುಸೆಕ್ ಹೊರ ಹರಿವಿನೊಂದಿಗೆ ಜಲಾಶಯದ ನೀರಿನ ಮಟ್ಟ 99.64 ಕೆಳಗಿಳಿದಿತ್ತು. ಈ ಮಧ್ಯೆ ಈ ವರ್ಷ ಫೆಬ್ರವರಿಯಲ್ಲಿ ಬಿಸಿಲಿನ ಬೇಗೆ ಹೆಚ್ಚಾಗಿತ್ತು. ಹೀಗಾಗಿ ಈ ವರ್ಷ ಬರಗಾಲ ಕಾಡುವುದೇ ಎಂಬ ಆತಂಕ ರೈತರು ಮತ್ತು ಜನರಲ್ಲಿ ಮೂಡಿತ್ತು.

**ಕಳೆದ ವರ್ಷಕ್ಕಿಂತ 16 ಅಡಿಯಷ್ಟು ಹೆಚ್ಚು ನೀರು ಸಂಗ್ರಹ:** ಮೇ 26ರಂದು 89.35 ಅಡಿಯಿದ್ದ ಜಲಾಶಯದ ನೀರಿನ ಮಟ್ಟವು ಮೇ 30ರಂದು 100.10 ಅಡಿಗೇರಿದೆ.

ಕೇವಲ ನಾಲ್ಕು ದಿನಗಳ ಅಂತರದಲ್ಲಿ ಜಲಾಶಯದ ನೀರಿನ ಮಟ್ಟವು ಸುಮಾರು 11 ಅಡಿಯಷ್ಟು ಏರಿಕೆ ಯಾಗಿದೆ. ಮೇ 29ರಂದು ಬೆಳಗ್ಗೆ 8ಕ್ಕೆ 98 ಅಡಿಯಿದ್ದ ಜಲಾಶಯದ ನೀರಿನ ಮಟ್ಟವು ಮೇ 30ರಂದು ಬೆಳಗ್ಗೆ 8ರ ವೇಳೆಗೆ 2.10 ಅಡಿಯಷ್ಟು ಹೆಚ್ಚಾಗಿ ನಿರೀಕ್ಷೆಯಂತೆಯೇ ನೂರಡಿ ದಾಟಿದೆ.

ಪ್ರಸ್ತುತ ಜಲಾಶಯಕ್ಕೆ 19,448 ಕ್ಯೂಸೆಕ್ ನೀರು ಹರಿದು ಬರುತ್ತಿದ್ದು, ಕೇವಲ 670 ಕ್ಯೂಸೆಕ್ ನೀರನ್ನು ಮಾತ್ರ ಕಟ್ಟೆಯಿಂದ ಹೊರ ಬಿಡಲಾಗಿದೆ. ಕಳೆದ ವರ್ಷ(2024) ಇದೇ ಅವಧಿಯಲ್ಲಿ1,515 ಕ್ಯುಸೆಕ್ ಒಳ ಹರಿವು, 493 ಕ್ಯುಸೆಕ್ ಹೊರ ಹರಿವಿನೊಂದಿಗೆ ಜಲಾಶಯದ ನೀರಿನ ಮಟ್ಟ 83.85 ಅಡಿ ದಾಖಲಾಗಿತ್ತು. ಕಳೆದ ವರ್ಷಕ್ಕಿಂತ 16 ಅಡಿಯಷ್ಟು ನೀರು ಹೆಚ್ಚು ಸಂಗ್ರಹವಾಗಿದೆ.




ಉದಯವಾಹಿನಿ ಚಿತ್ರ

**ಜಲಾಶಯದಲ್ಲಿದೆ 22,888 ಟಿಎಂಸಿ ನೀರು**

49.452 ಟಿಎಂಸಿ ನೀರು ಸಂಗ್ರಹ ಸಾಮರ್ಥ್ಯವುಳ್ಳ ಕೆಆರ್‌ಎಸ್ ಜಲಾಶಯದಲ್ಲಿ ಪ್ರಸ್ತುತ 22.888 ಟಿಎಂಸಿ ಅಡಿ ನೀರು ಸಂಗ್ರಹವಾಗಿದ್ದು, ಇದರಲ್ಲಿ14.509 ನೀರು ಕೃಷಿ ಬಳಕೆಗೆ ಲಭ್ಯವಿದೆ. ಉಳಿದ 8.379 ಟಿಎಂಸಿಯಲ್ಲಿ4.400 ಟಿಎಂಸಿ ಯಾವುದಕ್ಕೂ ಬಳಕೆಗೆ ಬಾರದ ಡೆಡ್ ಸ್ಟೋರೇಜ್. ಉಳಿದ 3.979 ಟಿಎಂಸಿ ಕುಡಿಯುವ ನೀರಿಗೆ ಮೀಸಲು.

> ಈ ವರ್ಷ ಮೇ ಅಂತ್ಯದಲ್ಲೇ ಕನ್ನಂಬಾಡಿ ಕಟ್ಟೆ ನೂರಡಿ ತಲುಪಿದೆ. ಈಗಾಗಲೇ ಮುಂಗಾರು ಆರಂಭವಾಗಿರುವುದರಿಂದ ಜಲಾಶಯ ಬೇಗ ಭರ್ತಿಯಾಗುವ ನಿರೀಕ್ಷೆಯಿದೆ
> – ಕೆ.ರಘುರಾಮ್, ಮಂಡ್ಯದ ಕಾವೇರಿ ನೀರಾವರಿ ನಿಗಮದ ಅಧೀಕ್ಷಕ ಎಂಜಿನಿಯರ್

## ಮಿನಿ ನ್ಯೂಸ್

### ತಂಬಾಕು ನಿಷೇಧ ದಿನಾಚರಣೆ



ಉದಯವಾಹಿನಿ ಚಿತ್ರ

• ಉದಯವಾಹಿನಿ, ಶಿಡ್ಲಘಟ್ಟ

ವಿವಿಧ ರೂಪಗಳಲ್ಲಿ ಸಿಗುವ ಬೀಡಿ, ಸಿಗರೇಟ್ ಮುಂತಾದ ತಂಬಾಕು ಪದಾರ್ಥಗಳ ಸೇವನೆಯಿಂದ ನಾನಾ ರೀತಿಯ ಕ್ಯಾನ್ಸರ್ ರೋಗ ಕಾಡುತ್ತವೆ. ಇದರಿಂದ ಕ್ಯಾನ್ಸರ್ ಪೀಡಿತ ರೋಗಿಗಳಷ್ಟೆ ಅಲ್ಲ ಅವರ ಕುಟುಂಬದವರು ಕೂಡ ಕಷ್ಟಕ್ಕೆ ಸಿಲುಕುತ್ತಾರೆ ಎಂದು ಹಿರಿಯ ಸಿವಿಲ್ ನ್ಯಾಯಾಧೀಶ ಮೊಹಮ್ಮದ್ ರೋಷನ್ ಷಾ ತಿಳಿಸಿದರು. ತಾಲ್ಲೂಕು ಕಾನೂನು ಸೇವಾ ಸಮಿತಿ, ವಕೀಲರ ಸಂಘ, ಪೊಲೀಸ್ ಇಲಾಖೆ, ಆರೋಗ್ಯ ಇಲಾಖೆ, ಶಿಕ್ಷಣ ಇಲಾಖೆ ಆಶ್ರಯದಲ್ಲಿ ನಗರದ ಡಾಲ್ಫಿನ್ ಪದವಿಪೂರ್ವ ಕಾಲೇಜಿನಲ್ಲಿ ಶನಿವಾರ ಹಮ್ಮಿಕೊಂಡಿದ್ದ ವಿಶ್ವ ತಂಬಾಕು ನಿಷೇಧ ದಿನಾಚರಣೆ ಉದ್ಘಾಟಿಸಿ ಮಾತನಾಡಿದರು. ಜಾಹೀರಾತುಗಳಿಂದ, ಈಗಾಗಲೆ ತಂಬಾಕು ಪದಾರ್ಥ ಸೇವಿಸುತ್ತಿರುವ ಸ್ನೇಹಿತರ ಒತ್ತಾಯಕ್ಕೆ ಇಲ್ಲವೇ ಎಲ್ಲವನ್ನೂ ಅನುಭ ವಿಸುವ ಮನೋಭಾವದಿಂದ ಆರಂಭದಲ್ಲಿ ತಂಬಾಕು ಸೇವಿಸಲು ಆರಂಭಿಸುತ್ತಾರೆ. ನಂತರ ಅದು ಚಟವಾಗುತ್ತದೆ. ದೈನಂದಿನ ಕೆಲಸ ಮಾಡಲು ಕೂಡ ಆಗದಷ್ಟು ನಿತ್ರಾಣಗೊಳ್ಳುವಷ್ಟು ಮಟ್ಟಿಗೆ ತಂಬಾಕು ಸೇವನೆ ದೈಹಿಕ, ಮಾನಸಿಕ ಆರೋಗ್ಯ ಕೆಡಿಸುತ್ತದೆ ಎಂದು ವಿವರಿಸಿದರು.

### ಅಸಮಾನತೆ ಆರೋಗ್ಯಕರ ಸಮಾಜದ ಲಕ್ಷಣವಲ್ಲ: ಸೈಯದ್ ಮುಜೀಬ್

• ಉದಯವಾಹಿನಿ, ತುಮಕೂರು

ಹೆಚ್ಚುತ್ತಿರುವ ಆರ್ಥಿಕ, ಸಾಮಾಜಿಕ ಅಸಮಾನತೆಗಳು ಆರೋಗ್ಯಕರ ಸಮಾಜದ ಲಕ್ಷಣವಲ್ಲ ಎಂದು ಸಿಐಟಿಯು ಜಿಲ್ಲಾ ಘಟಕದ ಅಧ್ಯಕ್ಷ ಸೈಯದ್ ಮುಜೀಬ್ ಹೇಳಿದರು. ನಗರದಲ್ಲಿ ಹಮ್ಮಿಕೊಂಡಿದ್ದ ಸಿಐಟಿಯು 55ನೇ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದರು. ಆರ್ಥಿಕ, ಸಾಮಾಜಿಕ ಅಸಮಾನತೆ ತೊಲಗಿಸಲು ಸಿಐಟಿಯು ನಿರಂತರವಾಗಿ ಹೋರಾಟ ನಡೆಸುತ್ತಿದೆ. ಸಮಾನತೆಗಾಗಿ, ಸಂಘಟಿತ, ಅಸಂಘಟಿತ ಕಾರ್ಮಿಕರ ಹಕ್ಕುಗಳಿಗಾಗಿ ಶ್ರಮಿಸುತ್ತಿದೆ ಎಂದರು. ಸಿಐಟಿಯು ಜಿಲ್ಲಾ ಕಾರ್ಯದರ್ಶಿ ಎನ್.ಕೆ.ಸುಬ್ರಮಣ್ಯ, ಸರ್ಕಾರಗಳು ದುಡಿಯುವ ಜನರ ಹಿತರಕ್ಷಣೆ ಮರೆತು, ಉಳ್ಳವರ ಪರ ನೀತಿ ಜಾರಿ ಮಾಡುತ್ತಿವೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

### ರೌಡಿಗಳಿಗೆ ಎಚ್ಚರಿಕೆ ನೀಡಿದ ಪೊಲೀಸರು



ಉದಯವಾಹಿನಿ ಚಿತ್ರ

• ಉದಯವಾಹಿನಿ, ಹಾರೋಹಳ್ಳಿ

ಯಾವುದೇ ರೌಡಿಶೀಟರ್‌ಗಳು ಸಮಾಜಘಾತುಕ ಚಟುವಟಿಕೆಗಳಲ್ಲಿ ಭಾಗಿಯಾಗುವುದು ಕಂಡು ಬಂದರೆ ಕಾನೂನು ಪರಿಣಾಮ ಎದುರಿಸಬೇಕಾಗುತ್ತದೆ ಎಂದು ರಾಮನಗರ ಡಿ.ವೈ.ಎಸ್.ಪಿ ಶ್ರೀನಿವಾಸ್ ಎಚ್ಚರಿಕೆ ನೀಡಿದರು. ಹಾರೋಹಳ್ಳಿ ಕರ್ನಾಟಕ ಪಬ್ಲಿಕ್ ಶಾಲೆ ಆವರಣದಲ್ಲಿ ಹಾರೋಹಳ್ಳಿ, ಕಗ್ಗಲಹಳ್ಳಿ ಠಾಣೆ ವ್ಯಾಪ್ತಿಯ ರೌಡಿಶೀಟರ್‌ಗಳ ಪೆರೇಡ್‌ನಲ್ಲಿ ಮಾತನಾಡಿದರು. ಈಗಾಗಲೇ ಹಲವು ಅಪರಾಧ ಮಾಡಿ ಶಿಕ್ಷೆ ಅನುಭವಿಸಿರುವ ರೌಡಿಗಳು ಯಾವುದಾದರೂ ಕೆಲಸ ಮಾಡಿಕೊಂಡಿದ್ದರೆ ಸರಿ, ಇಲ್ಲವಾದರೆ ಕಾನೂನಿನಡಿ ಶಿಕ್ಷೆ ಕಟ್ಟಿಟ್ಟಬುತ್ತಿ ಎಂದರು. ಹಾರೋಹಳ್ಳಿ, ಕಗ್ಗಲೀಪುರ ಠಾಣೆ ವ್ಯಾಪ್ತಿಯಲ್ಲಿ 10ಕ್ಕೂ ಹೆಚ್ಚು ರೌಡಿಶೀಟರ್‌ಗಳಿದ್ದಾರೆ. ಸಮಾಜಕ್ಕೆ ಒಳಿತಾಗುವ ಕೆಲಸ ಮಾಡಿ ಎಂದು ಸೂಚಿಸಿದರು.

### ಯುಪಿಎಸ್‌ಸಿ ಪರೀಕ್ಷೆ ಉಚಿತ ತರಬೇತಿ

• ಉದಯವಾಹಿನಿ, ಶ್ರೀನಿವಾಸಪುರ

2026ನೇ ವರ್ಷದಲ್ಲಿ ಯುಪಿಎಸ್‌ಸಿ ಪರೀಕ್ಷೆ ಬರೆಯಲು ಎಲ್ಲಾ ಸಮುದಾಯದ ಆಸಕ್ತ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಬೆಂಗಳೂರು ನಗರದ ವಿಜಯನಗರ ಬಡಾವಣೆಯಲ್ಲಿ ತರಗತಿ ನಡೆಸಲಾಗುತ್ತದೆ ಎಂದು ಆರ್ಯ ವೈಶ್ಯ ಮಹಾಸಭೆಯ ಜಿಲ್ಲಾಧ್ಯಕ್ಷ ಕೆ.ಆರ್.ಶಿವಕುಮಾರ್ ಮಾಹಿತಿ ನೀಡಿದರು. ಪಟ್ಟಣದ ವಾಸವಿ ಕಲ್ಯಾಣ ಮಂಟಪದಲ್ಲಿ ಕರ್ನಾಟಕ ಆರ್ಯ ವೈಶ್ಯಮಹಾಸಭೆಯಿಂದ ಪತ್ರಿಕಾಗೋಷ್ಠಿ ನಡೆಸಿ ವಾಸವಿ ಆಕಾಡೆಮಿಯಿಂದ ನಡೆಸುವ ವಿವಿಧ ಕಾರ್ಯಾಗಾರದ ಬಗ್ಗೆ ಮಾತನಾಡಿದರು. ಎಲ್ಲಾ ತರಗತಿಗಳು ಸಂಪೂರ್ಣ ಉಚಿತವಾಗಿರುತ್ತದೆ. ಯಾವುದೇ ಸಮುದಾಯದ ವಿದ್ಯಾರ್ಥಿಗಳು ನಮ್ಮ ಸಂಸ್ಥೆಯ ನಿಯಮಾನುಸಾರ ಪ್ರವೇಶವನ್ನು ಪಡೆಯಲು ಅವಕಾಶವಿದೆ ಎಂದರು.

ಪ್ರವೇಶಾಸಕ್ತ ವಿದ್ಯಾರ್ಥಿಗಳು ವಾಸವಿ ಅಕಾಡೆಮಿಯು ನಡೆಸುವ ಸಾಮಾನ್ಯ ಪರೀಕ್ಷೆಯಲ್ಲಿ ಭಾಗವಹಿಸಿ ಉತ್ತೀರ್ಣರಾಗಬೇಕಿರುತ್ತದೆ. ರಾಷ್ಟ್ರಮಟ್ಟದಲ್ಲಿ ತರಬೇತಿ ನೀಡುತ್ತಿರುವ ಅನುಭವಿಗಳು, ಪರಿಣಿತರೂ ಆದ ಶಿಕ್ಷಕ ವೃಂದವನ್ನು ಆಕಾಡೆಮಿ ಹೊಂದಿದೆ. ಹಲವಾರು ಮಾಜಿ ಹಾಗೂ ಹಾಲಿ ಐ.ಎ.ಎಸ್ ಅಧಿಕಾರಿಗಳು ಇಲ್ಲಿನ ವಿದ್ಯಾರ್ಥಿಗಳಿಗೆ ವಿಶೇಷ ತರಬೇತಿಯನ್ನು ನೀಡುತ್ತಾ ಬಂದಿರುತ್ತಾರೆ. ತರಬೇತಿಯ ಅವಧಿ ಆರು ತಿಂಗಳು ಮಾತ್ರ ಎಂದು ಹೇಳಿದರು.

### ಮಡಿಕೇರಿಯಲ್ಲಿ 17 ಸೆಂ.ಮೀ. ಮಳೆ

• ಉದಯವಾಹಿನಿ, ಮಡಿಕೇರಿ

ಕೊಡಗು ಜಿಲ್ಲೆಯಲ್ಲಿ ರಾತ್ರಿಯಿಡೀ ಮಳೆ ಸುರಿಯಿತು. ಮಕೇರಿಯಲ್ಲಿ 17 ಸೆಂ.ಮೀ, ಭಾಗಮಂಡಲದಲ್ಲಿ 13, ಸಂಪಾಜೆ 11, ನಾಪೋಕ್ಲುವಿನಲ್ಲಿ 8 ಸೆಂ.ಮೀ ಮಳೆಯಾಗಿದೆ. ಇದರಿಂದ ಕೆಲವೆಡೆ ಮನೆಗಳಿಗೆ ಹಾನಿಯಾಗಿದೆ. ಉಪವಿಭಾಗಾಧಿಕಾರಿ ವಿನಾ ಯಕ ನಾರ್ವಡೆ ಹಾನಿಯಾದ ಪ್ರದೇಶಗಳಿಗೆ ಶನಿವಾರ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಸೋಮವಾರಪೇಟೆ ತಾಲ್ಲೂಕಿನ ಕೂತಿ ಗ್ರಾಮದ ಡಿ.ಕೆ.ಪ್ರಕಾಶ್ ಅವರ ಕಾಫಿತೋಟದಲ್ಲಿ ಭೂಕುಸಿತ ಉಂಟಾಗಿದ್ದು, ಅನೇಕ ಕಾಫಿ ಗಿಡಗಳು ನಾಶವಾಗಿವೆ. ಈ ಪ್ರದೇಶವು ಶನಿವಾರಸಂತೆಗೆ ಸಂಪರ್ಕ ಕಲ್ಪಿಸುವ ಬೆಟ್ಟದ ರಸ್ತೆಯಾಗಿದೆ. ಮಳೆ ಹೀಗೆ ಮುಂದುವರಿದರೆ ರಸ್ತೆಯು ಕುಸಿದು ಸಂಪರ್ಕ ಕಡಿತಗೊಳ್ಳುವ ಆತಂಕ ಎದುರಾಗಿದೆ.

ವಿರಾಜಪೇಟೆ– ಮೂರ್ನಾಡು ನಡುವಿನ 33 ಕೆ.ವಿ ಸಾಮರ್ಥ್ಯದ ವಿದ್ಯುತ್ ಗೋಪುರದ ಮೇಲೆ ಮರ ಬಿದ್ದು ಹಾನಿಯಾಗಿತ್ತು. ಮಳೆಯಲ್ಲೇ ಸೆಸ್ಕ್ ಸಿಬ್ಬಂದಿ ಇದನ್ನು ಸರಿಪಡಿಸಿದರು. ಹಾರಂಗಿ ಜಲಾಶಯದ ನೀರಿನ ಮಟ್ಟ ಮತ್ತೆ 2 ಅಡಿ ಏರಿಕೆಯಾಗಿದೆ. 2,859 ಅಡಿ ಗರಿಷ್ಠ ಮಟ್ಟದ ಈ ಜಲಾಶಯದಲ್ಲಿ ಸದ್ಯ 2,848.67 ಅಡಿಗಳಷ್ಟು ನೀರಿದೆ. 6,050 ಕ್ಯೂಸೆಕ್ ಒಳಹರಿವಿದೆ.

ಅಂತರಾಳದಿಂದ... EDITORIAL

# ಮಂಗಳೂರು ಸ್ಮಾರ್ಟ್ ಸಿಟಿ

## ತಗಡಿನ ತುತ್ತೂರಿಯ ಬಣ್ಣ ಕರಗಿತೆ?

ದಕ್ಷಿಣ ಕನ್ನಡ ಜಿಲ್ಲೆಗೆ ಅಂಟಿರುವ ರಕ್ತ ಕಲೆಗಳನ್ನು ತೊಳೆಯುವ ವಿಫಲ ಪ್ರಯತ್ನದ ಭಾಗವೋ ಎಂಬಂತೆ ಕಳೆದ ಒಂದು ವಾರದಿಂದ ಮಳೆ ಧೋ ಎಂದು ಸುರಿಯುತ್ತಿದೆ. ಈ ಅಕಾಲ ವರ್ಷಧಾರೆಯಿಂದ ನೇತ್ರಾವತಿ ತುಂಬಿ ಹರಿದರೂ, ಇಲ್ಲಿನ ದುಷ್ಕರ್ಮಿಗಳ, ರಾಜಕೀಯ ದುಷ್ಟ ಶಕ್ತಿಗಳ ರಕ್ತದ ದಾಹ ಇಂಗಿಲ್ಲ. ಕೆಲವು ದಿನಗಳ ಹಿಂದೆಯಷ್ಟೇ ಒಬ್ಬ ಅಮಾಯಕನನ್ನು ಕಾರಣವೇ ಇಲ್ಲದೆ ಕ್ರಿಮಿನಲ್‌ಗಳ ಗುಂಪು ಕೊಂದು ಹಾಕಿತು. ಮಳೆಗಾಲ ಹತ್ತಿರವಾಗುತ್ತಿದ್ದ ಹಾಗೆಯೇ, ಅದನ್ನು ಎದುರಿಸುವಲ್ಲಿ ಸಿದ್ಧತೆಗಳು ಬಿರುಸಿನಿಂದ ನಡೆಯಬೇಕಾಗಿತ್ತು. ದಕ್ಷಿಣ ಕನ್ನಡಜಿಲ್ಲೆಯಲ್ಲಿ ಕೋಮುಧ್ರುವೀಕರಣದ ಹೆಸರಿನಲ್ಲಿ ರಾಜಕಾರಣಿಗಳು ಮತ ಯಾಚಿಸುತ್ತಾ ಬರುತ್ತಿದ್ದಾರೆಯೇ ಹೊರತು, ಅಭಿವೃದ್ಧಿಯ ಹೆಸರಿನಲ್ಲಿ ಅಲ್ಲ. ಪರಿಣಾಮವಾಗಿ ಮಂಗಳೂರಿನ ಮೂಲಭೂತ ಸೌಕರ್ಯಗಳು ವರ್ಷದಿಂದ ವರ್ಷಕ್ಕೆ ಕಳಪೆ ಕಾರಣಗಳಿಗಾಗಿ ಸುದ್ದಿಯಾಗುತ್ತಿವೆ. ಆದುದರಿಂದಲೇ, ಇದೀಗ ನಿರಂತರ ಸುರಿಯುತ್ತಿರುವ ಮಳೆಯನ್ನು ಎದುರಿಸಲಾಗದೆ ಮಂಗಳೂರು ನಗರ ಕಂಗಾಲಾಗಿದೆ.

ಗುರುವಾರ ರಾತ್ರಿ ಸುರಿದ ಮಳೆಗೆ, ಪ್ರಧಾನ ಮಂತ್ರಿ ನರೇಂದ್ರ ಮೋದಿಯವರ 'ಸ್ಮಾರ್ಟ್ ಸಿಟಿ' ಭಾಗಶಃ ಮುಳುಗಿ ಹೋಗಿದೆ. ಜನಜೀವನ ಅಸ್ತವ್ಯಸ್ತವಾಗಿದೆ. ಕರ್ನಾಟಕದ ಅಭಿವೃದ್ಧಿಯನ್ನು ಬೆಂಗಳೂರಿನ ಬಳಿಕ ಮಂಗಳೂರು ಎತ್ತಿ ಹಿಡಿಯುತ್ತದೆ ಎಂದು ಹೇಳಿಕೊಂಡು ಬರಲಾಗುತ್ತಿದೆಯಾದರೂ, ಈ ಜಿಲ್ಲೆಯ ಕೋಮು ರಾಜಕಾರಣ ಇಲ್ಲಿನ ಅಭಿವೃದ್ಧಿಗೆ ಭಾರೀ ಹೊಡೆತವನ್ನು ನೀಡುತ್ತಿದೆ. ರಾಜಕಾರಣಿಗಳ ಭ್ರಷ್ಟಾಚಾರ, ನಿಷ್ಕ್ರಿಯತೆ, ಬೇಜವಾಬ್ದಾರಿತನ, ಉಡಾಫೆಗಳೆಲ್ಲವನ್ನು ಹಿಂದುತ್ವದ ಹೆಸರಿನಲ್ಲಿ ಮುಚ್ಚಿ ಹಾಕಲಾಗುತ್ತಿದೆ. ಆದರೆ ಸುರಿಯುತ್ತಿರುವ ಭಾರೀ ಮಳೆ ನೀರಿನಲ್ಲಿ ಮುಚ್ಚಿ ಹಾಕಿದ್ದ ಆ ವೈಫಲ್ಯಗಳೆಲ್ಲ ಎದ್ದು ಕಾಣತೊಡಗಿವೆ. ಆ ವೈಫಲ್ಯಗಳಿಗೆ ಒಂದೇ ರಾತ್ರಿ ನಾಲ್ಕು ಜೀವಗಳು ಬಲಿಯಾಗಿವೆ. ಇನ್ನಿಬ್ಬರು ನಾಪತ್ತೆಯಾಗಿದ್ದಾರೆ. ಮಧ್ಯ ರಾತ್ರಿ ನಗರದ ಬಹುತೇಕ ಭಾಗಗಳನ್ನು ನೀರು ಆವರಿಸಿಕೊಂಡಿತು. ಮನೆಗಳು ಭಾಗಶಃ ಮುಳುಗಿ ಹೋಗಿದ್ದವು. ರಸ್ತೆಗಳಲ್ಲಿ ವಾಹನಗಳು ಚಲಿಸಲಾಗದ ಸ್ಥಿತಿ ನಿರ್ಮಾಣವಾಗಿತ್ತು.

> **ಆದರೆ ಜಿಲ್ಲೆಯ ಜನಪ್ರತಿನಿಧಿಗಳು ಕೋಮು ರಾಜಕಾರಣಗಳಲ್ಲಿ ಮಗ್ನರಾಗಿದ್ದರು. ಒಳಚರಂಡಿ, ಸೇತುವೆ, ರಸ್ತೆ ಇತ್ಯಾದಿಗಳ ಬಗ್ಗೆ ಮಾತನಾಡಬೇಕಾಗಿದ್ದ ರಾಜಕಾರಣಿಗಳು ಜನಸಾಮಾನ್ಯರನ್ನು 'ಹಿಂದೂ-ಮುಸ್ಲಿಮ್' ಎಂದು ದಾರಿ ತಪ್ಪಿಸಿದ್ದರು. ಇಷ್ಟಕ್ಕೂ ಈ ಹಿಂದೆ ಬಿಜೆಪಿಯ ಮಾಜಿ ರಾಜ್ಯಾಧ್ಯಕ್ಷರೇ ಮಂಗಳೂರಿನ ಜನರಿಗೆ ನೀವು ಸೇತುವೆ, ರಸ್ತೆ ಎಂದು ಮಾತನಾಡಬೇಡಿ. ಲವ್‌ಜಿಹಾದ್ ಬಗ್ಗೆ ಯೋಚಿಸಿ ಎಂದು ಕರೆ ನೀಡಿದ್ದರು.**

ಉಳ್ಳಾಲ ತಾಲ್ಲೂಕಿನ ಮಂಜನಾಡಿ ಗ್ರಾಮದಲ್ಲಿ ಮನೆಯೊಂದರ ಮೇಲೆ ಗುಡ್ಡ ಕುಸಿದು ಬಿದ್ದ ಪರಿಣಾಮ ಇಬ್ಬರು ಪುಟಾಣಿಗಳ ಸಹಿತ ಮೂವರು ಮೃತಪಟ್ಟಿದ್ದಾರೆ. ಅಲ್ಲದೆ ಈ ಮನೆಯಲ್ಲಿದ್ದ ಗಾಯಗೊಂಡ ಇತರ ಮೂವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಉಳ್ಳಾಲ ತಾಲ್ಲೂಕಿನ ಬೆಳ್ಮಗ್ರಾಮದ ಕಾನಕೆರೆ ಎಂಬಲ್ಲಿ ಗುಡ್ಡ ಜರಿದು ಬಿದ್ದ ಪರಿಣಾಮ ಕಾನಕೆರೆಯ ಹತ್ತು ವರ್ಷದ ಬಾಲಕಿ ಮೃತಪಟ್ಟ ಘಟನೆ ಶುಕ್ರವಾರ ಮುಂಜಾವು ನಡೆದಿದೆ. ಮಂಗಳೂರು ಹೊರವಲಯದ ಉಳ್ಳಾಲಬೈಲ್, ಕೋಟೆಕಾರು, ಬೀರಿ, ಮಿಷನ್ ಸ್ಟ್ರೀಟ್, ಎಕ್ಕೂರು, ಜಪ್ಪಿನಮೊಗರು, ಕೊಟ್ಟಾರ ಚೌಕಿ, ಕುಂಪಲ ಸೇರಿದಂತೆ ನಗರದ ಬಹುತೇಕ ತಗ್ಗು ಪ್ರದೇಶಗಳಲ್ಲಿ ಮಳೆ ನೀರು ನುಗ್ಗಿ ನೂರಾರು ಮನೆಗಳು ಜಲಾವೃತಗೊಂಡಿವೆ. ಹಲವು ಕಡೆಗಳಲ್ಲಿ ಗುಡ್ಡ ಕುಸಿತ, ತಡೆಗೋಡೆ, ದರೆ ಕುಸಿತ, ಮನೆ ಕುಸಿತದಂತಹ ಘಟನೆಗಳು ನಡೆದಿವೆ. ಜೋಕಟ್ಟೆ ಗ್ರಾಪಂ ಮುಂಭಾಗದ ಗುಡ್ಡ ಕುಸಿದು ಮನೆಯೊಂದು ಬೀಳುವ ಹಂತಕ್ಕೆ ತಲುಪಿದೆ. 10ಕ್ಕೂ ಅಧಿಕ ಕಡೆಗಳಲ್ಲಿ ಮರ ಬಿದ್ದು ವಿದ್ಯುತ್ ಕಂಬಗಳು ಮುರಿದು ಬಿದ್ದಿವೆ. ಕೆತ್ತಿಕಲ್ ಭಾಗದಲ್ಲಿ ಗುಡ್ಡ ಕುಸಿತದಿಂದ ಸಂಚಾರದಲ್ಲಿ ವ್ಯತ್ಯಯ ಉಂಟಾಗಿದೆ. 200ಕ್ಕೂ ಹೆಚ್ಚು ವಿದ್ಯುತ್ ಕಂಬಗಳು ತುಂಡಾಗಿದ್ದು, 40ಕ್ಕೂ ಹೆಚ್ಚು ಮನೆಗಳಿಗೆ ಭಾಗಶಃ ಹಾನಿಯಾಗಿದೆ. ಸ್ಮಾರ್ಟ್ ಸಿಟಿ ಯೋಜನೆಯಡಿಯಲ್ಲಿ ಮಂಗಳೂರಿನಲ್ಲಿ ಕೇಂದ್ರ ಮತ್ತು ರಾಜ್ಯ ಸರಕಾರಗಳ ಸುಮಾರು 1,000 ಕೋಟಿ ರೂಪಾಯಿ ಅನುದಾನದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ ಎಂದು ಸ್ಥಳೀಯಾಡಳಿತ ಹೇಳುತ್ತಲೇ ಬರುತ್ತಿದೆ. 2016ರಲ್ಲಿ ಮಂಗಳೂರು ಸ್ಮಾರ್ಟ್ ಸಿಟಿ ಯೋಜನೆಗೆ ಆಯ್ಕೆಯಾಯಿತು. ಐದು ವರ್ಷಗಳಲ್ಲಿ ಅನುಷ್ಠಾನಗೊಳ್ಳಬೇಕಾದ ಯೋಜನೆಗಳು 9 ವರ್ಷ ಕಳೆದರೂ ತನ್ನ ಗುರಿಯನ್ನು ತಲುಪಿಲ್ಲ. ಯೋಜನೆಯ ಗಡುವು ವಿಸ್ತರಣೆಗೊಳ್ಳುತ್ತಲೇ ಹೋಗುತ್ತಿದೆ. ಕೈಗೆತ್ತಿಕೊಂಡ 105 ಕಾಮಗಾರಿಗಳಲ್ಲಿ ಇನ್ನೂ ಎಂಟು ಪ್ರಮುಖ ಕಾಮಗಾರಿಗಳು ಪೂರ್ಣವಾಗಿಲ್ಲ. ಪೂರ್ತಿಗೊಂಡ ಕಾಮಗಾರಿಗಳಲ್ಲಿ ಆಗಿರುವ ಎಡವಟ್ಟುಗಳು ಮಳೆಗಾಲದಲ್ಲಿ ಹಲವು ಸಮಸ್ಯೆಗಳನ್ನು ಸೃಷ್ಟಿಸಿವೆ. ಕೃತಕ ನೆರೆ ಬರುವುದಕ್ಕೆ ಈ ಕಾಮಗಾರಿಗಳಲ್ಲಾಗಿರುವ ಲೋಪಗಳೇ ಬಹುಮುಖ್ಯ ಕಾರಣ ಎಂದು ತಜ್ಞರು ಹೇಳುತ್ತಾರೆ. ಮಂಗಳೂರಿನ ಪಂಪ್‌ವೆಲ್ ವೃತ್ತದ ಮೇಲ್‌ಸೇತುವೆಯಂತೂ ಹತ್ತು ಹಲವು ಕಾರಣಗಳಿಗಾಗಿ ಈಗಲೂ ಸುದ್ದಿಯಲ್ಲಿದೆ. ಮಾಜಿ ಸಂಸದ ನಳಿನ್ ಕುಮಾರ್ ಕಟೀಲು ಅತಿ ಹೆಚ್ಚು ಟ್ರೋಲ್‌ಗೊಳಗಾದುದು ಈ ಸೇತುವೆ ಕಾರಣದಿಂದ ಪಂಪ್‌ವೆಲ್ ಮೇಲ್‌ಸೇತುವೆ ಮತ್ತು ಕಟೀಲು ಅವರನ್ನು ಬೆಸೆದ ನೂರಾರು ಜೋಕುಗಳು ಮಂಗಳೂರನ್ನು ಈಗಲೂ ರಂಜಿಸುತ್ತವೆ. ಕಳೆದ ಒಂದು ವಾರದಲ್ಲಿ ಮಂಗಳೂರು ಮಳೆಗೆ ತತ್ತರಿಸುತ್ತಿದ್ದ ಹಾಗೆಯೇ ಕಟೀಲು ಮತ್ತು ಪಂಪ್‌ವೆಲ್ ಜೋಕುಗಳು ಮತ್ತೆ ಜೀವ ಪಡೆದುಕೊಂಡಿವೆ. ಈ ಭಾಗದಲ್ಲಿ ಸೃಷ್ಟಿಯಾಗಿರುವ ಕೃತಕ ನೆರೆಗೆ ಮೇಲ್‌ಸೇತುವೆ ನಿರ್ಮಾಣದಲ್ಲಾದ ಲೋಪಗಳೇ ಕಾರಣ ಎಂದು ನಗರದ ಜನರು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ. ಈ ಸೇತುವೆ ನಿರ್ಮಾಣಕ್ಕೆ ಸುದೀರ್ಘ ಸಮಯವನ್ನು ತೆಗೆದುಕೊಳ್ಳಲಾಯಿತು. ಈ ಸೇತುವೆ ನಿರ್ಮಾಣಕ್ಕಾಗಿ ಜನರು ಸಾಕಷ್ಟು ತೊಂದರೆಗಳನ್ನು ಸಹಿಸಿಕೊಂಡಿದ್ದಾರೆ.

---




• ಹಿಂದಿನ ಸಂಚಿಕೆಯಿಂದ **78ನೆಯ ಅಧ್ಯಾಯ**

ಅಂಥ ರಾಜ್ಯದಲ್ಲಿ ಯಾಗವನ್ನು ಮಾಡಿಸುವ ಬ್ರಾಹ್ಮಣರು ತಮಗೆ ದಕ್ಷಿಣೆ ಹಸ್ತಗತವಾದಕೂಡಲೆ ಯಜಮಾನನನ್ನು ಉದಾಸೀನಮಾಡಿ ಬಿಟ್ಟು ಬಿಡುವರು. ನಟರು ನರ್ತಕರು ಗಾಯಕರು ಮೊದಲಾದ ಜನರು ಸಂತೋಷವನ್ನುಂಟುಮಾಡಲಾರರು. ಪುರಾಣ ಪುಣ್ಯಕಥೆಗಳನ್ನು ಅಭ್ಯಾಸ ಮಾಡಿದವರು ತಮ್ಮ ಚಾತುರದಿಂದ ಪರರಿಗೆ ಸಂತೋಷಮಾಡಲಾರರು. ಅರಸನಿಲ್ಲದ ರಾಜ್ಯದಲ್ಲಿ ಹೆಣ್ಣು ಮಕ್ಕಳು ಸರ್ವಾಭರಣಭೂಷಿತರಾಗಿ ವಿನೋದಾರ್ಥವಾಗಿ ಉದ್ಯಾನವನಕ್ಕೆ ಹೋಗಿ ಸಾಯಂಕಾಲದಲ್ಲಿ ತಿರುಗಿ ಬರುವಂತಿಲ್ಲ. ಕಾಮುಕರಾದ ಪುರುಷರು ಉತ್ತಮಾಶ್ವಗಳನ್ನೇರಿಕೊಂಡು ತಮ್ಮ ಸ್ತ್ರೀಸಮೇತರಾಗಿ ವನಕ್ಕೆ ಹೋಗುವಂತಿಲ್ಲ, ಕೋಮಟಿಗರೂ ದ್ರವ್ಯಸಂಪನ್ನರಾದವರೂ ವ್ಯಾಪಾರ ವಿಲ್ಲದೆ ತಮ್ಮ ಮನೆಯ ಬಾಗಿಲುಗಳನ್ನು ಮುಚ್ಚಿಕೊಂಡು ಮಲಗುವರು. ಮದ್ದಾನೆಗಳು ಘಂಟೆಯನ್ನು ಕಟ್ಟಿಕೊಂಡು ಚೌಬೀದಿಗಳಲ್ಲಿ ಬರುವಹಾಗಿಲ್ಲ. ಬಿಲ್ಲುಸಾಧನೆ ಮಾಡುವ ಪಟುಭಟರಿರಲಾರರು, ವ್ಯಾಪಾರವನ್ನು ಮಾಡುವ ವೈಶ್ಯರು ದೂರ ಹೋಗಿ ತಮ್ಮ ವ್ಯಾಪಾರವನ್ನು ನಡೆಯಿಸಿ ಸುಖವಾಗಿ ಬರಲಾರರು. ಆತ್ಮಜ್ಞಾನಿಗಳಾಗಿ ವಿರಕ್ತರಾಗಿ ಎಲ್ಲಿ ಸಾಯಂಕಾಲವಾದರೆ ಅಲ್ಲಿ ಮಲಗುವಂಥ ಮುನಿಗಳು ಸಂಚರಿಸುವಹಾಗಿಲ್ಲ. ಇದ್ದ ವಸ್ತುಗಳನ್ನು ರಕ್ಷಿಸಿಕೊಂಡು ಮತ್ತೆ ಬೇಕಾದ ವಸ್ತುಗಳನ್ನು ಸಂಪಾದಿಸುವುದಕ್ಕಿಲ್ಲ. ಸೇನೆಯು ಶತ್ರುಗಳನ್ನು ಕೊಂದು ಜಯಿಸುವಂತಿಲ್ಲ. ಉತ್ತಮಾಶ್ವಗಳನ್ನು ಕಟ್ಟಿಕೊಂಡು ರಥಾರೂಢರಾಗಿ ಸಂಚರಿಸುವಂತಿಲ್ಲ. ಸಂನ್ಯಾನಾಶ್ರಮದಲ್ಲಿರುವವರು ವನದಲ್ಲಿ ವಾಸಮಾಡುತ್ತ ಸುಖವಾಗಿರುವಹಾಗಿಲ್ಲ. ಗೃಹಸ್ಥರು ತಮ್ಮ ಕಾರ್ಯಾರ್ಥವಾಗಿ ಗಂಧಪುಷ್ಪಾಕ್ಷತೆ ಮೋದಕಾದಿಗಳಿಂದ ತಮ್ಮ ಇಷ್ಟದೇವತಾರ್ಚನೆಯನ್ನು ನಿಯಮದಿಂದ ಮಾಡುವುದಕ್ಕಾಗುವುದಿಲ್ಲ. ರಾಜಕುಮಾರರು ಶ್ರೀಗಂಧಾನುಲೇಪನ ಮಾಡಿಕೊಂಡು ಶಿಖೆಗಳಲ್ಲಿ ಪುಷ್ಪಗಳನ್ನು ಧರಿಸಿಕೊಂಡು ಪುಷ್ಪಿತಗಳಾದ ಮರಗಳಂತೆ ಒಪ್ಪುವಹಾಗಿಲ್ಲ. ಅರಸನಿಲ್ಲದ ರಾಜ್ಯವು ಉದಕವಿಲ್ಲದ ನದಿಯಂತೆಯೂ ಹುಲ್ಲಿಲ್ಲದ ವನದಂತೆಯೂ ಕಾವಲಿಲ್ಲದ ಗೋಸಮೂಹದಂತೆಯೂ ಕಾಣುತ್ತದೆ. ರಥಕ್ಕೆ ಕುರುಹು ಧ್ವಜಪಟ, ಅಗ್ನಿಗೆ ಕುರುಹು ಧೂಮ. ರಾಜ್ಯಕ್ಕೆ ಕುರುಹು ಅರಸನು. ಅರಸನಿಲ್ಲದ ರಾಜ್ಯದಲ್ಲಿ ದೊಡ್ಡಮಕ್ಸ್ಯಗಳು ಚಿಕ್ಕ ಮತ್ಸ್ಯಗಳನ್ನು ನುಂಗುವಂತೆ ಬಲವಂತರಾದವರು ತಮಗಿಂತಲೂ ಬಡವರಾದವರನ್ನು ನುಂಗಿಬಿಡುತ್ತಾರೆ. ತಮ್ಮ ಮೇರೆಮಾರಾದೆಗಳನ್ನು ಮೀರಿ ಶಂಕಾತಂಕವಿಲ್ಲದೆ ಮಾಡಬಾರದ ಕೃತ್ಯವನ್ನು ಮಾಡುತ್ತ ಅಯೋಗ್ಯರಾದವರೇ ಪ್ರಭುತ್ವವನ್ನು ಮಾಡಲಾರಂಭಿಸುವರು. ಶರೀರಕ್ಕೆ ದೃಷ್ಟಿಯು ಹೇಗೆ ಪ್ರಧಾನವೋ ಹಾಗೆ ರಾಜ್ಯದ ಸದ್ವರ್ತನೆಗಳಿಗೆ ಅರಸನೇ ಪ್ರಧಾನನು. ಸತ್ಯಸ್ವರೂಪನ ಧರ್ಮಸ್ವರೂಪನೂ ಸತ್ಕುಲಾಚಾರವನ್ನು ನಡೆಯಿಸುವಂಥವನೂ ಸಮಸ್ತ ಜನರಿಗೂ ಹಿತೋಪದೇಶವನ್ನು ಮಾಡುವವನೂ ಅರಸನು, ರಾಜನು ಲೋಕದಲ್ಲಿ ಇಂದ್ರನು ಕೊಡುವ ಭೋಗವನ್ನು ಕೊಡುವನು. ಯಮನು ಮಾಡುವ ದಂಡವನ್ನು ಮಾಡುವನು. ವರುಣನಂತೆ ತಂಪುಮಾಡುವನು. ಕುಬೇರನಂತೆ ದ್ರವ್ಯವನ್ನು ಕೊಡುವನು. ಆದ್ದರಿಂದ ಅರಸನಿಲ್ಲದಿದ್ದರೆ ಅಂಧಕಾರವಿದ್ದಂತೆ ಲೋಕವೆಲ್ಲವೂ ಮುಂದುಗೆಡುವುದು, ಅರಸನಿದ್ದರೆ, ತಡಿಯು ಸಮುದ್ರವೇಗವನ್ನು ನಿಲ್ಲಿಸುವಂತೆ ಎಲ್ಲರನ್ನೂ ವಶಮಾಡಿಕೊಂಡು ಮೇರೆ ಮರಾದೆಯಲ್ಲಿ ನಡೆಯಿಸುವನು.

**ಮುಂದುವರಿಯುವುದು...**

---

# ಪ್ರಪಂಚದ 3 ಸರ್ವಶ್ರೇಷ್ಠ ಪುರಾತನ

## ಹಿನ್ನೆಲೆಯುಳ್ಳ ಭಾಷೆಗಳಲ್ಲಿ ಕನ್ನಡ ಭಾಷೆ ಸೇರಿದೆ

■ ಚನ್ನೇಗೌಡ ಉಜ್ಜನಿ ಚಲುವಯ್ಯ



● ಉದಯವಾಹಿನಿ ವಿಶೇಷ

ನಮ್ಮ ಹೆಮ್ಮೆಯ ಕನ್ನಡ ಭಾಷೆಗೆ ಆದರದ್ದೆಯಾದ ಯೋಗ್ಯತೆ ಗೌರವ ಸದಾ ಇದ್ದೇ ಇದೆ. ಹಿಂದೆ ಮುಂದೆ ಯೋಚನೆ ಮಾಡದೇ ಸಡನ್ನಾಗಿ ಈ ರೀತಿ ಕಾಮಲ್ ಹಾಸನ್ ರವರು ಮಾತಾಡ ಬಾರದಿತ್ತು.

ಈ ವಿಷಯದ ಬಗ್ಗೆ ಡಾ. ರಾಜಕುಮಾರ್ ರವರು ಇದ್ದಿದ್ರೆ ಇಷ್ಟರಲ್ಲಿ ಕಮಲಹಾಸನ್ ಅವರಿಗೆ ಖಂಡಿತ ತಕ್ಕ ಉತ್ತರ ಕೊಡುತ್ತಿದ್ದರು. ಆದರೆ ಮಗ ಶಿವರಾಜ ಕುಮಾರ್ ರವರು ಯಾಕೋ ಸುಮ್ಮನಾಗಿದ್ದರೆ.

ಕಮಲ್ ಹಾಸನ್ ಅವರು ತಮ್ಮ ಮಾತೃಭಾಷೆಯನ್ನು ವೈಭವೀಕರಿಸುವ ಪ್ರಯತ್ನದಲ್ಲಿ ಕನ್ನಡಕ್ಕೆ ಅಗೌರವ ತೋರಿರುವುದು ತಪ್ಪು. ಎಲ್ಲೆಡೆ ಕನ್ನಡಿಗರು ಆಕ್ರೋಶ ವ್ಯಕ್ತಪಡಿಸಿದ್ದು, ಸಾಮಾಜಿಕ ಜಾಲತಾಣದಲ್ಲಿ ತೀವ್ರವಾದ ವಿರೋಧ ದಿನೇ ದಿನೇ ಹೆಚ್ಚುತ್ತಿದೆ. ಭಾಷೆ ಭಾಷೆಗಳ ಬಗ್ಗೆ ಈ ರೀತಿ ತಿಳಿಯದೇ ತಪ್ಪಾಗಿ ಮಾತನ್ನಾಡಿ ಒಡಕು ಮೂಡಿಸುವುದು ಸರಿಯಲ್ಲ. ಸಾಹಿತ್ಯ ಪರಿಷತ್ತಿನ ವೇದಿಕೆಯಲ್ಲಿ ಹಿರಿಯರು ಹೇಳಿದ್ದು ಪ್ರಪಂಚದಲ್ಲಿ ಮೂರು ಸರ್ವಶ್ರೇಷ್ಠ ಹಾಗೂ ಪುರಾತನ ಹಿನ್ನೆಲೆಯುಳ್ಳ ಭಾಷೆಗಳಲ್ಲಿ ಕನ್ನಡ ಭಾಷೆ ಇದೆ ಎಂದು ಹೇಳಿದ್ದಾರೆ ಹಾಗಂತಾ ನಾವುಗಳು ಬೀಗುತ್ತಿಲ್ಲ. ಎಂಟು ಜ್ಞಾನಪೀಠ ಪುರಸ್ಕಾರ ಹೊಂದಿರುವ ಏಕೈಕ ಭಾಷೆ ಅದುವೇ ನಮ್ಮ ಹೆಮ್ಮೆಯ ಕನ್ನಡ ಭಾಷೆ. ನಾವುಗಳು ಅಕ್ಕಪಕ್ಕದ ಸಹೋದರ ಭಾಷೆಗೆ ಗೌರವ ನೀಡುವ ಸಹೃದಯಿಗಳು. ಇದೊಂದನ್ನು ಅರ್ಥ ಮಾಡಿಕೊಳ್ಳಿ ಕಮಲ್ ಹಾಸನ್ ರವರೇ ನೀವು ಬೆಳೆಯುವ ಮುನ್ನ ಈ ನೆಲದಲ್ಲಿ ಈ ಭಾಷೆಯ ಗಂಧವನ್ನು ಸವಿದು ಹೋಗಿದ್ದೀರಿ, ನಿಮ್ಮಲ್ಲಿ ಸದಾ ಗೌರವ ಸುಚಿಸುವ ಸದ್ಭಾವನಾ ವ್ಯಕ್ತಿತ್ವವಿರಬೇಕು.

ನೀವುಗಳು ದೇವರು ಭೂಮಿಗೆ ಬರುವುದಕ್ಕಿಂತಲೂ ಮೊದಲು ನಿಮ್ಮ ಭಾಷೆ ಹುಟ್ಟಿತ್ತು ಎಂದು ಹೇಳಿದರೂ ಅಚ್ಚರಿ ಪಡಬೇಕಿಲ್ಲ, ಕನ್ನಡಕ್ಕೆ ತನ್ನದೇ ಆದ ಸ್ವಂತ ಲಿಪಿ ಇದೆ. ನಮಗೆ ಇರುವಷ್ಟು ಅಕ್ಷರಗಳು ನಿಮ್ಮಲ್ಲಿ ಇಲ್ಲವೇ ಇಲ್ಲಾ, ತನ್ನದೇ ಆದ ಅಸ್ಮಿತೆ ಇದೆ. ಸಾವಿರಾರು ವರ್ಷಗಳ ಇತಿಹಾಸವೂ ಇದೆ. ಪ್ರಪಂಚದ ಬೇರೆ ಬೇರೆ ದೇಶಗಳಲ್ಲಿ ಕನ್ನಡ ಭಾಷೆಯಲ್ಲಿ ಪುಸ್ತಕಗಳನ್ನು ಮುದ್ರಿಸಿ ಪತ್ರದ ಮೂಲಕ ಮಕ್ಕಳಿಗೆ ಅತ್ಯುತ್ತಮ ಶಿಕ್ಷಣ ನೀಡುತ್ತಿದ್ದಾರೆ. ದೇಶವೇ ಕಣ್ತೆರೆದು ನೋಡುವಷ್ಟು ಎತ್ತರಕ್ಕೆ ಬೆಳೆದು ನಿಲ್ಲುವುದು ಮುಖ್ಯವಲ್ಲ, ಆ ದೊಡ್ಡ ಮಟ್ಟದ ವ್ಯಕ್ತಿತ್ವವನ್ನು ಉಳಿಸಿಕೊಂಡು ಹೋಗುವುದು ಬಹಳ ಮುಖ್ಯ, ಸದಾ ಸಮಾಜಕ್ಕೆ ಉತ್ತಮ ಸಂದೇಶ ನೀಡುವ ಸಹೃದಯಿಯಾಗಿ ಬದುಕುವುದು ಬಹಳ ಮುಖ್ಯ.



---

# ಹಣಕಾಸು ವರ್ಷದಲ್ಲಿ ಇಫ್ಕೋ 3,811 ಕೋಟಿ ರೂ. ಲಾಭ ದಾಖಲಿಸಿದೆ

• ಉದಯವಾಹಿನಿ ಬೆಂಗಳೂರು

ಭಾರತೀಯ ರೈತರ ರಸಗೊಬ್ಬರ ಸಹಕಾರಿ ಲಿಮಿಟೆಡ್ (ಇಫ್ಕೋ) 2024-25ನೇ ಹಣಕಾಸು ವರ್ಷದಲ್ಲಿ 3,811 ಕೋಟಿ ರೂ. ಲಾಭ ದಾಖಲಿಸಿದ್ದು, ನ್ಯಾನೋ ರಸಗೊಬ್ಬರಗಳ ಮಾರಾಟದಲ್ಲಿ ಶೇ. 47 ರಷ್ಟು ಹೆಚ್ಚಳವಾಗಿದೆ.

ಇಫ್ಕೋದ ಅದ್ಭುತ ಬೆಳವಣಿಗೆಯ ಅಂಕಿಅಂಶಗಳು ಸಹಕಾರದಿಂದ ಸಮೃದ್ಧಿಯ ಕನಸನ್ನು ನನಸಾಗಿಸುತ್ತಿರುವುದು ದೇಶದ ಇಡೀ ಸಹಕಾರಿ ವಲಯಕ್ಕೆ ಹೆಮ್ಮೆಯ ವಿಷಯವಾಗಿದೆ. ಸಂಘವು ಸತತ ಮೂರು ಹಣಕಾಸು ವರ್ಷಗಳಲ್ಲಿ 3,000 ಕೋಟಿ ರೂ. ಗಳಿಗಿಂತ ಹೆಚ್ಚು ಲಾಭ ದಾಖಲಿಸಿದೆ ಎಂದು ಇಫ್ಕೋ ಅಧ್ಯಕ್ಷ ದಿಲೀಪ್ ಸಂಘಾನಿ ಹೇಳಿದರು.

ಈ ಹಣಕಾಸು ವರ್ಷದಲ್ಲಿ (2024-2025) 365.09 ಲಕ್ಷ ಬಾಟಲಿ ನ್ಯಾನೋ ರಸಗೊಬ್ಬರಗಳನ್ನು ಮಾರಾಟ ಮಾಡಲಾಗಿದೆ, ಹಿಂದಿನ ಹಣಕಾಸು ವರ್ಷದಲ್ಲಿ (2023-2024) 248.95 ಲಕ್ಷ ಬಾಟಲಿಗಳು ಮಾರಾಟವಾಗಿದ್ದವು. 24-25ನೇ ಹಣಕಾಸು ವರ್ಷದಲ್ಲಿ ಇಫ್ಕೋ 41,244 ಕೋಟಿ ರೂ. ವಹಿವಾಟು ದಾಖಲಿಸಿದೆ. ಕಳೆದ 23 ವರ್ಷಗಳಿಂದ ಸತತವಾಗಿ, ಇಫ್ಕೋ ತನ್ನ ಸದಸ್ಯರಿಗೆ ಪಾವತಿಸಿದ ಷೇರು ಬಂಡವಾಳದ ಮೇಲೆ ಶೇಕಡಾ 20 ರಷ್ಟು ಲಾಭಾಂಶವನ್ನು ನೀಡುತ್ತಾ ಬಂದಿದೆ ಎಂದು ಸಂಘಾನಿ ಹೇಳಿದರು. ಸಮಾನ ಮತ್ತು ಸುಸ್ಥಿರ ಬೆಳವಣಿಗೆಗೆ ಅದರ ಸಮರ್ಪಣೆ ಮತ್ತು ಬದ್ಧತೆಯನ್ನು ಎತ್ತಿ ತೋರಿಸುತ್ತದೆ.

ನ್ಯಾನೊ-ರಸಗೊಬ್ಬರಗಳು ಸಮಾಜದ ಪ್ರಮುಖ ಕೇಂದ್ರ ಬಿಂದುವಾಗಿದೆ, ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರ ಸಚಿವಾಲಯದ ಬೆಂಬಲ, ವ್ಯಾಪಕ ಜಾಗೃತಿ ಅಭಿಯಾನಗಳು ಮತ್ತು ಸಂಶೋಧನೆಯು ರೈತರಲ್ಲಿ ಉತ್ಪನ್ನಗಳ ಸ್ವೀಕಾರವನ್ನು ಹೆಚ್ಚಿಸಲು ಸಮಾಜಕ್ಕೆ ಸಹಾಯ ಮಾಡಿದೆ ಎಂದು ಅವರು ಹೇಳಿದರು. ಮಾರಾಟವಾದ 365 ಲಕ್ಷ ಬಾಟಲಿಗಳಲ್ಲಿ, 268 ಲಕ್ಷ ಬಾಟಲಿಗಳು ಇಫ್ಕೋ ನ್ಯಾನೋ ಯೂರಿಯಾ ಪ್ಲಸ್ (ಲಿಕ್ವಿಡ್) 97 ಲಕ್ಷ ಬಾಟಲಿಗಳು ಇಫ್ಕೋ ನ್ಯಾನೋ ಡ್ಯಾಪ್ (ಲಿಕ್ವಿಡ್) 2024-25ರ ಹಣಕಾಸು ವರ್ಷದಲ್ಲಿ ಮಾರಾಟವಾಗಿವೆ. ಇಫ್ಕೋ ನ್ಯಾನೋ ಯೂರಿಯಾ ಪ್ಲಸ್ (ಲಿಕ್ವಿಡ್) ಮಾರಾಟವು ಶೇಕಡಾ 31 ರಷ್ಟಿದೆ ಮತ್ತು ಇಫ್ಕೋ ನ್ಯಾನೋ ಡ್ಯಾಪ್ (ಲಿಕ್ವಿಡ್) 2023-24 ರ ಹಣಕಾಸು ವರ್ಷಕ್ಕೆ ಹೋಲಿಸಿದರೆ ಶೇಕಡಾ 118 ರಷ್ಟು ಹೆಚ್ಚಾಗಿದೆ.

ಈ ಮಾರಾಟದ ಪ್ರಮಾಣವು 12 ಲಕ್ಷ ಮೆಟ್ರಿಕ್ ಟನ್ ಸಾಂಪ್ರದಾಯಿಕ ಯೂರಿಯಾ ಮತ್ತು 4.85 ಮೆಟ್ರಿಕ್ ಟನ್ ಸಾಂಪ್ರದಾಯಿಕ ಡ್ಯಾಪ್‌ಗೆ ಸಮಾನವಾಗಿದೆ.




---

# ಐಸ್‌ಕ್ಯೂಬ್ ಮಸಾಜ್

## ಸೌಂದರ್ಯ ಹೆಚ್ಚಾಗುತ್ತಾ?

ಬೆಳಗಿನ ಜಾವ ಸಣ್ಣ ತುಂಡು ಐಸ್ ಕ್ಯೂಬ್ ಅನ್ನು ಹತ್ತಿ ಬಟ್ಟೆಯಲ್ಲಿ ಸುತ್ತಿಕೊಂಡು ಮುಖದ ಮೇಲೆ ನಿಧಾನಕ್ಕೆ ಮಸಾಜ್ ಮಾಡುವುದರಿಂದ, ತ್ವಚೆಯ ಮೇಲಿನ ಮೊಡವೆ, ಸುಕ್ಕು, ಮುಖ ಊದಿಕೊಂಡಿರುವ ಸಮಸ್ಯೆಗಳೆಲ್ಲಾ ನಿಧಾನಕ್ಕೆ ಕಡಿಮೆ ಆಗುತ್ತಾ ಬರುತ್ತದೆಯಂತೆ ಎನ್ನುತ್ತಾರೆ ನಾಲ್ಕು ಜನರ ಜೊತೆಗೆ ಸೇರುವಾಗ, ನಾವು ಕೂಡ ಆಕರ್ಷಕವಾಗಿ ಕಾಣಬೇಕು, ನೋಡಲು ಸ್ಮಾರ್ಟ್ ಆಗಿ ಕಟ್ಟುಮಸ್ತಾದ ದೈಹಿಕ ಆಕಾರವನ್ನು ಹೊಂದಿರಬೇಕು, ಮುಖದಲ್ಲಿ ಸುಕ್ಕು ನೆರಿಗೆ, ಮೊಡವೆಗಳು ಇರಬಾರದು, ವಯಸ್ಸಾಗಿದ್ದರೂ ಕೂಡ ವಯಸ್ಸಾಗಿರುವ ಯಾವುದೇ ರೋಗ ಲಕ್ಷಣಗಳು ಮುಖದಲ್ಲಿ ಕಾಣಿಸಿಕೊಳ್ಳಬಾರದು, ಎನ್ನುವ ಆಸೆ ಎಲ್ಲರಿಗೂ ಕೂಡ ಇರುತ್ತದೆ. ಇದಕ್ಕಾಗಿ ಅವರು-ಇವರು ಹೇಳಿರುವ ಸಲಹೆಗಳನ್ನು ಚಾಚೂ ತಪ್ಪದೇ ಅನುಸರಿಸುತ್ತಾರೆ, ಅಲ್ಲದೆ ಕೆಲವೊಂದು ಮನೆಮದ್ದುಗಳ ಜೊತೆಗೆ, ಮಾರುಕಟ್ಟೆಯಲ್ಲಿ ಸಿಗುವಂತಹ ದುಬಾರಿ ಬೆಲೆಯ ಕ್ರೀಮ್ ಪೌಡರ್‌ಗಳನ್ನು ಕೂಡ ಬಳಕೆ ಮಾಡುವರು, ಆದರೆ ಕೊನೆಗೆ ಇದರಿಂದ ಏನೂ ಫಲಿತಾಂಶಗಳು ಸಿಗದೇ ಹೋದಾಗ, ನಮ್ಮ ಎಲ್ಲಾ ಪ್ರಯತ್ನವು ಕೂಡ ನೀರಿನ ಮೇಲೆ ಇರಿಸಿದ ಹೋಮದಂತೆ ಆಗಿಬಿಟ್ಟಿತು ಎಂದು ತಮ್ಮನ್ನೇ ತಾವು ಶಪಿಸಿಕೊಳ್ಳುತ್ತಾರೆ...



**ಮುಖಕ್ಕೆ ಐಸ್ ಉಜ್ಜಿಕೊಳ್ಳುವುದು:** ಮುಖದ ಸೌಂದರ್ಯ ನೈಸರ್ಗಿಕವಾಗಿ ಕಾಂತಿಯುತವಾಗಿ ಇರಬೇಕೆಂದರೆ, ನಾವು ಅನುಸರಿಸುತ್ತಿರುವ ದೈನಂದಿನ ಆಹಾರ ಪದ್ಧತಿಯ ಜೊತೆಗೆ ಜೀವನಶೈಲಿಯೂ ಕೂಡ ಸರಿಯಾಗಿಟ್ಟು ಕೊಳ್ಳಬೇಕು. ಅನಾರೋಗ್ಯಕಾರಿ ಆಹಾರಪದ್ಧತಿಯಿಂದ ದೂರ ವಿದ್ದು, ಕೆಲವೊಂದು ಆರೋಗ್ಯಕಾರಿ ಜೀವನಶೈಲಿಯನ್ನು ಅನುಸರಿಸಬೇಕು. ಅಷ್ಟೇ ಅಲ್ಲದೆ ಮುಖದ ಸೌಂದರ್ಯವನ್ನು ಹೆಚ್ಚಿರುವ ಕೆಲವೊಂದು ನೈಸರ್ಗಿಕ ಟ್ರಿಕ್ಸ್ ಅನ್ನು ಅನುಸರಿಸ ಬೇಕು! ಅದೇ ಸೌಂದರ್ಯ ವೃದ್ಧಿಗಾಗಿ ಮುಖಕ್ಕೆ ಐಸ್ ಉಜ್ಜಿಕೊಳ್ಳುವುದು! ಹೌದು ಈ ವಿಧಾನ ತ್ವಚೆಯನ್ನು ತಂಪಾಗಿಸುವುದರ ಜೊತೆಗೆ, ವಿವಿಧ ರೀತಿಯ ಚರ್ಮದ ಸಮಸ್ಯೆಗಳಿಗೆ ಸಹಾಯವಾಗುತ್ತದೆ. ಇತ್ತೀಚಿನ ದಿನಗಳಲ್ಲಿ, ಅನೇಕ ಸೌಂದರ್ಯ ತಜ್ಞರು ಚರ್ಮದ ಆರೈಕೆಯ ದಿನಚರಿಯಲ್ಲಿ ಐಸ್ ಚಿಕಿತ್ಸೆಯನ್ನು ಸೇರಿಸಲು ಶಿಫಾರಸು ಮಾಡುತ್ತಾರೆ.

**ಮುಖಕ್ಕೆ ಐಸ್ ಹಚ್ಚುವುದು ಹೇಗೆ:** ಐಸ್ ಅನ್ನು ಎಂದಿಗೂ ಚರ್ಮಕ್ಕೆ ನೇರವಾಗಿ ಹಚ್ಚಬಾರದು. ಒಂದು ಸಣ್ಣ ತುಂಡು ಐಸ್ ಅನ್ನು ಹತ್ತಿ ಬಟ್ಟೆ ಅಥವಾ ಹತ್ತಿಯಲ್ಲಿ ಸುತ್ತಿ ನಂತರ ಮುಖಕ್ಕೆ ವೃತ್ತಾಕಾರದಲ್ಲಿ ನಿಧಾನಕ್ಕೆ ಉಜ್ಜಿಕೊಳ್ಳಿ 1-2 ನಿಮಿಷಗಳಿಗಿಂತ ಹೆಚ್ಚು ಕಾಲ ಮುಖಕ್ಕೆ ಉಜ್ಜಬೇಡಿ ವಾರಕ್ಕೆ 4-5 ಬಾರಿ ಐಸ್ ಉಜ್ಜುವ ವಿಧಾನವನ್ನು ಅನುಸರಿಸಿ ಸಾಕು

**ಮುಖ ಊದಿಕೊಂಡಿದ್ದರೆ :** ರಾತ್ರಿ ನಿದ್ದೆಯಿಂದ ಎದ್ದ ಬಳಿಕ, ಮುಖ ಊದಿಕೊಂಡಿದ್ದರೆ ಅಥವಾ ಸಣ್ಣ ವಯಸ್ಸಿನಲ್ಲಿಯೇ ಮುಖದ ಮೇಲೆ ನೆರಿಗೆ ಸುಕ್ಕು ಕಾಣಿಸಿ ಕೊಳ್ಳುತ್ತಿದ್ದರೆ, ಸಣ್ಣಭಾಗದ ಐಸ್ ತುಂಡನ್ನು ಮುಖಕ್ಕೆ ವೃತ್ತಾಕಾರವಾಗಿ ಉಜ್ಜಿಕೊಳ್ಳುತ್ತಾ ಬಂದರೆ ಈ ಸಮಸ್ಯೆ ನಿಧಾನಕ್ಕೆ ದೂರವಾಗುತ್ತದೆ

> **ಚರ್ಮವನ್ನು ಕಾಂತಿಯುತಗೊಳಿಸುತ್ತದೆ**
> **ಮುಖಕ್ಕೆ ಮಂಜುಗಡ್ಡೆಯನ್ನು ಅಥವಾ ಐಸ್ ಅನ್ನು ಉಜ್ಜಿಕೊಳ್ಳುವುದರಿಂದ, ತ್ವಚೆಯ ರಕ್ತ ಪರಿಚಲನೆ ಸುಧಾರಿಸುತ್ತದೆ, ಅಲ್ಲದೆ ಚರ್ಮವನ್ನು ಬಿಗಿಗೊಳಿಸುತ್ತದೆ ಹಾಗೂ, ಚರ್ಮದ ಕಾಂತಿಯನ್ನು ಹೆಚ್ಚಿಸಲು ನೆರವಾಗುತ್ತದೆ.**



**ಮೊಡವೆಗಳಿವೆ ಪರಿಹಾರ:** ಯಾರಿಗೆ ಆಗಾಗ ಮೊಡವೆ ಸಮಸ್ಯೆಗಳು ಕಾಣಿಸಿ ಕೊಳ್ಳುತ್ತದೆಯೋ ಅಂತಹ ವರು ಕೆಲವೊಂದು ಸುಲಭವಾದ ಮನೆಮದ್ದುಗಳನ್ನು ಪ್ರಯತ್ನಿಸುವುದರಿಂದ ಈ ಸಮಸ್ಯೆಗೆ ಶಾಶ್ವತ ಪರಿಹಾರವನ್ನು ಕಂಡುಕೊಳ್ಳಬಹುದು! ಇದಕ್ಕೊಂದು ಉತ್ತಮ ಉದಾಹರಣೆ ಎಂದರೆ ಮೊಡವೆಗಳು ಕಾಣಿಸಿ ಕೊಳ್ಳುವ ಭಾಗಕ್ಕೆ ನಿಧಾನವಾಗಿ ಐಸ್ ತುಂಡನ್ನು ಉಜ್ಜಿಕೊಳ್ಳುವುದು. ಇಲ್ಲಾಂದ್ರೆ, ಒಂದು ಸಣ್ಣ ತುಂಡು ಐಸ್ ಅನ್ನು ಹತ್ತಿ ಬಟ್ಟೆಯಲ್ಲಿ ಕಟ್ಟಿ ಮೊಡವೆ ಮೇಲೆ ಎರಡು ನಿಮಿಷದವರೆಗೆ ಇಟ್ಟುಬಿಡಿ ಸಾಕು, ಈ ಟ್ರಿಕ್ಸ್ ಅನ್ನು ವಾರದಲ್ಲಿ ಎರಡು-ಮೂರು ಬಾರಿ ಮಾಡಿ ನೋಡಿ

**ಮೇಕಪ್ ಹಚ್ಚುವ ಮೊದಲು :** ಮೇಕಪ್ ಹಚ್ಚುವ ಮೊದಲು ಮುಖಕ್ಕೆ ಐಸ್ ಹಚ್ಚುವುದರಿಂದ ಚರ್ಮವು ಮೃದುವಾಗುತ್ತದೆ, ಮೇಕಪ್ ಹೆಚ್ಚು ಕಾಲ ಇರುತ್ತದೆ. ಇದಲ್ಲದೆ, ಮೇಕಪ್ ಹಚ್ಚುವ ಮೊದಲು ಹಚ್ಚಿಕೊಳ್ಳುವ ಮೊದಲು ಐಸ್‌ನ್ನು ನೈಸರ್ಗಿಕ ಚರ್ಮದ ಪ್ರೈಮರ್ ಆಗಿಯೂ ಬಳಸಬಹುದು.

---

# ಶಾಲೆಗೆ ಹೊಸ ಕಟ್ಟಡ ಕೊಡುಗೆಯಾಗಿ ನೀಡಿದ ರಾಮಲಿಂಗಾ ರೆಡ್ಡಿ

• ಉದಯವಾಹಿನಿ ಆನೇಕಲ್



ಉದಯವಾಹಿನಿ ಚಿತ್ರ

ಶಾಲೆ ಆರಂಭೋತ್ಸವ ದಿನದಂದು ತಾವು ಕಲಿತ ಶಾಲೆಗೆ ಸಚಿವ ರಾಮಲಿಂಗಾರೆಡ್ಡಿ ಹೊಸ ಕಟ್ಟಡವನ್ನು ಕೊಡುಗೆಯಾಗಿ ನೀಡಿದ್ದಾರೆ. ಹೈಟೆಕ್ ಸೌಲಭ್ಯ ಹೊಂದಿರುವ ಮೂರು ಅಂತಸ್ತಿನ ಕಟ್ಟಡವನ್ನು ಸಚಿವರು, ತಮ್ಮ ಸಹಪಾಠಿಗಳು, ಕುಟುಂಬಸ್ಥರು, ಗ್ರಾಮಸ್ಥರು ಮತ್ತು ಮಕ್ಕಳು ಸಮ್ಮುಖದಲ್ಲಿ ಲೋಕಾರ್ಪಣೆಗೊಳಿಸಿದರು.

ತಾಲ್ಲೂಕಿನ ಮರಸೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಶೆಟ್ಟಿಹಳ್ಳಿ ರಾಮಲಿಂಗಾರೆಡ್ಡಿ ಅವರ ಸ್ವಗ್ರಾಮ. ಇದೇ ಊರಿನ ಸರ್ಕಾರಿ ಶಾಲೆಯಲ್ಲಿ 1958-59ನೇ ಸಾಲಿನಲ್ಲಿ ಓದಿದ್ದರು. ಶಿಥಿಲಗೊಂಡಿದ್ದ ಹಳೆ ಶಾಲೆ ತೆರವುಗೊಳಿಸಿ. ಅಲ್ಲಿ 1 ಕೋಟಿ ವೆಚ್ಚದ ಆಧುನಿಕ ಸೌಲಭ್ಯವುಳ್ಳ ಶಾಲೆಯಲ್ಲಿ ನಿರ್ಮಿಸಿದ್ದಾರೆ. ಶಾಲೆ ಉದ್ಘಾಟನೆ ಮತ್ತು ಕಟ್ಟಡ ಹಸ್ತಾಂತರ ಕಾರ್ಯಕ್ರಮವನ್ನು ತಮ್ಮ ಕುಟುಂಬ ಸದಸ್ಯರೊಂದಿಗೆ ತಮ್ಮ ಮನೆ ಗೃಹ ಪ್ರವೇಶದಂತೆ ನಡೆಸಿಕೊಟ್ಟಿದ್ದಾರೆ.

ಶೆಟ್ಟಿಹಳ್ಳಿ ಸರ್ಕಾರಿ ಶಾಲೆ ಏಳೆಂಟು ವರ್ಷದ ಹಿಂದೆ ನಾನಾ ಕಾರಣಗಳಿಂದ ಮುಚ್ಚಿ ಹೋಗಿತ್ತು. ಯಾವುದೇ ಚಟುವಟಿಕೆ ನಡೆಯದ ಕಾರಣ ಶಿಥಿಲಗೊಂಡು ಅವಸಾನದತ್ತ ಸಾಗಿತ್ತು. ಗ್ರಾಮಸ್ಥರು ಮಕ್ಕಳನ್ನು ಬೇರೆ ಗ್ರಾಮಗಳ ಶಾಲೆಗಳಿಗೆ ಕಳುಹಿಸುತ್ತಿದ್ದರು. ಇದರಿಂದ ಬೇಸರಗೊಂಡಿದ್ದ ಗ್ರಾಮಸ್ಥರು ರಾಮಲಿಂಗಾರೆಡ್ಡಿ ಅವರನ್ನು ಭೇಟಿಯಾದರು. ಬೆಂಗಳೂರಿನಲ್ಲಿ ನಿಮ್ಮ ಕ್ಷೇತ್ರದ ಶಾಲೆಗಳಿಗೆ ಹೈಟೆಕ್ ಸ್ಪರ್ಶ ನೀಡುತ್ತಿದ್ದೀರಿ, ಹೊಸ ಶಾಲೆ ನಿರ್ಮಿಸುತ್ತಿದ್ದೀರಿ... ಆದರೆ ನೀವು ಓದಿದ ಶಾಲೆ ಮುಚ್ಚಿ ಹೋಗಿದೆ. ಶಿಥಿಲಗೊಂಡು ಪಾಳು ಬಿದ್ದಿದೆ. ಶಾಲೆಗೊಂದು ಕಾಯಕಲ್ಪ ನೀಡಿ' ಎಂದು ಗ್ರಾಮಸ್ಥರು ಸಚಿವರಿಗೆ ಅರುಹಿದ್ದರು. ಇದಕ್ಕೆ ಸ್ಪಂದಿಸಿದ ರಾಮಲಿಂಗಾರೆಡ್ಡಿ, 1 ಕೋಟಿ ವೆಚ್ಚದಲ್ಲಿ ಹೊಸ ಕಟ್ಟಡ ನಿರ್ಮಾಣದ ಭರವಸೆ ನೀಡಿದ್ದರು. ಅದರಂತೆ ಹಳೆ ಶಾಲೆ ಜಾಗದಲ್ಲಿ ಅತ್ಯಾಧುನಿಕ ಸೌಲಭ್ಯವುಳ್ಳ ಹೈಟೆಕ್ ಶಾಲೆ ನಿರ್ಮಿಸಿದ್ದಾರೆ. ಸುಸಜ್ಜಿತ ಕೊಠಡಿ, ಸ್ಮಾರ್ಟ್ ಕ್ಲಾಸ್, ಆಟದ ಮೈದಾನ, ಕಂಪ್ಯೂಟರ್ ಕೊಠಡಿ, ಶೌಚಾಲಯ, ಅಡುಗೆ ಕೋಣೆ, ಪ್ರಾರ್ಥನಾ ಸಭಾಂಗಣ, ಪೀಠೋಪಕರಣ ಸೌಲಭ್ಯ ಕಲ್ಪಿಸಲಾಗಿದೆ. ಇದೇ ವೇಳೆ ರಾಮಲಿಂಗ ರೆಡ್ಡಿ, ಪತ್ನಿ ಚಾಮುಂಡೇಶ್ವರಿ, ಪುತ್ರಿ ಸೌಮ್ಯಾ ರೆಡ್ಡಿ ಅವರು ಸರ್ಕಾರಿ ಶಾಲೆಯ ವಿದ್ಯಾರ್ಥಿಗಳಿಗೆ ಕಲಿಕಾ ಪರಿಕರಗಳನ್ನು ವಿತರಿಸಿದರು.

> **ಸಾರ್ವಜನಿಕ ಆಸ್ತಿ ರಕ್ಷಣೆ ಅಭಿವೃದ್ಧಿ ಸಾರ್ವಜನಿಕರ ಮತ್ತು ಗ್ರಾಮಸ್ಥರ ಜವಾಬ್ದಾರಿ. ಈ ನಿಟ್ಟನಲ್ಲಿ ಅನೇಕಲ್ ತಾಲ್ಲೂಕಿನ ಶೆಟ್ಟಿಹಳ್ಳಿ ಗ್ರಾಮ ನನ್ನ ಹುಟ್ಟುರಾಗಿದ್ದು, ಸರ್ಕಾರಿ ಶಾಲೆ ಶಿಥಿಲಾವಸ್ಥೆಯಲ್ಲಿತ್ತು. ಈಗ ಶಾಲೆಯ ಅಭಿವೃದ್ಧಿಗೆ ಗಮನಹರಿಸಿ ಸುಸಜ್ಜಿತ ಕಟ್ಟಡ ನಿರ್ಮಿಸ ಲಾಗಿದೆ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದರು.**

---

# ಹೃದಯದ ಆರೋಗ್ಯಕ್ಕೆ ಯೋಗ

ಅಂತಾರಾಷ್ಟ್ರೀಯ ಯೋಗ ದಿನ ಸಮೀಪಿಸುತ್ತಿದೆ. ಪ್ರತಿ ವರ್ಷ ಜೂನ್ 21 ರಂದು ವಿಶ್ವದಾದ್ಯಂತ ಅಂತಾರಾಷ್ಟ್ರೀಯ ಯೋಗ ದಿನವನ್ನು ಆಚರಿಸಲಾಗುತ್ತದೆ. ಈ ವರ್ಷದ ಥೀಮ್ ಯೋಗಾ ಫಾರ್ ಒನ್ ಅರ್ಥ್ , ಒನ್ ಹೆಲ್ತ್. ಇದು ವೈಯಕ್ತಿಕ ಯೋಗಕ್ಷೇಮ ಮತ್ತು ಪರಿಸರ ಸುಸ್ಥಿರತೆಯನ್ನು ಕೇಂದ್ರೀಕರಿಸಿದೆ. ಪ್ರಪಂಚದಾದ್ಯಂತ ನಮ್ಮ ಯೋಗ ಮತ್ತು ಸಾಂಪ್ರದಾಯಿಕ ಔಷಧದ ಬಗ್ಗೆ ಕುತೂಹಲ ಹೆಚ್ಚುತ್ತಿರುವುದು ನಮಗೆಲ್ಲರಿಗೂ ಹೆಮ್ಮೆಯ ವಿಷಯ ಎಂದು ಪ್ರಧಾನಿ ನರೇಂದ್ರ ಮೋದಿ ತಮ್ಮ ಇತ್ತೀಚೆಗಿನ ಮನ್ ಕೀ ಬಾತ್ ನಲ್ಲಿ ಹೇಳಿದ್ದಾರೆ. ಪ್ರತಿಯೊಬ್ಬರೂ ತಮ್ಮ ದಿನಚರಿಯಲ್ಲಿ ಯೋಗವನ್ನು ಸೇರಿಸಿಕೊಳ್ಳಬೇಕು ಮತ್ತು ದೇಶದ ಸಾಂಪ್ರದಾಯಿಕ ಜ್ಞಾನದ ಬಗ್ಗೆ ಹೆಮ್ಮೆ ಪಡಬೇಕು ಎಂದು ಮೋದಿ ಕರೆ ನೀಡಿದ್ದಾರೆ. ದೇಹದ ವಿವಿಧ ಭಾಗಗಳನ್ನು ಕೇಂದ್ರೀಕರಿಸಿ ಮಾಡುವ ವಿವಿಧ ಯೋಗಾಸನಗಳಿವೆ.

ಹೃದಯದ ಆರೋಗ್ಯ, ಶ್ವಾಸಕೋಶದ ಆರೋಗ್ಯ, ಕೈ-ಕಾಲು, ಕತ್ತು ಹೀಗೆ ವಿವಿಧ ಭಾಗಗಳ ಆರೋಗ್ಯಕ್ಕೆ ಒತ್ತು ನೀಡುವ ಯೋಗಾಭ್ಯಾಸಗಳನ್ನು ನಮ್ಮ ಅನುಕೂಲಕ್ಕೆ ಹೊಂದಿಸಿಕೊಂಡು ಮಾಡಬೇಕಾಗುತ್ತದೆ.

ಹಾಗೆಯೇ ಕೆಲವು ಯೋಗಾಸನಗಳು ಕೆಲವು ಆರೋಗ್ಯ ಸಮಸ್ಯೆ ಇರುವವರಿಗೆ ಸೂಕ್ತವಲ್ಲ ಎಂಬುದನ್ನು ಸಹ ನಾವು ತಿಳಿದುಕೊಳ್ಳಬೇಕು. ಹೃದಯದ ಆರೋಗ್ಯವನ್ನು ಸುಧಾರಿಸುವ, ರಕ್ತದೊತ್ತಡವನ್ನು ಕಡಿಮೆ ಮಾಡುವ ಮತ್ತು ಒಟ್ಟಾರೆ ಹೃದಯ ರಕ್ತನಾಳದ ಕಾರ್ಯವನ್ನು ಹೆಚ್ಚಿಸುವ ಸಾಮರ್ಥ್ಯಕ್ಕಾಗಿ ಕೆಲವು ಯೋಗಾಸನಗಳನ್ನು ಗುರುತಿಸಲಾಗಿದೆ. ಹಾಗೆಯೇ ಹೃದಯ ಸಮಸ್ಯೆ ಇರುವವರು ಯಾವೆಲ್ಲಾ ಯೋಗಾಭ್ಯಾಸಗಳನ್ನು ತಪ್ಪಿಸಬೇಕು ಎಂಬುದನ್ನು ಇಲ್ಲಿ ತಿಳಿಯೋಣ.

**ಹಲಾಸನ:** ಇದನ್ನು ನಿಮ್ಮ ಬೆನ್ನಿನ ಮೇಲೆ ಮಲಗಿಸಿ, ನಿಮ್ಮ ಕಾಲುಗಳನ್ನು ನಿಮ್ಮ ತಲೆಯ ಮೇಲೆ ಎತ್ತಿ ಮತ್ತು ನಿಮ್ಮ ಕಾಲ್ಬೆರಳುಗಳಿಂದ ನೆಲವನ್ನು ಸ್ಪರ್ಶಿಸುವ ಮೂಲಕ ಮಾಡಲಾಗುತ್ತದೆ. ಇದು ಬೆನ್ನುಮೂಳೆಯನ್ನು ಹಿಗ್ಗಿಸಿ ಒತ್ತಡವನ್ನು ನಿವಾರಿಸುತ್ತದೆಯಾದರೂ, ಗುರುತ್ವಾಕರ್ಷಣೆಯ ಬಲದ ವಿರುದ್ಧ ರಕ್ತ ಪರಿಚಲನೆಯನ್ನು ಒತ್ತಾಯಿಸುವ ಮೂಲಕ ಹೃದಯಕ್ಕೆ ಒತ್ತಡವನ್ನು ಉಂಟುಮಾಡುವುದರಿಂದ ಹೃದಯ ಕಾಯಿಲೆ ಇರುವವರು ಇದನ್ನು ಅಭ್ಯಾಸ ಮಾಡಬಾರದು.

**ವಿಪರೀತಾ ಕರಣಿ:** ನೀವು ಕಾಲುಗಳುನ್ನು ಸೊಂಟವನ್ನು ಮೇಲಕ್ಕೆತ್ತಿ, ನಿಮ್ಮ ಕೈಗಳಿಂದ ಅವುಗಳನ್ನು ಹಿಡಿಯುತ್ತೀರಿ. ಹೃದಯ ಸಮಸ್ಯೆ ಇರುವ ಜನರು ಇದನ್ನು ತಪ್ಪಿಸಬೇಕು ಏಕೆಂದರೆ ಇದು ಹೃದಯದ ಮೇಲೆ ಹೆಚ್ಚುವರಿ ಹೊರೆ ಹಾಕುತ್ತದೆ ಮತ್ತು ಕೆಳಗಿನ ದೇಹಕ್ಕೆ ರಕ್ತ ಪರಿಚಲನೆಯನ್ನು ಹೆಚ್ಚಿಸುತ್ತದೆ.


**ಕರ್ಣಪಿರಾಸನ:** ಕಿವಿಗಳನ್ನು ಮೊಣಕಾಲುಗಳ ಕಡೆಗೆ ಹತ್ತಿರ ತರುವುದು ಬೆನ್ನುಮೂಳೆಯನ್ನು ಬಲಪಡಿಸುತ್ತದೆ ಮತ್ತು ರಕ್ತದೊತ್ತಡ ಹೆಚ್ಚಾಗಲು ಅನುವು ಮಾಡಿಕೊಡುತ್ತದೆ.

ಇದು ಗಾಳಿಮಾರ್ಗಗಳನ್ನು ತೆರೆಯುತ್ತದೆ, ಇದು ಆಸ್ತಮಾಗೆ ಒಳ್ಳೆಯದು, ಆದರೆ ಇದು ನಿಮಗೆ ತಳ್ಳುವಿಕೆಯನ್ನು ನೀಡುತ್ತದೆ, ಇದು ಹೃದಯಕ್ಕೆ ಒಳ್ಳೆಯದಲ್ಲ.

**ಶಿರಾಸನ:** ತಲೆ ಸಮತೋಲನದಲ್ಲಿರುವ ಭಂಗಿ , ವಿಶ್ರಾಂತಿ, ತಲೆನೋವು ನಿವಾರಣೆಯ ಪ್ರಯೋಜನಗಳನ್ನು ಹೊಂದಿದೆ. ಆದರೆ ಹೃದಯ ಕಾಯಿಲೆ ಇರುವ ಜನರು ಇದರಿಂದ ದೂರವಿರಬೇಕು. ತಲೆಕೆಳಗಾದ ಭಂಗಿಯು ರಕ್ತವನ್ನು ಸುತ್ತಲು ಹೆಚ್ಚುವರಿ ಪ್ರಯತ್ನವನ್ನು ಮಾಡುತ್ತದೆ.

**ಸರ್ವಾಂಗಾಸನ:** ಭುಜಗಳ ಮೇಲೆ ಸಮತೋಲನ ಕಾಯ್ದುಕೊಳ್ಳುವುದರಿಂದ ತೋಳುಗಳು ಬಲಗೊಳ್ಳುತ್ತವೆ ಮತ್ತು ಮಲಬದ್ಧತೆ ನಿವಾರಣೆಯಾಗುತ್ತದೆ. ಹೃದಯ ರೋಗಿಗಳು ಇದನ್ನು ಪ್ರಯತ್ನಿಸಬಾರದು ಏಕೆಂದರೆ ರಕ್ತ ಪರಿಚಲನೆಗೆ ಹೃದಯವು ಗುರುತ್ವಾಕರ್ಷಣೆಯ ವಿರುದ್ಧ ಹೆಚ್ಚು ಬಲವಾಗಿ ಪಂಪ್ ಮಾಡಬೇಕಾಗುತ್ತದೆ.

**ಚಕ್ರಾಸನ :** ಈ ಭಂಗಿಯಲ್ಲಿ, ನೀವು ಅರ್ಧವೃತ್ತಾಕಾರದಲ್ಲಿ ಬಾಗುತ್ತೀರಿ. ಇದು ಬೆನ್ನುಮೂಳೆಯ ನಮ್ಯತೆಯನ್ನು ಸುಧಾರಿಸಲು ಸಹಾಯ ಮಾಡುತ್ತದೆ ಮತ್ತು ಮಧುಮೇಹದಂತಹ ಕಾಯಿಲೆಗಳಿಗೆ ಸಹಾಯ ಮಾಡುತ್ತದೆ. ಇದು ಹೃದಯದ ಮೇಲೆ ಒತ್ತಡವನ್ನುಂಟು ಮಾಡುತ್ತದೆ, ರಕ್ತದ ಹರಿವನ್ನು ಹೆಚ್ಚಿಸುತ್ತದೆ. ಹೃದಯ ಕಾಯಿಲೆ ಇರುವ ಜನರಿಗೆ ಇದು ಸೂಕ್ತವಲ್ಲ.



## ದೋಣಿ ಮಗುಚಿ ಇಬ್ಬರು ನಾಪತ್ತೆ

• ಉದಯವಾಹಿನಿ, ಮಂಗಳೂರು

ತೋಟ ಬೆಂಗ್ರೆಯ ಅಳಿವೆ ಬಾಗಿಲು ಬಳಿ ಶುಕ್ರವಾರ ದೋಣಿ ಮಗುಚಿ ಇಬ್ಬರು ವ್ಯಕ್ತಿಗಳು ನಾಪತ್ತೆಯಾಗಿದ್ದಾರೆ. ತೋಟಾ ಬೆಂಗ್ರೆ ಅಳಿವೆ ಬಾಗಿಲು ಬಳಿ ಅವರು ಮೀನುಗಾರಿಕೆ ನಡೆಸುತ್ತಿದ್ದಾಗ ಬಲವಾದ ಗಾಳಿ ಮತ್ತು ಭಾರೀ ಮಳೆಯಿಂದಾಗಿ ದೋಣಿ ಪಲ್ಟಿಯಾಗಿ ಈ ಘಟನೆ ಸಂಭವಿಸಿದೆ. ಅಪಘಾತದ ನಂತರ ದೋಣಿಯಲ್ಲಿದ್ದ ಇಬ್ಬರು ನಾಪತ್ತೆಯಾಗಿದ್ದಾರೆ.


ಕಾಣೆಯಾದ ವ್ಯಕ್ತಿಗಳನ್ನು ಯಶವಂತ ಮತ್ತು ಕಮಲಾಕ್ಷ ಎಂದು ಗುರುತಿಸಲಾಗಿದೆ. ತೋಟಾ ಬೆಂಗ್ರೆ ಬಳಿ ದೋಣಿಯ ಪೆಟ್ರೋಲ್ ಟ್ಯಾಂಕ್ ದಡಕ್ಕೆ ಬಿದ್ದಿರುವುದು ಪತ್ತೆಯಾಗಿದೆ. ದೋಣಿ ಇನ್ನೂ ಪತ್ತೆಯಾಗಿಲ್ಲ. ಸ್ಥಳೀಯ ನಿವಾಸಿಗಳು ಶೋಧ ಕಾರ್ಯಾಚರಣೆ ಆರಂಭಿಸಿದ್ದಾರೆ ಎಂದು ವರದಿಯಾಗಿದೆ.

## ಚಿಂಚೋಳಿ ಮಾರ್ಗವಾಗಿ ರೈಲು ಮಾರ್ಗ ಯೋಜನೆ ರೂಪಿಸುವಂತೆ: ರೈಲ್ವೆ ಸಚಿವರಿಗೆ ಮನವಿ

• ಉದಯವಾಹಿನಿ, ಚಿಂಚೋಳಿ

**ವ್ಯಾಪಾರ ವಹಿವಾಟು, ಪ್ರಯಾಣಿಕರಿಗೆ ಅನುಕೂಲ**

ಕೇಂದ್ರ ರೈಲ್ವೆ ಇಲಾಖೆಯು ನೂತನವಾಗಿ ಜಹೀರಾಬಾದ್ ತಾಂಡೂರ ರೈಲು ಮಾರ್ಗವನ್ನು ಹಾಕಲು ಎಲ್ಲಾ ಸಿದ್ಧತೆ ನಡೆಯುತ್ತಿದ್ದು ಅದೆ ಮಾರ್ಗವನ್ನು ಜಹೀರಾಬಾದ್‌ದಿಂದ ಚಿಂಚೋಳಿ ಕೇಂದ್ರ ಸ್ಥಾನದಿಂದ ಹಾದುಹೋಗಿ ತಾಂಡೂರಗೆ ತಲುಪುವಂತೆ ಮಾಡಬೇಕೆಂದು ತಾಲ್ಲೂಕಾ ರೈಲು ಮಾರ್ಗ ಹೋರಾಟ ಸಮಿತಿ ವತಿಯಿಂದ ಕೇಂದ್ರ ರೈಲ್ವೆ ರಾಜ್ಯ ಸಚಿವ ವಿ.ಸೋಮಣ್ಣನವರಿಗೆ ಮನವಿಪತ್ರ ಸಲ್ಲಿಸಿ ಒತ್ತಾಯಿಸಲಾಯಿತು. ಹಿಂದುಳಿದ ಚಿಂಚೋಳಿ ತಾಲ್ಲೂಕಾವನ್ನು ಸಮಗ್ರ ಅಭಿವೃದ್ಧಿಗಾಗಿ ಪ್ರಸ್ತಾಪಿಸಿದ ಈ ಮನವಿ ಜಹೀರಾಬಾದ್ ತಾಂಡೂರ ರೈಲು ಮಾರ್ಗವನ್ನು ಚಿಂಚೋಳಿ ಕೇಂದ್ರ ಸ್ಥಾನದಿಂದ ಹಾದುಹೋಗುವಂತೆ ಮಾಡಿದರೆ ಚಿಂಚೋಳಿ ಅಭಿವೃದ್ಧಿಯಾಗುತ್ತದೆ.



☛ ಉದಯವಾಹಿನಿ ಚಿತ್ರ

ಸರಕು ಸಾಗಣೆ,ವ್ಯಾಪಾರ ವಹಿವಾಟು,ಪ್ರಯಾಣಿಕರಿಗೆ ಅನುಕೂಲ,ಹಾಗೂ ರೈಲ್ವೆಯಾದರೆ ವಿವಿಧ ಕಾರ್ಖಾನೆಗಳು ಸ್ಥಾಪನೆಯಾಗುತ್ತವೆ ಹೀಗೆ ಅನೇಕರಿಗೆ ಉದ್ಯೋಗ ಸಹ ದೊರಕುತ್ತದೆ ಎಂದು ಮನವಿಪತ್ರ ಸಲ್ಲಿಸಿದರು. ಈ ಸಂದರ್ಭದಲ್ಲಿ ತಾಲ್ಲೂಕಾ ರೈಲು ಮಾರ್ಗ ಹೋರಾಟ ಸಮಿತಿ ಅಧ್ಯಕ್ಷ ಶಂಕರ ಶಿವಪೂರಿ,ಶಿವಶರಣಪ್ಪ ಜಾಪಟ್ಟಿ,ರಾಜೇಂದ್ರ ತಾದಲಾಪೂರ,ಸೂರ್ಯಕಾಂತ ಹುಲಿ ಪಾಟೀಲ,ನಂದಿಕುಮಾರ ಪಾಟೀಲ,ರಾಮಣ್ಣ ಗೋಪನಪಳ್ಳಿ, ಭೀಮರಾವ ಪಾಟೀಲ,ಬಸವರಾಜ,ಸುರೇಶ ಅನೇಕರಿದ್ದರು.

## ತ್ಯಾಜ್ಯ ಬಳಸಿ, ಗೊಬ್ಬರ ತಯಾರಿಕೆಗೆ ಘಟಕ ಸ್ಥಾಪನೆ



☛ ಉದಯವಾಹಿನಿ ಚಿತ್ರ

• ಉದಯವಾಹಿನಿ ಧಾರವಾಡ

ತ್ಯಾಜ್ಯ ವಸ್ತುಗಳನ್ನು ಆಯಾ ಸ್ಥಳಗಳಲ್ಲಿಯೇ ನೈಸರ್ಗಿಕ ಗೊಬ್ಬರವನ್ನಾಗಿ ಪರಿವರ್ತಿಸಿ ಅದನ್ನು ಮಣ್ಣಿಗೆ ಪೂರೈಸುವ ಮೂಲಕ ಮಣ್ಣಿನ ಫಲವತ್ತತೆ ಹೆಚ್ಚಿಸಿ ಗಿಡ ಮರಗಳಿಗೆ ಉತ್ತಮ ಗೊಬ್ಬರವನ್ನು ತಯಾರಿಸುವ ಜೊತೆಗೆ ಪರಿಸರವನ್ನು ಶುದ್ಧವಾಗಿಡುವ ನಿಟ್ಟಿನಲ್ಲಿ ಒಂದು ಘಟಕವನ್ನು ಧಾರವಾಡ ಜಿಲ್ಲಾ ನ್ಯಾಯಾಲಯದ ಆವರಣದಲ್ಲಿ ಮೇ 29, 2025 ರಂದು ಮಧ್ಯಾಹ್ನ 2 ಗಂಟೆಗೆ ಕರ್ನಾಟಕ ಉಚ್ಛ ನ್ಯಾಯಾಲಯದ ನ್ಯಾಯಮೂರ್ತಿಗಳು ಮತ್ತು ಧಾರವಾಡ ಜಿಲ್ಲಾ ಆಡಳಿತಾತ್ಮಕ ನ್ಯಾಯಮೂರ್ತಿಗಳಾದ ಗೌರವಾನ್ವಿತ ಸುನೀಲ ದತ್ತ ಯಾಧವ ಅವರು ಉದ್ಘಾಟಿಸಿ, ಮಾತನಾಡಿದರು. ನ್ಯಾಯಾಲಯದಲ್ಲಿ ಸ್ವಚ್ಛತೆ ಕಾಪಾಡಿಕೊಳ್ಳುವ ಮೂಲಕ ಪರಿಸರವನ್ನು ರಕ್ಷಿಸಬೇಕು. ಸಾರ್ವಜನಿಕರಿಗೆ ಖಾಸಗಿ ಮತ್ತು ಸಾರ್ವಜನಿಕ ಸಂಸ್ಥೆಗಳಿಗೆ ಪರಿಸರ ಸಂರಕ್ಷಣೆಯ ಸಂದೇಶ ನೀಡಿದಂತಾಗಿದೆ ಎಂದರು.

### ಜನೌಷಧಿ ಕೇಂದ್ರಗಳನ್ನು ಮುಚ್ಚಲು ಹೊರಟಿರುವ ಸರ್ಕಾರದ ಕ್ರಮವನ್ನು ಖಂಡಿಸಿ ಕಪ್ಪು ಬಟ್ಟೆ ಕಟ್ಟಿಕೊಂಡು ಧರಣಿ

# ಕಾಂಗ್ರೆಸ್ ಸರ್ಕಾರದ ನಡೆ ಖಂಡಿಸಿ ಬಿಜೆಪಿ ಬೃಹತ್ ಪ್ರತಿಭಟನೆ

• ಉದಯವಾಹಿನಿ ವಿಜಯಪುರ

ಬಿಜೆಪಿ ಜಿಲ್ಲಾ ಘಟಕದ ವತಿಯಿಂದ ರಾಜ್ಯ ಕಾಂಗ್ರೆಸ್ ಸರ್ಕಾರ ಸರ್ಕಾರಿ ಆಸ್ಪತ್ರೆಯ ಆವರಣದಲ್ಲಿನ ಜನೌಷಧಿ ಕೇಂದ್ರಗಳನ್ನು ಮುಚ್ಚಲು ಹೊರಟಿರುವ ಸರ್ಕಾರದ ಕ್ರಮವನ್ನು ಖಂಡಿಸಿ ಕಪ್ಪು ಬಟ್ಟೆ ಕಟ್ಟಿಕೊಂಡು ಸರ್ಕಾರದ ವಿರುದ್ಧ ಕೆಲ ಘಂಟೆಗಳ ಕಾಲ ಘೋಷಣೆಗಳನ್ನು ಕೂಗಿ ಧರಣಿ ಸತ್ಯಾಗ್ರಹವನ್ನು ನಗರದ ಜಿಲ್ಲಾ ಸರ್ಕಾರಿ ಆಸ್ಪತ್ರೆಯ ಆವರಣದಲ್ಲಿ ನಡೆಸಲಾಯಿತು.

ಈ ಸಂದರ್ಭದಲ್ಲಿ ಸಂಸದರಾದ ರಮೇಶ ಜಿಗಜಿಣಗಿ ಮಾತನಾಡಿ, ರಾಜ್ಯದ ಎಲ್ಲಾ ಜಿಲ್ಲಾ ಆಸ್ಪತ್ರೆಗಳ ಆವರಣದಲ್ಲಿ ಜನೌಷಧಿ ಕೇಂದ್ರಗಳ ಸೇವೆಯನ್ನು ಸ್ಥಗಿತಗೊಳಿಸುವ ನಿರ್ಣಯ ಕೈಗೊಂಡ ರಾಜ್ಯ ಕಾಂಗ್ರೆಸ್ ಸರ್ಕಾರದ ನಿರ್ಧಾರದ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

ಬಡ ರೋಗಿಗಳಿಗೆ ವರದಾನವಾಗಿರುವ ಈ ಜನೌಷಧಿ ಕೇಂದ್ರಗಳನ್ನು ಸ್ಥಗಿತಗೊಳಿಸುವ ನಿರ್ಧಾರ ಬಡವರ ವಿರೋಧಿಯಾಗಿದೆ. ಸರ್ಕಾರಿ ಆಸ್ಪತ್ರೆಗಳಿಗೆ ಚಿಕಿತ್ಸೆಗೆ ಬರುವವರು ಬಡವರು ಮಾತ್ರ. ಬಡವರಿಗೆ ಅನುಕೂಲಕರವಾದ ಈ ಕೇಂದ್ರಗಳನ್ನು ವಿನಾಕಾರಣ ಸ್ಥಗಿತಗೊಳಿಸುವ ಅರ್ಥವೇನು?. ಸಚಿವ ದಿನೇಶ ಗುಂಡೂರಾವ್, ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರ ಪಕ್ಷದ ಮುಖಂಡರು ಶ್ರೀಮಂತರಿರಬಹುದು, ಅವರು ಜಿಲ್ಲಾ ಆಸ್ಪತ್ರೆಗೆ ಹೋಗುವುದಿಲ್ಲ. ಬಡವರ ವಿರೋಧಿ ನಿರ್ಧಾರ ಕೈಗೊಂಡಿರುವ ಸರ್ಕಾದ ಕ್ರಮ ಖಂಡನೀಯ. ಕೂಡಲೇ ಸರ್ಕಾರ ಈ ನಿರ್ಧಾರವನ್ನು ಹಿಂದಕ್ಕೆ ಪಡೆಯಬೇಕು ಎಂದು ಅವರು ಒತ್ತಾಯಿಸಿದರು.




☛ ಉದಯವಾಹಿನಿ ಚಿತ್ರ

**ಸ್ಥಗಿತಗೊಳಿಸುವ ನಿರ್ಧಾರ ಬಡವರ ವಿರೋಧಿ**

ಈ ಸಂದರ್ಭದಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ಗುರಲಿಂಗಪ್ಪ ಅಂಗಡಿ ಮಾತನಾಡಿ, ಪ್ರಧಾನಮಂತ್ರಿ ಜನ ಔಷಧಿ ಕೇಂದ್ರವನ್ನು ಎಲ್ಲಾ ಸರಕಾರಿ ಆಸ್ಪತ್ರೆಯ ಆವರಣದಲ್ಲಿ ನಡೆಸುವಂತಿಲ್ಲ ಎಂದು ಆದೇಶ ಹೊರಡಿಸಿ, ಈ ಆದೇಶಕ್ಕೆ ಸಮಜಾಯಿಸಿ ಸರಕಾರಿ ಆಸ್ಪತ್ರೆಯಲ್ಲಿ ಔಷಧಿಗಳನ್ನ ಮಾರಾಟ ಮಾಡುವಂತಿಲ್ಲ ಎನ್ನುವ ನಿಯಮದಡಿ ಕಾರಣ ಹೇಳಿ ಸಮಾಜಾಯಿಸಿ ಭಾರತ ಸರಕಾರದ ಮಹತ್ವಕಾಂಕ್ಷಿ ಯೋಜನೆಯಾದ ಪ್ರಧಾನಮಂತ್ರಿ ಜನ ಔಷಧಿ ಕೇಂದ್ರ ಹೊರಹಾಕಿದ್ದಾರೆ.

ಸರಕಾರಿ ಆಸ್ಪತ್ರೆಯಲ್ಲಿ ಉಚಿತವಾಗಿ ಕೊಡುವ ಔಷಧಿಗಳು ಲಭ್ಯ ಇಲ್ಲಾ ಅಂದ್ರೇ ರೋಗಿಗಳು ಹೊರಗಡೆ ಹೋಗಿ ಜನ ಔಷಧಿ ಕೇಂದ್ರವನ್ನು ಹುಡುಕಾಡಬೇಕಾ? ಔಷಧಿ ಕೇಂದ್ರ ಸಿಗದೇ ಇದ್ದ ಪಕ್ಷದಲ್ಲಿ ರೋಗಿಗಳು ಅನಾವಶ್ಯಕವಾಗಿ ಹೆಚ್ಚಿನ ದರದ ಔಷಧಿಯನ್ನು ಖರೀದಿ ಮಾಡುವ ಅನಿವಾರ್ಯತೆ ಹುಟ್ಟಿ ಹಾಕಿದ ಕರ್ನಾಟಕ ಕಾಂಗ್ರೆಸ್ ಸರ್ಕಾರದ ಆರೋಗ್ಯ ಸಚಿವರಾದ ದಿನೇಶ್ ಗುಂಡೂರಾವ್ ರವರ ಈ ನಿರ್ಣಯವನ್ನು ಖಂಡಿಸುವೆ. ಸರಕಾರಿ ಆಸ್ಪತ್ರೆಯಲ್ಲಿ ಔಷಧ ಸಿಗುತ್ತಿಲ್ಲ ಅಥವಾ ಲಭ್ಯವಿಲ್ಲ ಎಂದಾಗ ಕನಿಷ್ಠ ಪಕ್ಷ ರೋಗಿಗಳು ಕಡಿಮೆಯ ಖರ್ಚಿನಲ್ಲಿ ಕೇಂದ್ರ ಸರ್ಕಾರದ ಪ್ರಧಾನ ಮಂತ್ರಿ ಜನ ಔಷಧಿ ಕೇಂದ್ರದಲ್ಲಾದರೂ ಖರೀದಿಸುವ ಅನುಕೂಲವಿತ್ತು, ತಮ್ಮ ವೈಯಕ್ತಿಕ ರಾಜಕಾರಣದಿಂದ ಈ ನಿರ್ಣಯ ಅದೆಷ್ಟೋ ರೋಗಿಗಳಿಗೆ ತೊಂದರೆ ಕೊಡುತ್ತಿದೆ ಎಂದರು.

> **ಬೇರೆ ಮೆಡಿಕಲ್‌ಗಳಲ್ಲಿ 100ರೂ.ಗೆ ಸಿಗುವಂತಹ ಔಷಧಿ ಜನೌಷಧಿ ಮಳಿಗೆಗಳಲ್ಲಿ 10 ರೂಪಾಯಿಗೆ ಉತ್ತಮ ಗುಣಮಟ್ಟದಲ್ಲಿ ಸಿಗುತ್ತದೆ. ಆದರೆ ರಾಜ್ಯ ಸರ್ಕಾರ ಹಾಗೂ ಆರೋಗ್ಯ ಸಚಿವರು ಮೆಡಿಕಲ್ ಮಾಫಿಯಾದವರ ಒತ್ತಡಕ್ಕೆ ಮಣಿದು ಹೀಗೆಲ್ಲ ಮಾಡುತ್ತಿದ್ದಾರೆಯೇ ಎಂದು ಜನಸಾಮಾನ್ಯರು ಮಾತನಾಡುತ್ತಿದ್ದಾರೆ. ಮಾತೆತ್ತಿದರೆ ಅಹಿಂದ ಬಗ್ಗೆ ಮಾತನಾಡುವ ಕಾಂಗ್ರೆಸ್ ನಾಯಕರೇ ನೀವೆ ಕುಳಿತುಕೊಂಡು ಜನೌಷಧಿ ತೆಗೆಸುವ ಮೂಲಕ ಬಡವರಿಗೆ ಅನ್ಯಾಯ ಮಾಡುತ್ತಿದ್ದೀರಿ. ಇದು ಸರಿಯಾದ ಕ್ರಮವಲ್ಲ, ತಕ್ಷಣ ಈ ಆದೇಶವನ್ನು ಹಿಂಪಡೆಯಬೇಕು**
> –ಜಿಗಜಿಣಗಿ

> **ಸರ್ಕಾರಿ ಆಸ್ಪತ್ರೆಗೆ ಬರುವವರು ಬಡವರು, ಬಡವರ ಹೊಟ್ಟೆ ಮೇಲೆ ಕಲ್ಲು ಹಾಕುವ ಕೆಲಸ ಕಾಂಗ್ರೆಸ್ ಸರ್ಕಾರ ಮಾಡುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಮೋದಿ ಸರ್ಕಾರದ ಯೋಜನೆಯ ವಿರುದ್ಧ ಕಾಂಗ್ರೆಸ್ ಸರ್ಕಾರ ದ್ವೇಷದ ರಾಜಕಾರಣ ಮಾಡುತ್ತಿದೆ, ರಾಮರಾಜ್ಯ ಮಾಡುತ್ತೇನೆ ಎಂದವರು ಇವರು ರಾವಣ ರಾಜ್ಯ ಮಾಡಿದ್ದಾರೆ,ರಾಕ್ಷಸ ರಾಜ್ಯ ಮಾಡಿದ್ದಾರೆ** –ಎಸ್.ಕೆ. ಬೆಳ್ಳುಬ್ಬಿ

ಈ ಸದರ್ಭದಲ್ಲಿ ಮಾಜಿ ಸಚಿವರಾದ ಅಪ್ಪಾಸಾಹೇಬ ಪಟ್ಟಣಶೆಟ್ಟಿ, ಬೆಳಗಾವಿ ವಿಭಾಗದ ಪ್ರಭಾರಿಗಳಾದ ಚಂದ್ರಶೇಖರ ಕವಟಗಿ, ಬೀಜ ಮತ್ತು ಸಾವಯವ ನಿಗಮದ ಮಾಜಿ ಅಧ್ಯಕ್ಷರಾದ ವಿಜುಗೌಡ ಪಾಟೀಲ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಈರಣ್ಣ ರಾವೂರ, ಸಾಬು ಮಾಶ್ಯಾಳ, ಮಳುಗೌಡ ಪಾಟೀಲ, ಬಿಜೆಪಿ ಮುಖಂಡರಾದ ಸುರೇಶ ಬಿರಾದಾರ, ಸೇರಿದಂತೆ ಬಿಜೆಪಿಯ ಹಲವಾರು ಕಾರ್ಯಕರ್ತರು ಉಪಸ್ಥಿತರಿದ್ದರು.

## ಋತುಚಕ್ರದ ಅವಧಿಯಲ್ಲಿ ಜಂಕ್‌ಫುಡ್ ಬಳಕೆ ಬೇಡ: ಜಾನಕಿ

• ಉದಯವಾಹಿನಿ ಚಿತ್ರದುರ್ಗ

ಋತುಚಕ್ರದ ಅವಧಿಯಲ್ಲಿ ಯಾವುದೇ ಜಂಕ್‌ಫುಡ್ ಬಳಕೆ ಮಾಡಬಾರದು. ಪೌಷ್ಟಿಕಾಂಶವುಳ್ಳ ಆಹಾರ ಸೇವನೆ ಅತಿ ಮುಖ್ಯವಾದದ್ದು, ಇದರಿಂದ ರಕ್ತ ಹೀನತೆ ತಡೆಗಟ್ಟಬಹುದು ಎಂದು ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಜಾನಕಿ ಹೇಳಿದರು.

ಬುದ್ಧ ನಗರ ಆರೋಗ್ಯ ಕೇಂದ್ರದಲ್ಲಿ ವಿಶ್ವ ಋತುಚಕ್ರ ನೈರ್ಮಲ್ಯ ದಿನದ ಅಂಗವಾಗಿ ಆರೋಗ್ಯ ಇಲಾಖೆ ವತಿಯಿಂದ ನಗರದ ಅಂಗನವಾಡಿ ಕಾರ್ಯಕರ್ತರಿಗೆ ಮತ್ತು ಹದಿಹರೆಯದ ಹೆಣ್ಣು ಮಕ್ಕಳಿಗೆ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. 9 ರಿಂದ 16 ವರ್ಷದೊಳಗಿನ ಹೆಣ್ಣು ಮಕ್ಕಳಲ್ಲಿ ಪ್ರಥಮವಾಗಿ ಋತುಸ್ರಾವ ಆರಂಭವಾಗುತ್ತದೆ. ಇಂತಹ ಸಂದರ್ಭದಲ್ಲಿ ಮುಜುಗರವಿಲ್ಲದೆ ಪಾಲಕರ ಜೊತೆ ವಿಷಯ ಹಂಚಿಕೆ ಮಾಡಿಕೊಳ್ಳಬೇಕು. ಪೋಷಕರು ಸಹ ಅಂತಹ ಸಂದರ್ಭದಲ್ಲಿ ಹೆಣ್ಣುಮಕ್ಕಳ ಜೊತೆ ಸ್ನೇಹ ಭಾವಿಯಾಗಿ ವರ್ತಿಸಬೇಕು ಅವರಲ್ಲಿ ಆಗುವಂತಹ ಮಾನಸಿಕ, ದೈಹಿಕ, ಭಾವನಾತ್ಮಕ ಬದಲಾವಣೆಗಳನ್ನು ಗಮನಹರಿಸಿ ಅವರ ಸಮಸ್ಯೆಗಳನ್ನು ಪರಿಹರಿಸಲು ಮುಂದಾಗಬೇಕು ಎಂದು ತಿಳಿಸಿದರು. ಹಾಗೂ ವೈಯುಕ್ತಿಕ ಸುಚಿತ್ವದ ಕಡೆ ಹೆಚ್ಚಿನ ಮಾಹಿತಿಯನ್ನು ನೀಡಿ ಸ್ವಚ್ಛತೆ ಬಗ್ಗೆ ಆದ್ಯತೆ ನೀಡಿಬೇಕು. ಸ್ಯಾನಿಟರಿ ಪ್ಯಾಡ್‌ಗಳ ಬಳಕೆ ಬಗ್ಗೆ ತಿಳಿದು ಕೊಳ್ಳಬೇಕು.



☛ ಉದಯವಾಹಿನಿ ಚಿತ್ರ

ಮುಟ್ಟಾದ ದಿನಗಳಲ್ಲಿ ಪ್ರತಿ ನಾಲ್ಕರಿಂದ ಆರು ಗಂಟೆಗಳಿಗೊಮ್ಮೆ ಪ್ಯಾಡ್‌ಗಳನ್ನು ಬದಲಾಯಿಸಲು ಮಾಹಿತಿಯನ್ನು ಪೋಷಕರು ಸಹ ಹೆಣ್ಣು ಮಕ್ಕಳಿಗೆ ತಿಳಿಸಿ ಗಮನಹರಿಸುವುದು ಹಾಗೂ ಹೇಗೆ ವಿಲೇವಾರಿ ಮಾಡಬೇಕು ಎಂಬುದರ ಬಗ್ಗೆ ಕೂಡ ತಿಳಿಸಬೇಕು ಹಾಗೂ ಒಂದು ವೇಳೆ ಋತುಚಕ್ರದ ವೇಳೆಯಲ್ಲಿ ಅಧಿಕ ರಕ್ತಸ್ರಾವದಿಂದ ಬಳಲುತ್ತಿದ್ದರೆ ತಕ್ಷಣ ತಜ್ಞ ವೈದ್ಯರಲ್ಲಿ ಚಿಕಿತ್ಸೆ ಪಡೆದುಕೊಳ್ಳಬೇಕು ಎಂದು ತಿಳಿಸಿದರು. ಋತುಸ್ರಾವದ ಸಂದರ್ಭದಲ್ಲಿ ಸ್ವಚ್ಛತೆಗೆ ಹೆಚ್ಚಿನ ಆದ್ಯತೆ ನೀಡದಿದ್ದರೆ ಗರ್ಭಕೋಶದ ಸೋಂಕಿಗೆ ತುತ್ತಾಗಬಹುದು. ಆದ್ದರಿಂದ ಹೆಚ್ಚಿನ ಆದ್ಯತೆ ನೀಡಿ ಎಂದು ತಿಳಿಸಿದರು. ಬುದ್ಧ ನಗರ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ. ಸುರೇಂದ್ರ, ಅಂಗನವಾಡಿ ಮೇಲ್ವಿಚಾರಕಿ ನಿರ್ಮಲ, ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಶ್ರೀನಿವಾಸ್, ತಾಲ್ಲೂಕು ಆಶಾ ಬೋಧಕರಾದ ತಬಿತ, ಪ್ರಾಥಮಿಕ ಆರೋಗ್ಯ ಸುರಕ್ಷತಾ ಅಧಿಕಾರಿಗಳಾದ ಗೀತಾ, ಏಕಾಂತಮ್ಮ, ಸುಜಾತ ಹಾಗೂ ಅಂಗನವಾಡಿ ಕಾರ್ಯಕರ್ತರು, ಹದಿಹರೆಯದ ಹೆಣ್ಣು ಮಕ್ಕಳು ಹಾಜರಿದ್ದರು.

> **ಋತುಮತಿ ಆದ ಹುಡುಗಿ ಯುವತಿಯಾಗಿ ನಂತರ ಮಹಿಳೆಯಾಗಿ ಸಂತಾನೋತ್ಪತ್ತಿ ಕ್ರಿಯೆಗೆ ಅರ್ಹತೆ ಪಡೆಯುತ್ತಾಳೆ. ಪ್ರತಿ ತಿಂಗಳು 28 ರಿಂದ 30 ದಿನಗಳ ಒಳಗೆ ಆಗುವ ಋತುಚಕ್ರ ಮಹಿಳೆಗೆ ಗರ್ಭ ಧರಿಸಲು ಅತ್ಯಗತ್ಯ ಕ್ರಿಯೆ** –ಜಾನಕಿ
> ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ

## ಅಕ್ರಮ ಗೋವು ಸಾಗಾಟ ತಡೆಯಲು ವಿಶ್ವ ಹಿಂದೂ ಪರಿಷತ್ ಆಗ್ರಹ

• ಉದಯವಾಹಿನಿ ಹುಕ್ಕೇರಿ

ತಾಲ್ಲೂಕಾದ್ಯಂತ ಅಕ್ರಮ ಗೋವು ಸಾಗಾಟ ನಡೆದಿದ್ದು, ತಕ್ಷಣ ಪೊಲೀಸರು ಅದನ್ನು ತಡೆಗಟ್ಟಬೇಕು ಎಂದು ವಿಶ್ವ ಹಿಂದೂ ಪರಿಷತ್ ತಾಲ್ಲೂಕು ಘಟಕದ ಪದಾಧಿಕಾರಿಗಳು ಶನಿವಾರ ಪೊಲೀಸ್ ಇಲಾಖೆಗೆ ಆಗ್ರಹಿಸಿ ಮನವಿ ಸಲ್ಲಿಸಿದರು.

ಜೂ.7 ರಂದು ಬಕ್ರೀದ್ ಇರುವುದರಿಂದ ತಾಲ್ಲೂಕಿನ ವಿವಿಧೆಡೆ ಕಸಾಯಿಖಾನೆಯಲ್ಲಿ ಗೋವುಗಳನ್ನು ಸಂಗ್ರಹಿಸುವ ಕೆಲಸ ನಡೆದಿದೆ ಎಂದು ಕಂಡು ಬಂದಿದ್ದು, ರಾಜ್ಯದಲ್ಲಿ ಗೋ ಹತ್ಯೆ ನಿಷೇಧ ಕಾಯ್ದೆ ಇದ್ದರೂ ಕೂಡಾ ಗೋವು ಸಾಗಾಟ, ನಿರಂತರ ಹಿಂಸೆ, ಹತ್ಯೆ ನಡೆಯುತ್ತಿರುವುದು ಖಂಡನೀಯ ಎಂದು ಸಲ್ಲಿಸಿದ ಮನವಿಯಲ್ಲಿ ತಿಳಿಸಿದ್ದಾರೆ.

ತಕ್ಷಣ ಪೊಲೀಸರು ಕಾನೂನು ರೀತಿ ಕ್ರಮ ಕೈಗೊಂಡು ಗೋವುಗಳ ರಕ್ಷಣೆ ಮಾಡಬೇಕು ಎಂದು ಆಗ್ರಹಿಸಿ ಪೊಲೀಸ್ ಇಲಾಖೆಗೆ ಮನವಿ ಸಲ್ಲಿಸಿದರು.

ವಿಶ್ವ ಹಿಂದೂ ಪರಿಷತ್ ಘಟಕದ ಅಧ್ಯಕ್ಷ ಶಿವರಾಜ ನಾಯಿಕ, ದುರ್ಗಾ ವಾಹಿನಿ ಘಟಕದ ಅಧ್ಯಕ್ಷೆ ಕಾವೇರಿ ಪೂಜೇರಿ, ಬಜರಂಗ ದಳ ಜಿಲ್ಲಾ ಸಂಯೋಜಕ ಲಕ್ಷ್ಮಣ ಯಡ್ರಾಂವಿ,ಆಕಾಶ ಖನಾಯಿ,ಸಂಕೇಶ್ವರ ಇದ್ದರು.

## ನಿರ್ಬಂಧಿತ ಪ್ರದೇಶಗಳಲ್ಲಿ ತಂಬಾಕು ಮಾರಾಟಕ್ಕೆ ಕಡಿವಾಣ ಹಾಕಿ

• ಉದಯವಾಹಿನಿ ಹೊಸಪೇಟೆ

ಜಿಲ್ಲಾ ವ್ಯಾಪ್ತಿಯ ಶಾಲಾ-ಕಾಲೇಜು, ಬಸ್ ನಿಲ್ದಾಣ, ಪ್ರವಾಸಿ ತಾಣಗಳು ಸೇರಿ ನಿರ್ಬಂಧಿತ ಪ್ರದೇಶಗಳಲ್ಲಿ ಅಕ್ರಮ ತಂಬಾಕು ಮಾರಾಟಗಾರರ ಮೇಲೆ ಸೂಕ್ತ ಕಠಿಣ ಕ್ರಮ ವಹಿಸಬೇಕು ಎಂದು ಅಪರ ಜಿಲ್ಲಾಧಿಕಾರಿ ಇ.ಬಾಲಕೃಷ್ಣಪ್ಪ ಹೇಳಿದರು. ನಗರದ ಜಿಲ್ಲಾಧಿಕಾರಿ ಕಚೇರಿಯ ಸಭಾಂಗಣದಲ್ಲಿ ಜಿಲ್ಲಾ ಆರೋಗ್ಯ ಕುಟುಂಬ ಕಲ್ಯಾಣ ಇಲಾಖೆ ವತಿಯಿಂದ ಏರ್ಪಡಿಸಿದ್ದ ಜಿಲ್ಲಾ ತಂಬಾಕು ನಿಯಂತ್ರಣ ಕೋಶದ ಜಿಲ್ಲಾ ಮಟ್ಟದ ಸಮನ್ವಯ ಸಮಿತಿ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು,

ಯುವಕರಿಗೆ ತಂಬಾಕು ಸೇವನೆ ಸಿಗದಂತೆ ಅಂಗಡಿಗಳಲ್ಲಿ ನಿಷೇಧ ಮಾಡಬೇಕು. ತಂಬಾಕು ಮಾರಾಟ ಮಾಡುವ ಅಂಗಡಿಗಳಲ್ಲಿ ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ತಂಬಾಕು ಉತ್ಪನ್ನಗಳ ಯಾವುದೇ ಜಾಹೀರಾತು ಇರಬಾರದು.

18 ವರ್ಷದೊಳಗಿನ ಅಪ್ರಾಪ್ತ ವಯಸ್ಕರಿಗೆ ತಂಬಾಕು ಮಾರಾಟ ಮಾಡುವ ಯಾವುದೇ ಪುರಾವೆಗಳು ಹಳ್ಳಿಯಲ್ಲಿ ಕಂಡು ಬರಬಾರದು. 18 ವರ್ಷದೊಳಗಿನ ವ್ಯಕ್ತಿಗೆ ತಂಬಾಕು ಉತ್ಪನ್ನಗಳನ್ನು ಮಾರಾಟ ಮಾಡುವುದನ್ನು ನಿಷೇಧಿಸಿದೆ. ಉಲ್ಲಂಘಿಸಿದರೇ ಶಿಕ್ಷಾರ್ಹ ಎಂಬ ನಾಮಫಲಕವನ್ನು ಎಲ್ಲಾ ತಂಬಾಕು ಉತ್ಪನ್ನ ಮಾರಾಟ ಅಂಗಡಿಗಳಲ್ಲಿ ಅಳವಡಿಸಬೇಕು ಎಂದು ಸೂಚಿಸಿದರು.



☛ ಉದಯವಾಹಿನಿ ಚಿತ್ರ

> **ಜಿಲ್ಲೆಯಲ್ಲಿ ತಡೆಗಟ್ಟಬಹುದಾದ ಕಾಯಿಲೆ ಮತ್ತು ಮರಣ ಕಾರಣಗಳಲ್ಲಿ ತಂಬಾಕು ಸೇವನೆ ಪ್ರಮುಖ ಕಾರಣವಾಗಿದೆ. ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ತಂಬಾಕು ಸೇವನೆಯಿಂದ ಮಾನವನ ದೇಹದ ಮೇಲೆ ಉಂಟಾಗುವ ದುಷ್ಪರಿಣಾಮಗಳ ಕುರಿತು ಸಾರ್ವಜನಿಕರಿಗೆ ಜಾಗೃತಿ ಮೂಡಿಸಬೇಕಿದೆ. ತಂಬಾಕು ಸೇವನೆ ತ್ಯಜಿಸಲು ಅಗತ್ಯ ಆರೋಗ್ಯ ಚಿಕಿತ್ಸೆ ಹಾಗೂ ಆಪ್ತ ಸಮಾಲೋಚನೆ ಮೂಲಕ ತಂಬಾಕು ಸೇವನೆಯನ್ನು ತ್ಯಜಿಸುವಂತೆ ಪ್ರೇರೇಪಿಸಬೇಕು** –ಇ.ಬಾಲಕೃಷ್ಣಪ್ಪ

## ಮಹಿಳೆಯರು ನರೇಗಾ ಯೋಜನೆಯ ಸದುಪಯೋಗ ಪಡೆಯಿರಿ

• ಉದಯವಾಹಿನಿ ಕಾರಟಗಿ

ನರೇಗಾ ಯೋಜನೆಯಡಿ ಮಹಿಳೆಯರು ವೈಯಕ್ತಿಕ ಹಾಗೂ ಸಮುದಾಯ ಕಾಮಗಾರಿಗಳನ್ನು ಕೈಗೆತ್ತಿಕೊಂಡು, ಆರ್ಥಿಕವಾಗಿ ಸ್ವಾವಲಂಬನೆಯಾಗಲು ಯೋಜನೆ ಸದುಪಯೋಗ ಪಡೆಯಿರಿ ಎಂದು ಚಳ್ಳೂರು ಗ್ರಾ. ಪಂ ಪಿಡಿಓ ರಾಮು ನಾಯಕ ಅವರು ಹೇಳಿದರು. ತಾಲ್ಲೂಕಿನ ಚಳ್ಳೂರು ಕ್ಯಾಂಪ್ ಸರ್ಕಾರಿ ಶಾಲಾ ಆವರಣದಲ್ಲಿ ಆಯೋಜಿಸಿದ್ದ ಮಹಿಳಾ ಗ್ರಾಮ ಸಭೆ ಹಾಗೂ ಸ್ತ್ರೀ ಚೇತನ ಅಭಿಯಾನ ಕಾರ್ಯಕ್ರಮದಲ್ಲಿ ಮಾತನಾಡಿದರು.

ನರೇಗಾ ಕೂಲಿ ಕೆಲಸ ಎಂಬುದು ಗ್ರಾಮೀಣ ಬಡ ಜನರ ಪಾಲಿಗೆ ವರವಾಗಿದ್ದು, ಇಲ್ಲಿ ಯಾವುದೇ ತಾರತಮ್ಯ ಮಾಡದೇ ಗಂಡು ಹೆಣ್ಣಿಗೆ ಸಮಾನ ಕೂಲಿ, ಸಮಾನ ವೇತನ ನೀಡಿ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರನ್ನು ಕೆಲಸಕ್ಕೆ ಕರೆತರಲು ಪ್ರೇರೇಪಿಸುತ್ತಿದೆ ಎಂದರು.

ಈ ವೇಳೆ ಗ್ರಾ.ಪಂ ಸದಸ್ಯರು, ತಾಂತ್ರಿಕ ಸಹಾಯಕ ಚೇತನ ಕುಮಾರ್, ಗಣಕಯಂತ್ರ ನಿರ್ವಾಹಕ ಹನುಮಂತಪ್ಪ, ಗ್ರಾಮ ಕಾಯಕ ಮಿತ್ರರಾದ ಷಹನಾಜ್ ಬೇಗಂ, ಸಿಬ್ಬಂದಿಗಳಾದ ಹನುಮೇಶ್, ವೆಂಕಟೇಶ, ಕಾಯಕ ಬಂಧುಗಳು, ನರೇಗಾ ಕೂಲಿಕಾರರು



☛ ಉದಯವಾಹಿನಿ ಚಿತ್ರ

> **ನರೇಗಾ ಕೆಲಸದಲ್ಲಿ ಮಹಿಳಾ ಭಾಗವಹಿಸುವಿಕೆ ಹೆಚ್ಚಿಸಲು ಸ್ತ್ರೀ ಚೇತನ ಅಭಿಯಾನವನ್ನು ಹಮ್ಮಿಕೊಂಡಿದೆ. ನರೇಗಾ ಕೆಲಸಕ್ಕೆ ಬರುವ ಕೂಲಿಕಾರರು ಕಡ್ಡಾಯವಾಗಿ ಎನ್ ಎಮ್ ಎಮ್ ಎಸ್ ಹಾಜರಾತಿಯನ್ನು ಪಾರದರ್ಶಕವಾಗಿ ಹಾಕಲು ಸಹಕರಿಸಬೇಕು. ನರೇಗಾ ಕೂಲಿ 349 ರಿಂದ 370 ಗೆ ಹೆಚ್ಚಳವಾಗಿದೆ, ಕೆಲಸಕ್ಕೆ ತಕ್ಕಂತೆ ಕೂಲಿ ಹಣ ಪಾವತಿಸಲಾಗುತ್ತದೆ**
> –ಸೋಮನಾಥ
> ತಾ.ಪಂ ಐಇಸಿ ಸಂಯೋಜಕ

## ಸನಾತನ ಧರ್ಮದ ಐಕ್ಯತೆ ಸಮಾವೇಶದ ಮೂಲಗುರಿ: ರಾಮಕೃಷ್ಣನ್ ಸಾಳೆ

• ಉದಯವಾಹಿನಿ ಬೀದರ್

ಜೂನ್ 3 ರಿಂದ 12ರ ವರೆಗೆ ಸುಮಾರು 10 ದಿವಸಗಳ ಕಾಲ ನಗರದ ಶಿವನಗರದಲ್ಲಿರುವ ಸ್ವಾಮಿ ಸಮರ್ಥ ಕಲ್ಯಾಣ ಮಂಟಪದಲ್ಲಿ ಸನಾತನ ಸಂಸ್ಕೃತಿ ಧರ್ಮ ಸಭೆ ಜರುಗಲಿದೆ ಎಂದು ವಿಶ್ವ ಹಿಂದೂ ಪರಿಷತ್ತಿನ ಪ್ರಾಂತೀಯ ಸದಸ್ಯರು ಹಾಗೂ ಕಾರ್ಯಕ್ರಮದ ಸಂಚಾಲಕರಾದ ರಾಮಕೃಷ್ಣನ್ ಸಾಳೆ ತಿಳಿಸಿದರು.

ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಶುಕ್ರವಾರ ಆಯೋಜಿಸಿದ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ಶ್ರೀ ತುಳಸಿಮಾನಸ ಸೇವಾ ಪ್ರತಿಷ್ಠಾನ ಮತ್ತು ರಾಧಾಕೃಷ್ಣ ಸತ್ಸಂಗ ಸಮಿತಿ ವತಿಯಿಂದ ನಡೆಯುತ್ತಿರುವ ಈ ಕಾರ್ಯಕ್ರಮದಲ್ಲಿ ರಾಷ್ಟ್ರ ಮಟ್ಟದ ಉಪನ್ಯಾಸಕರು, ಜಿಲ್ಲೆಯ ಮಠಾಧೀಶರು ಹಾಗೂ ಪೂಜ್ಯ ಕಾಶಿ ಜಗದ್ಗುರುಗಳು ಸೇರಿದಂತೆ ಸನಾತನ ಹಿಂದೂ ಧರ್ಮದ ಸಾವಿರಾರು ಜನರು ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು.

ಅಖಂಡ ಹರಿನಾಮ ಸಪ್ತಾಹ, ರಾಮಚರಿತ ಮಾನಸ ಪಾರಾಯಣ ಸಮಾರೋಪ ಮತ್ತು ಶ್ರೀಮದ್ ಭಗವತ ಕಥಾ ಜ್ಞಾನಯಜ್ಞ ಕೂಡಾ ಜರುಗಲಿದೆ. ಕಾರ್ಯಕ್ರಮದಲ್ಲಿ ಪಾಲ್ಗೊಂಡು ಯಶಸ್ವಿಗೊಳಿಸಬೇಕೆಂದು ಕರೆ ನೀಡಿದರು.



☛ ಉದಯವಾಹಿನಿ ಚಿತ್ರ

> **ಪ್ರತಿದಿನ ಬೆಳಿಗ್ಗೆ 4 ರಿಂದ 6 ಗಂಟೆ ವರೆಗೆ ಕಾಕಡಾರತಿ, 6 ರಿಂದ 8ರ ವರೆಗೆ ವಿಷ್ಣು ಸಹಸ್ರನಾಮ ಪಠಣ ಮತ್ತು ಪುಷ್ಪಾಂಜಲಿ, 9 ರಿಂದ 11ರ ವರೆಗೆ ರಾಮಚರಿತ ಮಾನಸ ಸಂಗೀತಮಯ ಪಠಣ, 12 ರಿಂದ 4ರ ವರೆಗೆ ಶ್ರೀಮದ್ ಭಗವತ್ ಕಥಾ, ಸಂಜೆ 5 ರಿಂದ 7ರ ವರೆಗೆ ಸನಾತನ ಧರ್ಮ ಸಭೆ, 7-30ರಿಂದ ಹರಿ ಕೀರ್ತನೆ ಹಾಗೂ ಭಜನೆ ಕಾರ್ಯಕ್ರಮಗಳು ಜರುಗಲಿವೆ**
> –ರಾಮಕೃಷ್ಣನ್ ಸಾಳೆ, ಸಂಚಾಲಕ

ಕಾರ್ಯಕ್ರಮದ ಆಯೋಜಕರಲ್ಲಿ ಒಬ್ಬರಾದ ನಂದಕಿಶೋರ ವರ್ಮಾ ಮಾತನಾಡಿ, ಸನಾತನ ಹಿಂದೂ ಧರ್ಮದ ಪ್ರಚಾರ ಕಾರ್ಯ ಇದರಲ್ಲಿ ನಡೆಯಲಿದೆ. ಹರಿದು ಹಂಚಿ ಹೋಗಿರುವ ಹಿಂದೂ ಧರ್ಮಿಯರನ್ನು ಒಂದುಗೂಡಿಸಿ ಐಕ್ಯತೆ ಸಾರುವುದು, ಜಾತಿಯತೆ ನಿರ್ಮೂಲನೆ ಮಾಡಿ ಸನಾತನ ಧರ್ಮದವರಲ್ಲಿ ಐಕ್ಯತೆ ಮೂಡಿಸುವುದಕ್ಕಾಗಿ ಪುಷ್ಪೇಂದ್ರ ಕುಲಶ್ರೇಷ್ಠರು, ಸುಪ್ರಿಂ ಕೋರ್ಟ್ ನ್ಯಾಯವಾದಿ ಅಶ್ವಿನಿ ಉಪಾಧ್ಯಾಯ, ಹಾರಿಕಾ ಮಂಜುನಾಥ ಸೇರಿದಂತೆ ಹಲವು ಭಾಷಣಕಾರರು ಆಗಮಿಸಲಿದ್ದಾರೆ. ಸುಮಾರು ಮೂರು ತಿಂಗಳಿನಿಂದ ಕಾರ್ಯಕ್ರಮದ ಆಯೋಜನೆಗೆ ಶ್ರಮಿಸಲಾಗುತ್ತಿದೆ ಎಂದು ತಿಳಿಸಿದರು.

ಖ್ಯಾತ ಕಥಾಕಾರರಾದ ಕೃಷ್ಣ ಮಹಾರಾಜ ಮಾತನಾಡಿ, ಸನಾತನ ಹಿಂದೂ ಧರ್ಮಸಭೆ ನಗರದಲ್ಲಿ ಒಂದು ಹಬ್ಬದ ವಾತಾವರಣ ನಿರ್ಮಾಣ ಮಾಡಲಿದೆ. ಹಲವು ಉತ್ಕೃಷ್ಟವಾದ ವಿಚಾರಗಳು ಇಲ್ಲಿ ಉಪನ್ಯಾಸಕರು ಮಂಡಿಸಲಿದ್ದಾರೆ. ಆದ್ದರಿಂದ ಹೆಚ್ಚಿನ ಸಂಖ್ಯೆಯಲ್ಲಿ ಸನಾತನ ಧರ್ಮದವರು ಪಾಲ್ಗೊಂಡು ಯಶಸ್ವಿಗೊಳಿಸಬೇಕೆಂದು ಕೋರಿದರು.

## ತಾ.ಪಂ ಸಾಮಾನ್ಯ ಸಭೆ

• ಉದಯವಾಹಿನಿ ಬೆಳ್ತಂಗಡಿ

ತಾಲ್ಲೂಕು ಪಂಚಾಯಿತಿಯ ಸಾಮಾನ್ಯ ಸಭೆ ತಾಲ್ಲೂಕು ಪಂಚಾಯಿತಿ ಆಡಳಿತಾಧಿಕಾರಿ, ದಕ್ಷಿಣ ಕನ್ನಡ ಜಿಲ್ಲಾ ಪಂಚಾಯಿತಿಯ ಉಪ ಕಾರ್ಯದರ್ಶಿ ಜಯಲಕ್ಷ್ಮೀ ರಾಯಕೋಡ್ ಅವರ ಅಧ್ಯಕ್ಷತೆಯಲ್ಲಿ ತಾಲ್ಲೂಕು ಪಂಚಾಯತಿ ಸಭಾಂಗಣದಲ್ಲಿ ಶನಿವಾರ ನಡೆಯಿತು.

ಕಳೆದ ಸಾಮಾನ್ಯ ಸಭೆಯ ನಿರ್ಣಯಗಳ ಬಗ್ಗೆ ಕೈಗೊಂಡ ಕ್ರಮಗಳನ್ನು ಪರಿಶೀಲಿಸಲಾಯಿತು. 2024-25ನೇ ಸಾಲಿನ ತಾಲ್ಲೂಕು ಪಂಚಾಯತಿಯ ಮಾಸಿಕ ಲೆಕ್ಕ ಪತ್ರಗಳಿಗೆ ಹಾಗೂ ಇತರ ಇಲಾಖೆಗಳ ವಾರ್ಷಿಕ ಲೆಕ್ಕ ಪತ್ರಗಳಿಗೆ ಅನುಮೋದನೆ ನೀಡಲಾಯಿತು. 2025-26ನೇ ಸಾಲಿನ ಲಿಂಕ್ ದಾಖಲೆ ಪ್ರಕಾರ ವಿವಿಧ ಇಲಾಖೆಗಳಿಗೆ ವಾರ್ಷಿಕವಾಗಿ ನಿಗದಿಪಡಿಸಿದ ಕ್ರಿಯಾ ಯೋಜನೆಗಳಿಗೆ ಅನುಮೋದನೆ ನೀಡಲಾಯಿತು.

## ಕೆಎಚ್‌ಬಿ ಕಾಲೋನಿಗೆ ಶೀಘ್ರವೇ ಜಲಸಿರಿ ನೀರು: ಪೌರಾಯುಕ್ತರ ಭರವಸೆ

• ಉದಯವಾಹಿನಿ ಹರಿಹರ

ನಗರದ ಕೆಎಚ್‌ಬಿ ಕಾಲೋನಿಗೆ ಶೀಘ್ರವೇ ದಿನದ 24 ಗಂಟೆಯೂ 'ಜಲಸಿರಿ' ಯೋಜನೆಯಡಿ ಕುಡಿಯುವ ನೀರು ಸರಬರಾಜು ಆರಂಭಿಸಲಾಗುವುದು ಎಂದು ನಗರಸಭೆ ಪೌರಾಯುಕ್ತ ಸುಬ್ರಹ್ಮಣ್ಯ ಶ್ರೇಷ್ಠಿ ಭರವಸೆ ನೀಡಿದರು.

ನಾಗರಿಕರ ಹಿತರಕ್ಷಣಾ ಸಮಿತಿಯ ಆಹ್ವಾನದ ಮೇರೆಗೆ ಶನಿವಾರ ಕಾಲೋನಿಗೆ ಭೇಟಿ ನೀಡಿದ್ದ ಅವರು, ಈಗಾಗಲೇ ನಗರದ ಬಹುತೇಕ ವಸತಿ ಪ್ರದೇಶಗಳಲ್ಲಿ ಜಲಸಿರಿ ನೀರಿನ ಸೌಲಭ್ಯ ಒದಗಿಸಲಾಗಿದೆ. ತಾಂತ್ರಿಕ ಅಡ್ಡಿಯಿಂದಾಗಿ ಈವರೆಗೆ ಕಾಲೋನಿಗೆ ಜಲಸಿರಿ ಕುಡಿಯುವ ನೀರು ಸರಬರಾಜು ಮಾಡಲಾಗಿಲ್ಲ. ಈ ಕುರಿತು ಇರುವ ಅಡ್ಡಿಗಳು ನಿವಾರಣೆಯಾಗುತ್ತಿದ್ದು, ಶೀಘ್ರವೇ ಕಾಲೋನಿ ಪ್ರದೇಶಕ್ಕೂ ಜಲಸಿರಿ ನೀರು ಬರಲಿದೆ ಎಂದರು. ಇಲ್ಲಿನ ಹದಗೆಟ್ಟ ರಸ್ತೆಗಳ ಬಗ್ಗೆ ನಿವಾಸಿಗಳು ಗಮನ ಸೆಳೆದರು. ಸದ್ಯಕ್ಕೆ ಗುಂಡಿಗಳನ್ನು ಮುಚ್ಚಲು ಸೂಕ್ತ ಕ್ರಮ ಕೈಗೊಳ್ಳಲಾಗುವುದು' ಎಂದರು.

ಸರ್ಕಾರದಿಂದ ನಿರ್ಮಿತವಾದ ಈ ವಸತಿ ಪ್ರದೇಶದಲ್ಲಿ ಸಾಕಷ್ಟು ಜನರು ವಾಸಿಸುತ್ತಿದ್ದಾರೆ. ಇಲ್ಲಿನ ನಿವಾಸಿಗಳು ನಿಯಮಬದ್ಧವಾಗಿ ನಗರಸಭೆಗೆ ಕಂದಾಯ ಪಾವತಿ ಮಾಡುತ್ತಿದ್ದಾರೆ. ಆದರೆ ಉದ್ಯಾನ, ನೀರು, ರಸ್ತೆ, ಬೀದಿ ದೀಪ ಸೇರಿದಂತೆ ವಿವಿಧ ಮೂಲ ಸೌಕರ್ಯಗಳು ಇನ್ನೂ ಮರೀಚಿಕೆಯಾಗಿದೆ ಎಂದು ನಾಗರಿಕ ಹಿತರಕ್ಷಣಾ ಸಮಿತಿಯ ಅಧ್ಯಕ್ಷ ಎಚ್.ನಿಜಗುಣ ಹೇಳಿದರು. ಸಂಜೆಯ ನಂತರ ಕತ್ತಲಿನಿಂದಾಗಿ ಈ ಪ್ರದೇಶದಲ್ಲಿ ಸಂಚರಿಸಲು ಭಯವಾಗುತ್ತದೆ. ಬೆಳೆಯುತ್ತಿರುವ ವಸತಿ ಪ್ರದೇಶವಾಗಿರುವ ಕಾಲೋನಿಗೆ ನಗರಸಭೆಯಿಂದ ಹೆಚ್ಚಿನ ಅನುದಾನ ಬಿಡುಗಡೆ ಮಾಡಬೇಕು ಎಂದು ಅವರು ಆಗ್ರಹಿಸಿದರು.



☛ ಉದಯವಾಹಿನಿ ಚಿತ್ರ

### • ನರಗುಂದ ತಾಲ್ಲೂಕು ನೀರಾವರಿ ಪ್ರದೇಶವಾಗಿರುವುದರಿಂದ ಇಲ್ಲಿ ಕೂಲಿಕಾರರನ್ನು ಕೆಲಸಕ್ಕೆ ಕರೆ ತರುವುದು ದೊಡ್ಡ ಸವಾಲಿನ ಕೆಲಸ

# ಲಕ್ಷಕ್ಕೂ ಹೆಚ್ಚು ಮಾನವ ದಿನಗಳ ಕೆಲಸ: ನರಗುಂದ ಸಾಧನೆ

• ಉದಯವಾಹಿನಿ ನರಗುಂದ

ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ (ನರೇಗಾ) ಯೋಜನೆಯನ್ನು ಇಲ್ಲಿಯ ತಾಲ್ಲೂಕು ಪಂಚಾಯಿತಿ ಹಾಗೂ ಗ್ರಾಮ ಪಂಚಾಯಿತಿಗಳು ಸಮರ್ಪಕವಾಗಿ ಜಾರಿಗೆ ತರುವ ಮೂಲಕ ತಾಲ್ಲೂಕು ಗದಗ ಜಿಲ್ಲೆಯಲ್ಲಿ ಪ್ರಥಮ ಸ್ಥಾನ ಪಡೆದಿದೆ.

1,01,719 ಲಕ್ಷ ಮಾನವ ದಿನಗಳನ್ನು ಸೃಜಿಸುವ ಮೂಲಕ ಈ ಸಾಧನೆ ಮಾಡಿದೆ. ತಾಲ್ಲೂಕಿನ 13 ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯ ಆರ್ಥಿಕ ವರ್ಷದ ಮೊದಲ ಎರಡು ತಿಂಗಳಲ್ಲಿ ಬೇಸಿಗೆ ಸಂದರ್ಭ ನಿರುದ್ಯೋಗ ಸೃಷ್ಟಿ ಸಾಮಾನ್ಯ. ಇದರಿಂದಾಗಿ ಜನ ವಲಸೆ ತೆರಳುತ್ತಾರೆ.

ಇದನ್ನು ತಪ್ಪಿಸಲು ನರೇಗಾ ಯೋಜನೆಯಡಿ ನಿರ್ಮಾಣ ಕಾಮಗಾರಿ ಆರಂಭಿಸಲಾಗುತ್ತದೆ. ಪ್ರತಿ ಹಳ್ಳಿಗಳಲ್ಲಿ ಸಾಮೂಹಿಕ ಬದು ನಿರ್ಮಾಣ ಕಾಮಗಾರಿ ನಡೆಸಲಾಗುತ್ತದೆ. ಇದರಲ್ಲಿ ನರಗುಂದ ತಾಲ್ಲೂಕು ವಿಶೇಷ ಸಾಧನೆ ಮಾಡಿದೆ. ನರಗುಂದ ತಾಲ್ಲೂಕು ನೀರಾವರಿ ಪ್ರದೇಶವಾಗಿರುವುದರಿಂದ ಇಲ್ಲಿ ಕೂಲಿಕಾರರನ್ನು ಕೆಲಸಕ್ಕೆ ಕರೆ ತರುವುದು ದೊಡ್ಡ ಸವಾಲಿನ ಕೆಲಸ. ಇದರ ನಡುವೆ ಪ್ರಥಮ ಸ್ಥಾನ ಬಂದಿರುವುದು ನರಗುಂದ ಪಂಚಾಯಿತಿಗಳಿಗೆ ಗರಿ ಮೂಡಿದಂತಾಗಿದೆ. ಇದರ ಹಿಂದೆ ತಾಲ್ಲೂಕು ಹಾಗೂ ಗ್ರಾಮ ಪಂಚಾಯಿತಿ ಅಧಿಕಾರಿಗಳ ಶ್ರಮ ಇರುವುದು ಕಾಣುತ್ತಿದೆ.



☛ ಉದಯವಾಹಿನಿ ಚಿತ್ರ

> **ಗುರಿ ಮೀರಿ ಸಾಧನೆ**
> **ಬೇಸಿಗೆಯ ಎರಡು ತಿಂಗಳಲ್ಲಿ 1 ಲಕ್ಷ ಮಾನವ ದಿನಗಳ ಸೃಜನೆಯ ಗುರಿ ಹೊಂದಲಾಗಿತ್ತು. ನರಗುಂದ ತಾಲ್ಲೂಕಿನಲ್ಲಿ ಬಹುತೇಕ ಜಮೀನು ನೀರಾವರಿಗೆ ಒಳಪಟ್ಟಿರುವುದರಿಂದ ರೈತರನ್ನು ಬದು ನಿರ್ಮಿಸಿ ಕೊಳ್ಳಲು ಮತ್ತು ಕೂಲಿಕಾರರನ್ನು ನರೇಗಾದಡಿ ತೊಡಗಿಸಿಕೊಳ್ಳುವುದು ಸವಾಲಿನ ಕೆಲಸವಾಗಿತ್ತು. ಎಲ್ಲಾ ಗ್ರಾಮ ಪಂಚಾಯಿತಿಗಳ ಸಹಕಾರದಿಂದ ಈ ಬೇಸಿಗೆಯಲ್ಲಿ ಏಪ್ರಿಲ್ ಮೇ ತಿಂಗಳಲ್ಲಿ ಹೆಚ್ಚು ಮಾನವ ದಿನಗಳ ಕೆಲಸ ಮಾಡಲಾಗಿದೆ. ಗುರಿ ಮೀರಿ ಸಾಧನೆ ಮಾಡಿದ್ದೇವೆ. ಶೇಕಡಾವಾರು ಮಾನವ ದಿನಗಳ ಸೃಜನೆಯಲ್ಲಿ ಗದಗ ಜಿಲ್ಲೆಯಲ್ಲಿ ನರಗುಂದ ತಾಲ್ಲೂಕು ಪ್ರಥಮ ಸ್ಥಾನದಲ್ಲಿರುವುದು ಖುಷಿ ತಂದಿದೆ. ಸಂತೋಷಕುಮಾರ್ ಪಾಟೀಲ ಸಹಾಯಕ ನಿರ್ದೇಶಕ ತಾಲ್ಲೂಕು ಪಂಚಾಯಿತಿ ನರಗುಂದ ಎಲ್ಲರ ಶ್ರಮದಿಂದಾಗಿ ಸಾಧನೆ ಜಿಲ್ಲಾ ಪಂಚಾಯಿತಿ ಸಿಇಒ ಮತ್ತು ಉಪಕಾರ್ಯದರ್ಶಿಗಳ ಮಾರ್ಗದರ್ಶನದಲ್ಲಿ ತಾಲ್ಲೂಕು ಮಟ್ಟದ ಅಧಿಕಾರಿಗಳು ಗ್ರಾ.ಪಂ ಮಟ್ಟದ ಅಧಿಕಾರಿಗಳು ಶ್ರಮ ವಹಿಸಿ ಕೆಲಸ ಮಾಡಿದ್ದರಿಂದ ಈ ಸಾಧನೆ ಸಾಧ್ಯವಾಗಿದೆ** –ಎಸ್.ಕೆ. ಇನಾಮದಾರ, ಇಒ ತಾಲ್ಲೂಕು ಪಂಚಾಯಿತಿ ನರಗುಂದ.

ತಾಲ್ಲೂಕು ಮಟ್ಟದ ಅಧಿಕಾರಿಗಳು, ಗ್ರಾಮ ಪಂಚಾಯತಿ ಮಟ್ಟದ ಅಧಿಕಾರಿಗಳು ಪ್ರತಿ ಗ್ರಾಮಗಳಲ್ಲಿ ಕೂಲಿಕಾರರ ಜೊತೆ ಸಭೆ ನಡೆಸಿ, ನರೇಗಾ ಯೋಜನೆಯ ಕುರಿತು ಕೂಲಿಕಾರರಿಗೆ ಸಿಗುವ ಸೌಲಭ್ಯಗಳ, ಕೆಲಸದ ಪ್ರಮಾಣದಲ್ಲಿ ರಿಯಾಯಿತಿ, ಕೆಲಸದ ಪ್ರಮಾಣ, ಸಮಾನ ಕೆಲಸಕ್ಕೆ ಸಮಾನ ವೇತನ ಸೇರಿ ಯೋಜನೆಯ ಬಗ್ಗೆ ಮಾಹಿತಿ ನೀಡಿ ಹೆಚ್ಚಿನ ಸಂಖ್ಯೆಯಲ್ಲಿ ಕೂಲಿಕಾರರನ್ನು ಕೆಲಸಕ್ಕೆ ಬರುವಂತೆ ಮಾಡಿರುವುದು ಈ ಸಾಧನೆಗೆ ಕಾರಣವಾಗಿದೆ.

**ಗದಗ ಜಿಲ್ಲೆಗೆ ಪ್ರಥಮ**

**ವ್ಯಾಪಕ ಪ್ರಚಾರ:** ಪಂಚಾಯಿತಿ ಅಧಿಕಾರಿಗಳು, ಸಿಬ್ಬಂದಿ, ಕಾಯಕ ಬಂಧುಗಳು ನರೇಗಾ ಯೋಜನೆಯ ಅನುಷ್ಠಾನಗೊಳಿಸಲು ಪೂರ್ವಭಾವಿಯಾಗಿ ಜನವರಿ ತಿಂಗಳಲ್ಲಿ ಜಾಬ್ ಕಾರ್ಡ್ ಅಭಿಯಾನ, ಮಾರ್ಚ್ ಮೊದಲ ವಾರದಲ್ಲಿ ತಾಲ್ಲೂಕು ಮಟ್ಟದ ಕಾಯಕ ಬಂಧುಗಳಿಗೆ, ಜಿಕೆಎಂ, ಬಿಎಫ್‌ಟಿಗಳಿಗೆ ಕಾರ್ಯಾಗಾರ ನಡೆಸಿದ್ದಾರೆ. ಎರಡನೇ ಹಂತದಲ್ಲಿ ಪ್ರತಿ ಗ್ರಾಮ ಪಂಚಾಯತಿ ಮಟ್ಟದಲ್ಲಿ ಕಾಯಕಬಂಧುಗಳು, ಮಹಿಳಾ ಸ್ವಸಹಾಯ ಸಂಘದವರೊಂದಿಗೆ ಸಭೆ ನಡೆಸಿದ್ದಾರೆ. ಮೂರನೇ ಹಂತದಲ್ಲಿ ಕೂಲಿ ಬೇಡಿಕೆ ಕಡಿಮೆ ಇರುವ ಮತ್ತು ಹಿಂದಿನ ಸಾಲಿನಲ್ಲಿ ಯೋಜನೆ ಅನುಷ್ಠಾನದಲ್ಲಿ ನಿರಾಸಕ್ತಿ ತೋರಿಸಿದ ಗ್ರಾಮ ಪಂಚಾಯತಿಗಳನ್ನು ವಿಶೇಷವಾಗಿ ಗುರುತಿಸಿ ತಾಲ್ಲೂಕು ಮಟ್ಟದ ಅಧಿಕಾರಿಗಳು ಭೇಟಿ ನೀಡಿ ಯೋಜನೆಯ ಸೌಲಭ್ಯಗಳ ಬಗ್ಗೆ ಜಾಗೃತಿ ಮೂಡಿಸಿದ್ದು ವಿಶೇಷ. ಗ್ರಾಮ ಪಂಚಾಯಿತಿಗಳು ಸ್ವಚ್ಛ ವಾಹಿನಿಯ ಧ್ವನಿವರ್ಧಕಗಳ ಮೂಲಕ ಆಡಿಯೊ ಜಿಂಗಲ್ಸ್ ಗಳನ್ನು ಬಳಸಿ ಜಾಬ್ ಕಾರ್ಡ್ ಅಪ್ಡೇಟ್‌ಗೊಳಿಸುವುದು, ಕೆಲಸದ ಪ್ರಮಾಣ, ಮಹಿಳೆಯರಿಗೆ ಸಮಾನ ಕೂಲಿ, ಕೂಲಿದರದಲ್ಲಿ ಹೆಚ್ಚಳ ಇತ್ಯಾದಿ ಕುರಿತು ವ್ಯಾಪಕ ಪ್ರಚಾರ ನಡೆಸಲಾಗಿದೆ. ಏಪ್ರಿಲ್ ತಿಂಗಳಲ್ಲಿ ಕೆಲಸ ಆರಂಭಿಸಿದಾಗ ಕೂಲಿಕಾರರು ಈ ಬಾರಿ ಬದಲಾವಣೆಯಾದ ಎನ್.ಎಂ.ಎಂ.ಎಸ್ ಆ್ಯಪ್‌ನ ತಾಂತ್ರಿಕ ಸಮಸ್ಯೆಗಳ ನೆಪ ಒಡ್ಡಿ ಕೆಲಸಕ್ಕೆ ಬರದೇ ಇದ್ದಾಗ, ಅಂಥ ಗ್ರಾಮಗಳಿಗೆ ತಾಲ್ಲೂಕು ಮಟ್ಟದ ಅಧಿಕಾರಿಗಳು, ನರೇಗಾ ಸಿಬ್ಬಂದಿ ಭೇಟಿ ನೀಡಿ ಸಮಸ್ಯೆ ಬಗೆಹರಿಸಿ ಕೂಲಿಕಾರರ ಮನವೊಲಿಸಿ ಕೆಲಸ ಆರಂಭಿಸಿದರು. ಹೀಗಾಗಿ 2 ತಿಂಗಳಲ್ಲಿ 1,01,719 ಲಕ್ಷ ಮಾನವ ದಿನಗಳ ಸೃಜನೆಯಾಗಿವೆ ಎಂದು ತಾ ಪಂ. ಸಹಾಯಕ ನಿರ್ದೇಶಕ ಸಂತೋಷ ಪಾಟೀಲ ಹೇಳಿದರು.

# ಪಾಕಿಸ್ತಾನದ ಪರ ನೀಡಿದ್ದ 'ಸಂತಾಪ' ಹಿಂದಕ್ಕೆ ಪಡೆದ ಕೊಲಂಬಿಯಾ

## ಅಮೆರಿಕಾ, ಪನಾಮ, ಕೊಲಂಬಿಯಾ ಪ್ರವಾಸದಲ್ಲಿರುವ ಶಶಿ ತರೂರ್ ನೇತೃತ್ವದ ನಿಯೋಗ

**ಬಗೋಟ:** ಆಪರೇಷನ್ ಸಿಂಧೂರ್ ವೇಳೆ ಪಾಕಿಸ್ತಾನದಲ್ಲಾದ ಸಾವುನೋವುಗಳಿಗೆ ಕೊಲಂಬಿಯಾ ಸಂತಾಪವನ್ನು ಸೂಚಿಸಿತ್ತು. ಆ ದೇಶದ ನಿರ್ಧಾರಕ್ಕೆ ಭಾರತ ತೀವ್ರ ಬೇಸರ ವ್ಯಕ್ತ ಪಡಿಸಿತ್ತು. ಕೊನೆಗೆ, ಭಾರತದ ನಿಯೋಗ ವಸ್ತುಸ್ಥಿತಿಯನ್ನು ವಿವರಿಸಿದ ನಂತರ ಆ ದೇಶಕ್ಕೆ ಸತ್ಯದ ಅರಿವಾಗಿದೆ. ಸಂಸದ ಶಶಿ ತರೂರ್ ನೇತೃತ್ವದ ನಿಯೋಗ, ಕೊಲಂಬಿಯಾ ದೇಶದ ವಿದೇಶಾಂಗ ವ್ಯವಹಾರಗಳ ಖಾತೆಯ ಡಿಸಿಎಂ ರೋಸಾ ಯೊಲಂದಾ ವಿಲ್ಲಾವಿಸೆನ್ಸಿಯೋ ಅವರನ್ನು ಭೇಟಿಯಾಗಿ ದಾಖಲೆ ಸಮೇತ ವಿವರಣೆಯನ್ನು ನೀಡಿದೆ.

**ಕುತಂತ್ರದ ಸತ್ಯ ಅರಿವಾಯಿತು**

ಇದಾದ ನಂತರ, ಪಾಕಿಸ್ತಾನದ ಪರವಾಗಿ ಸಂತಾಪ ಸೂಚಿಸಿದ್ದ ಕೊಲಂಬಿಯಾ, ಅಧಿಕೃತವಾಗಿ ತಮ್ಮ ಹೇಳಿಕೆಯನ್ನು ಹಿಂದಕ್ಕೆ ಪಡೆದಿದೆ. ಭಾರತದ ನಿಯೋಗ ಕಾಶ್ಮೀರದಲ್ಲಿ ನಡೆದ ಘಟನೆಯ ವಿವರವಾದ ಮಾಹಿತಿಯನ್ನು ನೀಡಿದೆ. ಸಂಘರ್ಷಕ್ಕೆ ಕಾರಣವಾದ ಅಂಶವನ್ನು ವಿವರಿಸಿದೆ ಮತ್ತು ಭಾರತದ ಹೇಳಿಕೆಯ ಮೇಲೆ ನಮಗೆ ನಂಬಿಕೆಯಿದೆ. ಈ ಬಗ್ಗೆ ನಾವು ಮಾತುಕತೆ ಮುಂದುವರಿಸುತ್ತೇವೆ. ನಾವು ನಮ್ಮ ಹೇಳಿಕೆಯನ್ನು ಹಿಂದಕ್ಕೆ ಪಡೆಯುತ್ತಿದ್ದೇವೆ ಎಂದು ಸಚಿವ ವಿಲ್ಲವಿ ಸೆನ್ನಿಯೋ ಹೇಳಿದ್ದಾರೆ. ಅಮೆರಿಕಾ, ಪನಾಮ, ಕೊಲಂಬಿಯಾ ಪ್ರವಾಸ ದಲ್ಲಿರುವ ಶಶಿ ತರೂರ್ ನೇತೃತ್ವದ ನಿಯೋಗ, ಕೊಲಂಬಿಯಾದಲ್ಲಿ ಇದ್ದಾಗಲೇ, ಪಾಕಿಸ್ತಾನದ ಪರವಾಗಿ ಸಂತಾಪ ಸೂಚಿಸುವ ನಿರ್ಣಯವನ್ನು ತೆಗೆದು ಕೊಂಡಿತ್ತು. ಇದಕ್ಕೆ ತರೂರ್ ತೀವ್ರ ಬೇಸರವನ್ನು ವ್ಯಕ್ತಪಡಿಸಿದ್ದರು. ಈಗ, ಭಾರತದ ವಾದಕ್ಕೆ ಕೊಲಂಬಿಯಾ ತಲೆದೂಗಿಸಿದೆ. ಕಾಶ್ಮೀರದ ಪಹಲ್ಗಾಮ್‌ನಲ್ಲಿ ಅಮಾಯಕ ಪ್ರವಾಸಿಗರ ಮೇಲೆ ಪಾಕ್ ಪ್ರಾಯೋಜಿತ ಉಗ್ರರ ತಂಡ ದಾಳಿಯನ್ನು ನಡೆಸಿತ್ತು, ಅದರಲ್ಲಿ 26 ಜನ ಮೃತಪಟ್ಟಿದ್ದರು. ಆದರೆ ಇದಕ್ಕೂ ನಮಗೂ ಏನೂ ಸಂಬಂಧವಿಲ್ಲ ಎಂದು ಪಾಕಿಸ್ತಾನವನ್ನು ದಿನವನ್ನು ದೂಡುತ್ತಿತ್ತು. ಇದಾದ ಎರಡು ವಾರಗಳ ನಂತರ



ಭಾರತ, ಪಾಕಿಸ್ತಾನ ಮುಟ್ಟಿ ನೋಡುವಂತಹ ದಾಳಿಯನ್ನು ನಡೆಸಿತ್ತು. ಶಶಿ ತರೂರ್, ರವಿಶಂಕರ್ ಪ್ರಸಾದ್, ಸಂಜಯ್ ಕುಮಾರ್ ಝೂ, ಬೈಜಯಂತ್ ಪಾಂಡಾ, ಕನ್ನಿಮೋಳಿ ಕರುಣಾನಿಧಿ, ಸುಪ್ರಿಯಾ ಸುಳೆ ಮತ್ತು ಶ್ರೀಕಾಂತ್ ಏಕನಾಥ್ ಶಿಂಧೆ ನೇತೃತ್ವದ ಏಳು ನಿಯೋಗ ವಿಶ್ವದ ಹಲವು ರಾಷ್ಟ್ರಗಳಿಗೆ ತೆರಳಿ, ಉಗ್ರರ ವಿಚಾರದಲ್ಲಿ ಪಾಕಿಸ್ತಾನದ ನರಿಬುದ್ದಿಯನ್ನು ಜಗತ್ತಿಗೆ ಸಾರುತ್ತಿದ್ದಾರೆ. ವಿವಿಧ ಪಾರ್ಟಿಯ 59


> ಪಹಲ್ಗಾಮ್ ದಾಳಿಯ ಬಗ್ಗೆ ಚಕಾರವೆತ್ತದ ಕೊಲಂಬಿಯಾ, ಪಾಕಿಸ್ತಾನದ ಮೇಲೆ ಭಾರತ ನಡೆಸಿದ್ದ ದಾಳಿಗೆ ಸಂತಾಪ ಸೂಚಿಸಿತ್ತು. ಇದಕ್ಕೆ, ಭಾರತದ ನಿಯೋಗ ತೀವ್ರ ಅಸಮಾಧಾನವನ್ನು ಹೊರಹಾಕಿತ್ತು. ಈಗ, ಭಾರತದ ದಾಖಲೆಗೆ ಮಣಿದ ಕೊಲಂಬಿಯಾ ತನ್ನ ಹೇಳಿಕೆಯನ್ನು ಹಿಂದಕ್ಕೆ ಪಡೆದುಕೊಂಡಿದೆ
> –ಶಶಿ ತರೂರ್, ನಿಯೋಗದ ಮುಖ್ಯಸ್ಥ

ನಾಯಕರು 32 ದೇಶಗಳಿಗೆ ಪ್ರಯಾಣಿಸುತ್ತಿದ್ದಾರೆ. ಆಯಾಯ ದೇಶಗಳ ಪ್ರಮುಖರನ್ನು ಭೇಟಿಯಾಗಿ ದಾಖಲೆ ಸಮೇತ ವಿವರಣೆಯನ್ನು ನೀಡುತ್ತಿದ್ದಾರೆ. ಜೊತೆಗೆ, ಅಲ್ಲಿನ ಅನಿವಾಸಿ ಭಾರತೀಯರ ಜೊತೆಗೂ ಮಾತುಕತೆಯನ್ನು ನಡೆಸುತ್ತಿದ್ದಾರೆ. ರಾಜತಾಂತ್ರಿಕವಾಗಿ ಭಾರತದ ಈ ನಡೆ ಪಾಕಿಸ್ತಾನಕ್ಕೆ ಭಾರೀ ಹಿನ್ನಡೆಯನ್ನು ತರುತ್ತಿದೆ ಎಂದು ವಿಶ್ಲೇಷಿಸಲಾಗುತ್ತಿದೆ.

> ಕರಾರುವಕ್ಕಾಗಿ ಭಾರತದ ಸೇನೆ, ಪಾಕಿಸ್ತಾನದ ಉಗ್ರರ ನೆಲೆಯ ಮೇಲೆ ನಡೆಸಿದ ದಾಳಿಯಲ್ಲಿ ನೂರಾರು ಭಯೋತ್ಪಾದಕರು ಸಾವನ್ನಪ್ಪಿದ್ದರು. ಇದಕ್ಕೆ ಪಾಕಿಸ್ತಾನ ಪ್ರತಿರೋಧ ತೋರಿದ ಹಿನ್ನಲೆಯಲ್ಲಿ ಭಾರತ, ಪಾಕಿಸ್ತಾನದ ಸುಮಾರು 11 ವಾಯುನೆಲೆಗಳನ್ನು ಧ್ವಂಸಗೊಳಿಸಿತ್ತು. ಭಾರತದ ಬ್ರಹ್ಮೋಸ್ ನಮಗೆ ಸಾಕಷ್ಟು ನಷ್ಟವನ್ನು ತಂದೊಡ್ಡಿದೆ
> –ಶೆಹಬಾಜ್ ಷರೀಫ್ ಪಾಕಿಸ್ತಾನದ ಪ್ರಧಾನಿ

# ಭಾರತ- ಪಾಕ್ ನಡುವಣ ಪರಮಾಣು ವಿಪತ್ತು ತಪ್ಪಿಸಿದೆ

**ವಾಷಿಂಗ್ಟನ್:** ಭಾರತ- ಪಾಕಿಸ್ತಾನದ ನಡುವೆ ಕದನ ವಿರಾಮದ ಮೂಲಕ ಉಭಯ ದೇಶಗಳ ನಡುವೆ ಮುಂದಾಗ ಬಹುದಾದ ಪರಮಾಣು ವಿಪತ್ತನ್ನು ಅಮೆರಿಕಾ ತಪ್ಪಿಸಿದೆ ಎಂದು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ. ಭಾರತ- ಪಾಕಿಸ್ತಾನದ ನಾಯಕರು ತಮ್ಮ ಮಾತಿಗೆ ಕಟ್ಟುಬಿದ್ದು ಕದನ ವಿರಾಮ ಒಪ್ಪಿಕೊಂಡಿದ್ದಕ್ಕಾಗಿ ಎರಡೂ ದೇಶಗಳ ನಾಯಕರಿಗೆ ಧನ್ಯವಾದ ಹೇಳಲು ಬಯಸುವುದಾಗಿ ಅವರು ತಿಳಿಸಿದ್ದಾರೆ. ಕದನ ವಿರಾಮ ಘೋಷಣೆ ಆಗದಿದ್ದರೆ ಭಾರತ ಮತ್ತು ಪಾಕಿಸ್ತಾನ ನಡುವೆ ಪರಮಾಣು ಸಂಘರ್ಷ ನಡೆಯುವ ಎಲ್ಲಾ ಸಾಧ್ಯತೆಗಳಿದ್ದವು. ಅವುಗಳು ಮುಖಾಮುಖಿಯಾಗುವುದನ್ನು



ಅರಿತು ತಕ್ಷಣ ಕಾರ್ಯ ಪ್ರವೃತ್ತರಾಗಿದ್ದರಿಂದ ಪರಿಣಾಮ ತಪ್ಪಿಸಲಾಗಿದೆ ಎಂದು ಹೇಳಿದ್ದಾರೆ. ಉಭಯ ದೇಶಗಳು ಪರಸ್ಪರ ಗುಂಡು ಹಾರಿಸುವ, ಸಂಭಾವ್ಯವಾಗಿ ಪರಮಾಣು ಶಸ್ತ್ರಾಸ್ತ್ರಗಳನ್ನು ಬಳಸುವ ಜನರೊಂದಿಗೆ ವ್ಯಾಪಾರ ವಹಿವಾಟು ಮತ್ತು ಮಾತುಕತೆ ಮಾಡಲು ಸಾಧ್ಯವಿಲ್ಲ ಎಂದು ಖಡಕ್ ಆಗಿಯೇ ಉಭಯ ದೇಶಗಳಿಗೆ ಸೂಚಿಸಿದ್ದೆ. ಆ ಹಿನ್ನೆಲೆಯಲ್ಲಿ ಮನವಿಗೆ ಒಪ್ಪಿಕೊಂಡಿದ್ದಕ್ಕಾಗಿ ಧನ್ಯವಾದ ಹೇಳಿದ್ದಾರೆ. ಭಾರತ ಮತ್ತು ಪಾಕಿಸ್ತಾನವನ್ನು ಹೋರಾಡದಂತೆ ನಿಲ್ಲಿಸಿದ್ದೇವೆ. ಪರಮಾಣು ವಿಪತ್ತಾಗಿ ಬದಲಾಗುತ್ತಿತ್ತು. ಪ್ರದೇಶದಲ್ಲಿನ ಉದ್ವಿಗ್ನತೆಯನ್ನು ಶಮನ ಮಾಡಿದ್ದಕ್ಕಾಗಿ ಅವರ ರಾಜತಾಂತ್ರಿಕತೆ ಮತ್ತು ಎರಡೂ ರಾಷ್ಟ್ರಗಳ ನಾಯಕರ ಸಹ ಕಾರವೂ ಇದೆ ಎಂದಿದ್ದಾರೆ. ಅಮೆರಿಕಾ ಜಗತ್ತಿನಲ್ಲಿ ಶಾಂತಿ ಬಯಸುತ್ತಿದೆ. ಇತರರನ್ನು ಸಹ ಹೋರಾಡುವುದನ್ನು ತಡೆಯುತ್ತಿದ್ದೇವೆ, ಏಕೆಂದರೆ ಅಂತಿಮವಾಗಿ, ಎಲ್ಲರಿಗಿಂತ ಉತ್ತಮವಾಗಿ ಹೋರಾಡಬಹುದು. ನಮಗೆ ವಿಶ್ವದ ಶ್ರೇಷ್ಠ ಸೈನ್ಯವಿದೆ. ನಮಗೆ ವಿಶ್ವದ ಶ್ರೇಷ್ಠ ನಾಯಕರು ಇದ್ದಾರೆ ಎಂದು ತಿಳಿಸಿದ್ದಾರೆ. ಭಾರತ ಮತ್ತು ಪಾಕಿಸ್ತಾನ ನಡುವಿನ ಉದ್ವಿಗ್ನತೆಯನ್ನು ಅಮೆರಿಕ ಇತ್ಯರ್ಥಗೊಳಿಸಲು ಸಹಾಯ ಮಾಡಿದೆ. ಪಾಕಿಸ್ತಾನ ಆಕ್ರಮಿತ ಕಾಶ್ಮೀರದಲ್ಲಿನ ಭಯೋತ್ಪಾದಕ ಮೂಲಸೌಕರ್ಯ ಗುರಿಯಾಗಿಸಿಕೊಂಡು ಭಾರತ 'ಆಪರೇಷನ್ ಸಿಂಧೂರ್' ಅನ್ನು ಪ್ರಾರಂಭಿಸಿತ್ತು. ಇದರ ಪರಿಣಾಮ ಉಭಯ ದೇಶಗಳ ನಡುವೆ ಪರಿಸ್ಥಿತಿ ವಿಕೋಪಕ್ಕೆ ತಲುಪಿತ್ತು.

# ಅಮೆರಿಕ ಉಕ್ಕು ಉದ್ಯಮ ಸುಭದ್ರಗೊಳಿಸಲು ಟ್ರಂಪ್ ಮಾಸ್ಟರ್ ಪ್ಲಾನ್

## ಉಕ್ಕಿನ ಆಮದು ಸುಂಕ ಶೇ.50ಕ್ಕೆ ಹೆಚ್ಚಳ–ಎಂದಿನಿಂದ ಅನ್ವಯ?

**ವಾಷಿಂಗ್ಟನ್:** ಅಮೆರಿಕಗೆ ಆಮದು ಮಾಡಿಕೊಳ್ಳುವ ಉಕ್ಕಿನ ಮೇಲಿನ ಸುಂಕವನ್ನು ಶೇ. 25ರಿಂದ ಶೇ. 50ಕ್ಕೆ ದ್ವಿಗುಣಗೊಳಿಸಿರುವುದಾಗಿ ಅಧ್ಯಕ್ಷ ಟ್ರಂಪ್ ಘೋಷಿಸಿದ್ದಾರೆ. ಜೂನ್ 4ರಿಂದ ಈ ಹೊಸ ಸುಂಕ ನಿಯಮ ಜಾರಿಗೆ ಬರಲಿದೆ. ಈ ಕ್ರಮದಿಂದಾಗಿ ಮನೆಗಳು, ಕಾರುಗಳು, ಉಕ್ಕು ಬಳಸುವ ಇತರ ಉತ್ಪನ್ನಗಳ ಬೆಲೆ ಹೆಚ್ಚಾಗುವ ಸಾಧ್ಯತೆಯಿದೆ.



**ಶೇ. 25ರಿಂದ ಶೇ. 50ಕ್ಕೆ ಹೆಚ್ಚಳ:** ಪೆನ್ಸಿಲ್ವೇನಿಯಾದ ವೆಸ್ಟ್ ಮಿಫ್ಲಿನ್‌ನಲ್ಲಿರುವ ಅಮೆರಿಕ ಸ್ಟೀಲ್‌ನ ಮಾನ್ ವ್ಯಾಲಿ ವರ್ಕ್ಸ್–ಇರ್ವಿನ್ ಸ್ಥಾವರದಲ್ಲಿ ಈ ಮಹತ್ವದ ಘೋಷಣೆ ಮಾಡಿದರು. 2016ರ ಚುನಾವಣೆಯಲ್ಲಿ ಟ್ರಂಪ್ ಗೆದ್ದಿದ್ದ ಪೆನ್ಸಿಲ್ವೇನಿಯಾದಲ್ಲಿ ಈ ಘೋಷಣೆ ಮಾಡಿರುವುದು ರಾಜಕೀಯವಾಗಿಯೂ ಮಹತ್ವ ಪಡೆದಿದೆ. ನಾವು ಉಕ್ಕಿನ ಮೇಲಿನ ತೆರಿಗೆಯನ್ನು ಶೇ. 25ರಿಂದ ಶೇ. 50ಕ್ಕೆ ಹೆಚ್ಚಿಸು ತ್ತೇವೆ. ಇದು ಅಮೆರಿಕಾದ ಉದ್ಯಮವನ್ನು ಇನ್ನಷ್ಟು ಸುಭದ್ರ ಗೊಳಿಸುತ್ತದೆ ಎಂದು ಟ್ರಂಪ್ ಹೇಳಿದ್ದಾರೆ.

**25% ರಿಂದ 50% ಕ್ಕೆ ಹೆಚ್ಚಿಸಲು ನನಗೆ ಹೆಮ್ಮೆ**

**ಯುಎಸ್ ಸ್ಟೀಲ್ ಅಮೆರಿಕನ್ ಕಂಪನಿಯಾಗಿಯೇ ಉಳಿಯಲಿದೆ:** ನಿಪ್ಪಾನ್ ಸ್ಟೀಲ್, ಅಮೆರಿಕದ ಸ್ಟೀಲ್ ಕಂಪನಿಯ ಅಧಿಕಾರಿಗಳು ಟ್ರಂಪ್ ಅವರನ್ನು ಹಲವು ಬಾರಿ ಭೇಟಿಯಾಗಿ, ಮಾತುಕತೆ ನಡೆಸಿ ಒಪ್ಪಂದದಲ್ಲಿ ಸುಧಾರಿತ ನಿಯಮಗಳನ್ನು ಸೇರಿಸಿದ ನಂತರ ಟ್ರಂಪ್ ತಮ್ಮ ವಿರೋಧವನ್ನು ಸಡಿಲಗೊಳಿಸಿದ್ದಾರೆ. ಈ ಒಪ್ಪಂದದಲ್ಲಿ, ಅಮೆರಿಕದ ಸರ್ಕಾರಕ್ಕೆ ಕಂಪನಿಯ ಕಾರ್ಯಾಚರಣೆಯಲ್ಲಿ ಹಸ್ತಕ್ಷೇಪ ಮಾಡುವ ಹಕ್ಕನ್ನು ನೀಡಲಾಗಿದೆ. ಇದನ್ನು ಗೋಲ್ಡನ್ ಶೇರ್ ಎಂದು ಕರೆಯಲಾಗುತ್ತದೆ.

**ಉಕ್ಕು ಉದ್ಯಮ ಮತ್ತಷ್ಟು ಸದೃಢವಾಗಿ ಬೆಳೆಯಲಿದೆ**

ನಿಪ್ಪಾನ್ ಸ್ಟೀಲ್ ಕಂಪನಿ ಅಮೆರಿಕನ್ ಕಂಪನಿಯಾಗಿಯೇ ಉಳಿಯುವುದನ್ನು ಖಾತರಿಪಡಿಸುವ ಮಹತ್ವದ ಒಪ್ಪಂದವನ್ನು ಸಂಭ್ರಮಿಸಲು ನಾವು ಇಲ್ಲಿ ಸೇರಿದ್ದೇವೆ ಎಂದು ಟ್ರಂಪ್ ಮಾತನಾಡಿದರು. ಸುಂಕವನ್ನು ದುಪ್ಪಟ್ಟುಗೊಳಿಸಿರುವ ಕ್ರಮದಿಂದ ಅಮೆರಿಕದ ಉಕ್ಕು ಉದ್ಯಮ ಮತ್ತಷ್ಟು ಸದೃಢವಾಗಿ ಬೆಳೆಯಲಿದೆ ಎಂದು ಅಭಿಪ್ರಾಯಪಟ್ಟರು. ಆದರೆ ಈ ದೊಡ್ಡ ಪ್ರಮಾಣದ ಸುಂಕ ಏರಿಕೆಯಿಂದ ಉಕ್ಕು ಉತ್ಪನ್ನಗಳ ಬೆಲೆ ಹೆಚ್ಚಲಿದೆ. ಟ್ರಂಪ್ ಅವರು ತಮ್ಮ ಟ್ರುತ್ ಸೋಶಿಯಲ್ ವೇದಿಕೆಯಲ್ಲಿ ಈ ಬಗ್ಗೆ ಬರೆದುಕೊಂಡಿದ್ದಾರೆ. ಉಕ್ಕು ಮತ್ತು ಅಲ್ಯೂಮಿನಿಯಂ ಮೇಲಿನ ತೆರಿಗೆಯನ್ನು 25% ರಿಂದ 50% ಕ್ಕೆ ಹೆಚ್ಚಿಸಲು ನನಗೆ ಹೆಮ್ಮೆ ಇದೆ. ಇದು ಜೂನ್ 4 ರಿಂದ ಜಾರಿಗೆ ಬರಲಿದೆ. ನಮ್ಮ ಉಕ್ಕು ಮತ್ತು ಅಲ್ಯೂಮಿನಿಯಂ ಉದ್ಯಮಗಳು ಮತ್ತೆ ಬೆಳೆಯುತ್ತಿವೆ. ಇದು ನಮ್ಮ ಉದ್ಯೋಗಿಗಳಿಗೆ ಒಳ್ಳೆಯ ಸುದ್ದಿ ಎಂದು ಅವರು ಹೇಳಿದ್ದಾರೆ. ಟ್ರಂಪ್‌ನ ಸುಂಕ ನೀತಿಗಳು ದಿನೇ ದಿನೇ ಹೆಚ್ಚಾಗುತ್ತಿರುವ ವಿರುದ್ಧ ಅಮೆರಿಕದ ಪ್ರಜೆಗಳು ಪ್ರತಿಭಟನೆ ನಡೆಸಿದ್ದರು. ನ್ಯೂಯಾರ್ಕ್, ವಾಷಿಂಗ್ಟನ್ ಸೇರಿದಂತೆ ಹಲವು ನಗರಗಳಲ್ಲಿ ಶನಿವಾರ(ಏ.19)ರಂದು ಈ ಪ್ರತಿಭಟನೆಗಳು ನಡೆದವು. ಆಡಳಿತವು ಪ್ರಜಾಪ್ರಭುತ್ವ ವಿರೋಧಿಯಾಗಿದೆ ಎಂದು ಲಕ್ಷಾಂತರ ಜನರು ಪ್ರತಿಭಟಿಸಿದ್ದರು.

> **ಯುಎಸ್ ಸ್ಟೀಲ್ ಕಂಪನಿಗೆ ಜಪಾನ್ ಹೂಡಿಕೆ**
> ಜಪಾನ್‌ನ ನಿಪ್ಪಾನ್ ಸ್ಟೀಲ್ ಕಂಪನಿಯು ಯುನೈಟೆಡ್ ಸ್ಟೇಟ್‌ನ ಉಕ್ಕಿನ ಉದ್ಯಮದಲ್ಲಿ ಹೂಡಿಕೆ ಮಾಡುವ ಬಗ್ಗೆಯೂ ಟ್ರಂಪ್ ಮಾತನಾಡಿದರು. ಯುಎಸ್ ಸ್ಟೀಲ್ ಕಂಪನಿ ಅಮೆರಿಕದ್ದಾಗಿಯೇ ಉಳಿಯಲಿದೆ. ಜಪಾನ್ ಮೂಲದ ನಿಪ್ಪಾನ್ ಸ್ಟೀಲ್ ಇದರಲ್ಲಿ ಹೂಡಿಕೆ ಮಾಡಲಿದೆ. ಇದರ ಕೆಲ ವಿವರಗಳನ್ನು ಬಹಿರಂಗಪಡಿಸಲಾಗಿದೆ ಎಂದು ಟ್ರಂಪ್ ಸ್ಪಷ್ಟಪಡಿಸಿದರು.

# ಉತ್ತರ ಪ್ರದೇಶ: ಕಂದಕಕ್ಕೆ ಕಾರು ಉರುಳಿ ಬಿದ್ದು ಐವರ ದುರ್ಮರಣ

**ಹರ್ದೋಯ್:** ಉತ್ತರ ಪ್ರದೇಶದ ಹರ್ದೋಯ್ ಜಿಲ್ಲೆಯಲ್ಲಿ ಕಾರು ಕಂದಕಕ್ಕೆ ಬಿದ್ದು ಆರು ವರ್ಷದ ಮಗು ಸೇರಿದಂತೆ ಐದು ಜನರು ಸಾವನ್ನಪ್ಪಿದ್ದಾರೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಶಹಾಬಾದ್ ವೃತ್ತ ಅಧಿಕಾರಿ ಅನುಜ್ ಮಿಶ್ರಾ ಮಾತನಾಡಿ, ವೇಗವಾಗಿ ಬಂದ ಕಾರು ನಿಯಂತ್ರಣ ತಪ್ಪಿ, ಆಲಮ್ನಗರ ರಸ್ತೆಯಲ್ಲಿ ಕಂದಕಕ್ಕೆ ಬಿದ್ದು 11 ಜನರು ಗಂಭೀರವಾಗಿ ಗಾಯಗೊಂಡಿದ್ದಾರೆ. ಎಲ್ಲಾ ಗಾಯಾಳುಗಳನ್ನು ತಕ್ಷಣ ಸಮುದಾಯ ಆರೋಗ್ಯ ಕೇಂದ್ರಕ್ಕೆ ಕರೆತರಲಾಯಿತು, ಅಲ್ಲಿ ವೈದ್ಯರು ಒಂದು ಮಗು. ಸೇರಿದಂತೆ ಐದು ಜನರು ಸಾವನ್ನಪ್ಪಿದ್ದಾರೆ ಎಂದು ಘೋಷಿಸಿದರು. ಗಾಯಾಳುಗಳನ್ನು ಪ್ರಥಮ ಚಿಕಿತ್ಸೆ ನೀಡಿದ ನಂತರ ಜಿಲ್ಲಾ ಆಸ್ಪತ್ರೆಗೆ ಕಳುಹಿಸಲಾಗಿದೆ.

ಮೃತರನ್ನು ಜಿತೇಂದ್ರ (22), ಆಕಾಶ್ (18), ಸಿದ್ಧಾರ್ಥ್ (6), ರಾಮು (35), ಚೌಹರಿ (40) ಎಂದು ಗುರುತಿಸಲಾಗಿದೆ ಎಂದು ಅವರು ಹೇಳಿದರು. ಮೃತರು ಹರ್ದೋಯ್‌ನ ಪಾಲಿ ಪೊಲೀಸ್ ಠಾಣೆ ಪ್ರದೇಶದ ನಿವಾಸಿಗಳು. ಶನಿವಾರ ಬೆಳಗಿನ ಜಾವ 3 ಗಂಟೆ ಸುಮಾರಿಗೆ ಮದುವೆ ಸಮಾರಂಭದಿಂದ ಹಿಂತಿರುಗುತ್ತಿದ್ದಾಗ ಅಪಘಾತ ಸಂಭವಿಸಿದೆ ಎಂದು ಮಿಶ್ರಾ ಹೇಳಿದರು. ಶವಗಳನ್ನು ಮರಣೋತ್ತರ ಪರೀಕ್ಷೆಗೆ ಕಳುಹಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

# ಅಸ್ಸಾಂನಲ್ಲಿ ಮತ್ತೊಬ್ಬ ಪಾಕ್ ಪ್ರೇಮಿಯ ಬಂಧನ


**ಗುವಾಹಟಿ:** ಪಾಕಿಸ್ತಾನದ ಪರ ಒಲವು ಹೊಂದಿರುವ ಆರೋಪ ಹೊತ್ತಿರುವ ಮತ್ತೊಬ್ಬ ವ್ಯಕ್ತಿಯನ್ನು ಅಸ್ಸಾಂನಲ್ಲಿ ಬಂಧಿಸಲಾಗಿದೆ. ಕಳೆದ ತಿಂಗಳು ಪಹಲ್ಗಾಮ್ ಭಯೋತ್ಪಾದಕ ದಾಳಿಯ ನಂತರ ರಾಜ್ಯದಲ್ಲಿ ಒಟ್ಟು ಬಂಧನಗಳ ಸಂಖ್ಯೆ 79 ಕ್ಕೆ ತಲುಪಿದೆ ಎಂದು ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ತಿಳಿಸಿದ್ದಾರೆ. ಬಂಧಿತ ವ್ಯಕ್ತಿಯನ್ನು ದರ್‍ರಾಂಗ್ ಜಿಲ್ಲೆಯ ಮಂಗಲ್ದೈನ ಫರಿಜುಲ್ ಹಕ್ ಎಂದು ಗುರುತಿಸಲಾಗಿದೆ. ಪಾಕಿಸ್ತಾನ ಪರ ಸಹಾನುಭೂತಿ ಹೊಂದಿರುವವರ ಮೇಲೆ ಕ್ರಮ ಕೈಗೊಳ್ಳಲಾಗಿದೆ. ಒಟ್ಟು ಬಂಧನಗಳು 79, ಎಂದು ಮುಖ್ಯಮಂತ್ರಿ ಶರ್ಮಾ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ. ದೇಶದ್ರೋಹಿಗಳ ವಿರುದ್ಧ ರಾಜ್ಯಾದ್ಯಂತ ಕ್ರಮ ಮುಂದುವರಿಯುತ್ತದೆ ಮತ್ತು ಯಾರನ್ನೂ ಬಿಡಲಾಗುವುದಿಲ್ಲ ಎಂದು ಶರ್ಮಾ ಈ ಹಿಂದೆ ಹೇಳಿದ್ದರು. ಭಾರತ ವಿರೋಧಿ ಮತ್ತು ಪಾಕಿಸ್ತಾನ ಪರ ಚಟುವಟಿಕೆಗಳಲ್ಲಿ ತೊಡಗಿರುವ ಜನರ ವಿರುದ್ಧ ಪೊಲೀಸರು ಕ್ರಮ ಕೈಗೊಂಡಿದ್ದಾರೆ.

ಪಾಕಿಸ್ತಾನ ಪರ ಚಟುವಟಿಕೆಗಳಿಗಾಗಿ ಬಂಧಿಸಲ್ಪಟ್ಟ ಕೆಲವು ಜನರ ಮೇಲೆ ರಾಷ್ಟ್ರೀಯ ಭದ್ರತಾ ಕಾಯ್ದೆಯ ನಿಬಂಧನೆಗಳನ್ನು ವಿಧಿಸಲಾಗುವುದು, ಆದರೆ ಎಲ್ಲರ ಮೇಲೂ ಅಲ್ಲ ಎಂದು ಮುಖ್ಯಮಂತ್ರಿ ಹೇಳಿದ್ದರು. ಪಹಲ್ಗಾಮ್ ಭಯೋತ್ಪಾದಕ ದಾಳಿಯಲ್ಲಿ ಪಾಕಿಸ್ತಾನ ಮತ್ತು ಅದರ ಸಹಭಾಗಿತ್ವವನ್ನು ಸಮರ್ಥಿಸಿಕೊಂಡ ಆರೋಪದ ಮೇಲೆ ವಿರೋಧ ಪಕ್ಷದ ಎಐಯುಡಿಎಫ್ ಶಾಸಕ ಅಮೀನುಲ್ ಇಸ್ಲಾಂ ಅವರನ್ನು ದೇಶದ್ರೋಹದ ಆರೋಪದ ಮೇಲೆ ಬಂಧಿಸಲಾಯಿತು, ಆದರೆ ಈ ಪ್ರಕರಣದಲ್ಲಿ ಅವರಿಗೆ ಜಾಮೀನು ದೊರೆತ ನಂತರ, ಅವರ ಮೇಲೆ ಅಡಿಯಲ್ಲಿ ಪ್ರಕರಣ ದಾಖಲಿಸಲಾಯಿತು.

# 2,710ಕ್ಕೆ ಏರಿದ ಕೋವಿಡ್ ಸೋಂಕಿತರ ಸಂಖ್ಯೆ

**ನವದೆಹಲಿ:** ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಬಿಡುಗಡೆ ಮಾಡಿರುವ ಇತ್ತೀಚಿನ ಅಂಕಿ ಅಂಶಗಳ ಪ್ರಕಾರ, ಭಾರತದಲ್ಲಿ ಸಕ್ರಿಯ ಕೋವಿಡ್ ಪ್ರಕರಣಗಳ ಸಂಖ್ಯೆ 2,710ಕ್ಕೆ ಏರಿದ್ದು, ಹೆಚ್ಚಿನ ಸೋಂಕು ಪ್ರಕರಣಗಳು ಕೇರಳದಲ್ಲಿ ಕಂಡುಬಂದಿವೆ. ಒಂದು ತಿಂಗಳು ನಂತರ ಭಾರತದಲ್ಲಿ ಕೊರೋನಾ ವೈರಸ್ ಪ್ರಕರಣಗಳು ಹೆಚ್ಚುತ್ತಿವೆ, ಮೇ 25 ಕ್ಕೆ ಕೊನೆಗೊಂಡ ವಾರದಲ್ಲಿ ಸೋಂಕುಗಳು ಐದು ಪಟ್ಟು ಏರಿಕೆಯಾಗಿವೆ.

ಅಂಕಿಅಂಶಗಳ ಪ್ರಕಾರ, ಕೇರಳದಲ್ಲಿ 1,147 ಪ್ರಕರಣಗಳು ದಾಖಲಾಗಿವೆ, ನಂತರ ಮಹಾರಾಷ್ಟ್ರ (424), ದೆಹಲಿ (294), ಗುಜರಾತ್ (223) ಪ್ರಕರಣಗಳು ದಾಖಲಾಗಿವೆ. ಕರ್ನಾಟಕ ಮತ್ತು ತಮಿಳುನಾಡು ತಲಾ 148 ಪ್ರಕರಣಗಳನ್ನು ದಾಖಲಿಸಿದ್ದರೆ, ಪಶ್ಚಿಮ ಬಂಗಾಳದಲ್ಲಿ 116 ಪ್ರಕರಣಗಳು ದಾಖಲಾಗಿವೆ. ಮಹಾರಾಷ್ಟ್ರದಲ್ಲಿ ಶುಕ್ರವಾರ 84 ಹೊಸ ಕೋವಿಡ್ -19 ಪ್ರಕರಣಗಳು ವರದಿಯಾಗಿದ್ದು, ಜನವರಿ 2025 ರಿಂದ ರಾಜ್ಯದ ಒಟ್ಟು ಸೋಂಕುಗಳ ಸಂಖ್ಯೆ 681 ಕ್ಕೆ ತಲುಪಿದೆ ಎಂದು ರಾಜ್ಯ ಸಾರ್ವಜನಿಕ ಆರೋಗ್ಯ ಇಲಾಖೆ ತಿಳಿ ಸಿದೆ. ಜನವರಿಯಿಂದ ಮಹಾರಾಷ್ಟ್ರದಲ್ಲಿ



210 ಕೋವಿಡ್ ಪ್ರಕರಣಗಳು ದಾಖಲಾಗಿವೆ, ಮುಂಬೈನಲ್ಲಿ ಅತಿ ಹೆಚ್ಚು ಸೋಂಕು ಪ್ರಕರಣಗಳು ದಾಖಲಾಗಿವೆ. ದೆಹಲಿಯಲ್ಲಿ 100+ ಹೊಸ ಪ್ರಕರಣಗಳು ವರದಿಯಾಗಿವೆ. ಕೇರಳದಲ್ಲಿ ಒಂದು ವಾರದಲ್ಲಿ 430 ಪ್ರಕರಣಗಳು ದಾಖಲಾಗಿವೆ. ಹೆಚ್ಚಿನ ಪ್ರಕರ ಣಗಳು ಸೌಮ್ಯವಾಗಿದ್ದು, ಸಾರ್ವಜನಿಕರು ಭಯಭೀತರಾಗುವ ಅಗತ್ಯವಿಲ್ಲ ಎಂದು ಅಧಿಕಾರಿಗಳು ಪುನರುಚ್ಚರಿಸಿದ್ದಾರೆ.

ರಾಜ್ಯಾದ್ಯಂತ ಆಸ್ಪತ್ರೆಗಳಲ್ಲಿ ಸಾಕಷ್ಟು ಪರೀಕ್ಷೆ, ಚಿಕಿತ್ಸಾ ಮೂಲಸೌಕರ್ಯಗಳು ಜಾರಿಯಲ್ಲಿವೆ ಎಂದು ಆರೋಗ್ಯ ಇಲಾಖೆ ಸಾರ್ವಜನಿಕರಿಗೆ ಭರವಸೆ ನೀಡಿದೆ. ಮುಂಬೈನಲ್ಲಿ ಅತಿ ಹೆಚ್ಚು ಹೊಸ ಕೋವಿಡ್–19 ಪ್ರಕರಣಗಳು ವರದಿಯಾಗಿದ್ದು, 32 ಸೋಂಕುಗಳು ವರದಿಯಾಗಿವೆ, ನಂತರ ಪುಣೆಯಲ್ಲಿ 19, ಥಾಣೆಯಲ್ಲಿ 14 ಪ್ರಕರಣಗಳು ದಾಖಲಾಗಿವೆ.


> ಜನವರಿ 1 ರಿಂದ ಮಹಾರಾಷ್ಟ್ರದಲ್ಲಿ ಏಳು ಕೋವಿಡ್ -19 ಸಾವುಗಳು ವರದಿಯಾಗಿವೆ, ಆರು ವ್ಯಕ್ತಿಗಳು ಸಹ-ಅಸ್ವಸ್ಥತೆಗಳನ್ನು ಹೊಂದಿದ್ದರೆ ಮತ್ತು ಒಬ್ಬರಿಗೆ ಆರೋಗ್ಯ ಸ್ಥಿತಿಗಳು ಗಂಭೀರವಾಗಿದೆ. ಮುನ್ನೆಚ್ಚರಿಕೆಗಳನ್ನು ಅನುಸರಿಸಲು ಸಾರ್ವಜನಿಕರಿಗೆ ಅಧಿಕಾರಿಗಳು ತಿಳಿಸಿದ್ದಾರೆ.

ಥಾಣೆ ಜಿಲ್ಲೆ (2), ರಾಯಗಢ (2), ನವಿ ಮುಂಬೈ (1), ಕಲ್ಯಾಣ್–ಡೊಂಬಿವ್ಲಿ (1), ಪನ್ವೇಲ್ (1), ನಾಸಿಕ್ (1), ಪುಣೆ ಜಿಲ್ಲೆ (1), ಪಿಂಪ್ರಿ–ಚಿಂಚ್‌ವಾಡ್ (3), ಸತಾರಾ (2), ಕೊಲ್ಹಾಪುರ ಜಿಲ್ಲೆ (1), ಕೊಲ್ಹಾಪುರ ನಗರ (1), ಮತ್ತು ಸಾಂಗ್ಲಿ (3) ಸೇರಿದಂತೆ ಇತರ ಜಿಲ್ಲೆಗಳು ಮತ್ತು ನಗರ ಗಳಲ್ಲಿ ಕಡಿಮೆ ಸಂಖ್ಯೆಯ ಪ್ರಕರಣಗಳು ವರದಿ ಯಾಗಿವೆ. ಪ್ರಸ್ತುತ, ಮಹಾರಾಷ್ಟ್ರದಲ್ಲಿ 467 ಕೋವಿಡ್–19 ಪ್ರಕರಣಗಳು ಸಕ್ರಿಯವಾಗಿದ್ದು, 2025 ರ ಆರಂಭದಿಂದ ಮುಂಬೈನಲ್ಲಿ 411 ಪ್ರಕರಣಗಳು ದಾಖಲಾಗಿವೆ.

# ಆಪರೇಷನ್ ಸಿಂಧೂರದ ಬಗ್ಗೆ ಅವಹೇಳನಕಾರಿ ಪೋಸ್ಟ್; ಶರ್ಮಿಷ್ಠ ಪನೋಲಿ ಬಂಧನ

**ಪುಣೆ:** ಆಪರೇಷನ್ ಸಿಂಧೂರ್ ಕುರಿತ ಪೋಸ್ಟ್‌ಗೆ ಪ್ರತಿಕ್ರಿಯಿಸುವಾಗ ಆಕ್ಷೇಪಾರ್ಹ ಹೇಳಿಕೆಗಳನ್ನು ನೀಡಿದ ಆರೋಪದ ಮೇಲೆ ಕೋಲ್ಕತ್ತಾ ಪೊಲೀಸರು ಶರ್ಮಿಷ್ಠ ಪನೋಲಿ ಎಂಬ ಕಾನೂನು ವಿದ್ಯಾರ್ಥಿನಿಯನ್ನು ಬಂಧಿಸಿದ್ದಾರೆ. ಪೋಸ್ಟ್ ಮಾಡಿದ ವಿಡಿಯೋವನ್ನು ಅಳಿಸಲಾಗಿದ್ದರೂ, ಪನೋಲಿ ಅದನ್ನು ಇನ್ಸಾಗ್ರಾಮ್‌ನಲ್ಲಿ ಅಪ್ಲೋಡ್ ಮಾಡಿದ್ದರು. ಅದರಲ್ಲಿ ನಿರ್ದಿಷ್ಟ ಧರ್ಮವನ್ನು ಗುರಿಯಾಗಿಸಿಕೊಂಡು ಆಗೌರವ ಮತ್ತು ಅವಹೇಳನಕಾರಿ ಹೇಳಿಕೆಗಳನ್ನು ಬರೆಯಲಾಗಿತ್ತು. ಈ ಬಗ್ಗೆ ಕೋಲ್ಕತ್ತಾದ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿ ಪೊಲೀಸರು ಪನೋಲಿ ವಿರುದ್ಧ ಎಫ್‌ಐಆರ್ ದಾಖಲಿಸಿದ್ದರು. ಈ ಪ್ರಕರಣವು ಶರ್ಮಿಷ್ಟ ಪನೋಲಿ ಎಂಬ ಮಹಿಳೆಯ ಇನ್ಸಾಗ್ರಾಮ್ ವಿಡಿಯೋಗೆ ಸಂಬಂಧಿಸಿದೆ, ಅದು ನಿರ್ದಿಷ್ಟ ಸಮುದಾಯದ ಸದಸ್ಯರ ಧಾರ್ಮಿಕ ಭಾವನೆಗಳಿಗೆ ನೋವುಂಟು ಮಾಡುತ್ತದೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಪನೋಲಿ ಮತ್ತು ಆಕೆಯ ಕುಟುಂಬ ಪರಾರಿಯಾಗಿರುವುದರಿಂದ ಆಕೆಗೆ ಕಾನೂನು ನೋಟಿಸ್ ಜಾರಿ ಮಾಡಲು ಪದೇ ಪದೇ ಮಾಡಿದ ಪ್ರಯತ್ನಗಳು ವಿಫಲ ವಾಗಿದ್ದವು. ಇದರ ನಂತರ, ನ್ಯಾಯಾಲಯವು ಬಂಧನ ವಾರಂಟ್ ಹೊರಡಿಸಿತು.



ಅದರ ಆಧಾರದ ಮೇಲೆ ಗುರುಗ್ರಾಮದಿಂದ ಆಕೆಯನ್ನು ಬಂಧಿಸಲಾಗಿದೆ. ಆದಾಗ್ಯೂ, ವಿವಾದದ ನಂತರ, ಪನೋಲಿ ಸಾಮಾಜಿಕ ಮಾಧ್ಯಮದಲ್ಲಿ ಬೇಷರತ್ತಾಗಿ ಕ್ಷಮೆಯಾಚಿಸಿ ವಿಡಿಯೋಗಳು ಮತ್ತು ಪೋಸ್ಟ್‌ಗಳನ್ನು ಅಳಿಸಿದ್ದರು. ತಮ್ಮ ಎಕ್ಸ್ ನಾನು ಇಲ್ಲಿ ನನ್ನ ಬೇಷರತ್ತಾದ ಕ್ಷಮೆಯಾಚಿಸುತ್ತೇನೆ. ಏನೇ ಬರೆದಿದ್ದರೂ ಅದು ನನ್ನ ವೈಯಕ್ತಿಕ ಭಾವನೆಗಳು ಮತ್ತು ನಾನು ಉದ್ದೇಶಪೂರ್ವಕವಾಗಿ ಯಾರನ್ನೂ ನೋಯಿಸಲು ಬಯಸಲಿಲ್ಲ, ಆದ್ದರಿಂದ ಯಾರಿಗಾದರೂ ನೋವಾಗಿದ್ದರೆ ನಾನು ಅದಕ್ಕಾಗಿ ವಿಷಾದಿಸುತ್ತೇನೆ. ನಾನು ಸಹಕಾರ ಮತ್ತು ತಿಳುವಳಿಕೆಯನ್ನು ನಿರೀಕ್ಷಿಸುತ್ತೇನೆ. ಇನ್ನು ಮುಂದೆ. ನಾನು ನನ್ನ ಸಾರ್ವಜನಿಕ ಪೋಸ್ಟ್ಲ್ಲಿ ಜಾಗರೂಕನಾಗಿರುತ್ತೇನೆ. ಮತ್ತೊಮ್ಮೆ, ದಯವಿಟ್ಟು ನನ್ನ ಕ್ಷಮೆಯನ್ನು ಸ್ವೀಕರಿಸಿ ಎಂದು ಮನವಿ ಮಾಡಿಕೊಂಡಿದ್ದರು.

# ನಟ ಅರ್ಷದ್ ಸೇರಿ 58 ಜನರನ್ನು ನಿಷೇಧಿಸಿದ ಸೆಬಿ

**ನವದೆಹಲಿ:** ಸಾಧನಾ ಬ್ರಾಡ್‌ಕಾಸ್ಟ್ ಲಿಮಿಟೆಡ್ ಒಳಗೊಂಡ ಸ್ಟಾಕ್ ಮ್ಯಾನಿಪ್ಯುಲೇಷನ್ ಯೋಜನೆಯನ್ನು ಭಾರತೀಯ ಸೆಕ್ಯುರಿಟೀಸ್ ಮತ್ತು ಎಕ್ಸ್‌ಚೇಂಜ್ ಬೋರ್ಡ್ ಭೇದಿಸಿದೆ, ಈ ಯೋಜನೆಯನ್ನು ಕಾರ್ಯಗತಗೊಳಿಸಲು ವಾಟ್ಸಾಪ್ ಸಂದೇಶಗಳನ್ನು ಬಳಸಲಾಗಿದೆ ಎಂದು ಆರೋಪಿಸಲಾಗಿದೆ. ನಟ ಅರ್ಷದ್ ವಾರ್ಸಿ ಸೇರಿದಂತೆ ಹಲವಾರು ವ್ಯಕ್ತಿಗಳ ವಿರುದ್ಧ ಮಂಡಳಿಯು ನಿರ್ಣಾಯಕ ಕ್ರಮ ಕೈಗೊಂಡಿದೆ. ಗೌರವ್ ಗುಪ್ತಾ ಈ ಯೋಜನೆಯ ಮೂಲಕ ಅತಿದೊಡ್ಡ ಫಲಾನುಭವಿಯಾಗಿ ಹೊರಹೊಮ್ಮಿದ್ದಾರೆ, 18.33 ಕೋಟಿ ರೂ. ಗಳಿಸಿದ್ದಾರೆ. ಏತನ್ಮಧ್ಯೆ, ಸಾಧನಾ ಬಯೋ ಆಯಿಲ್ಸ್ ಪ್ರೈವೇಟ್ ಲಿಮಿಟೆಡ್ ಸಹ 9.41 ಕೋಟಿ ರೂ. ಲಾಭ ಗಳಿಸಿದೆ.

ಅದರ ನಿಯಂತ್ರಕ ಪ್ರತಿಕ್ರಿಯೆಯ ಭಾಗವಾಗಿ, ಈ ಅಕ್ರಮ ಲಾಭಗಳನ್ನು ಸ್ವದೇಶಕ್ಕೆ ಹಿಂದಿರುಗಿಸುವುದನ್ನು ಸೆಬಿ ಕಡ್ಡಾಯಗೊಳಿಸಿದೆ. ಮನೀಶ್ ಮಿಶ್ರಾ ಅವರಿಗೆ ಸೆಬಿ 5 ಕೋಟಿ ರೂ. ದಂಡ ಸೇರಿದಂತೆ ಹಲವಾರು ದಂಡಗಳನ್ನು ವಿಧಿಸಿದೆ. ಇದಲ್ಲದೆ, ಗೌರವ್ ಗುಪ್ತಾ ಸೇರಿದಂತೆ ಹಲವಾರು ವ್ಯಕ್ತಿಗಳಿಗೆ ತಲಾ 2 ಕೋಟಿ ರೂ. ದಂಡ ವಿಧಿಸಲಾಗಿದೆ. ಜತಿನ್ ಮನುಭಾಯಿ ಶಾ ಅವರಿಗೆ 1 ಕೋಟಿ ರೂ. ದಂಡ ವಿಧಿಸಲಾಗಿದೆ. ಈ ಕ್ರಮಗಳು ಆರ್ಥಿಕ ದುಷ್ಕೃತ್ಯಗಳ ವಿರುದ್ಧ ಸೆಬಿಯ ವ್ಯಾಪಕ ಕ್ರಮದ ಭಾಗವಾಗಿದೆ. ಈ ಯೋಜನೆಯು ಪಂಪ್ ಮತ್ತು ಡಂಪ್ ತಂತ್ರವನ್ನು ಒಳಗೊಂಡಿತ್ತು, ಇದರಲ್ಲಿ ಪ್ರವರ್ತಕರು ತಮ್ಮ ಪಾಲನ್ನು ಮಾರಾಟ ಮಾಡುವ ಮೊದಲು ಎಸ್ ಬಿಐ ಎಲ್ ನ ಷೇರು ಬೆಲೆಯನ್ನು ಕೃತಕವಾಗಿ ಹೆಚ್ಚಿಸಲು ದಾರಿತಪ್ಪಿಸುವ ಯೂಟ್ಯೂಬ್ ವೀಡಿಯೊಗಳನ್ನು ಬಳಸಿದ್ದಾರೆ .ಮಾರ್ಚ್ 8, 2022 ರಿಂದ ನವೆಂಬರ್ 30, 2022 ರವರೆಗೆ ನಡೆದ ಸೆಬಿಯ ತನಿಖೆಯಲ್ಲಿ ಈ ವಂಚನೆಯ ಚಟುವಟಿಕೆಯನ್ನು ವಿವರಿಸಲಾಗಿದೆ.

# ರಾಷ್ಟ್ರೀಯ ಕಾಗುಣಿತದಲ್ಲಿ ಫೈಜಾನ್ ಚಾಂಪಿಯನ್

**ನವದೆಹಲಿ:** ಭಾರತೀಯ ಮೂಲದ ವಿದ್ಯಾರ್ಥಿ ಫೈಜಾನ್ ಝೂಕಿ 2025 ರ ಸ್ಕ್ರಿಪ್ಸ್ ರಾಷ್ಟ್ರೀಯ ಕಾಗುಣಿತ ಬೀಯಲ್ಲಿ ಚಾಂಪಿಯನ್ ಪ್ರಶಸ್ತಿಯನ್ನು ಗೆದ್ದಿದ್ದಾರೆ. 13 ವರ್ಷದ ಝೂಕಿ ಎಕ್ಲೇರ್ಸಿಸ್ಮೆಂಟ್ ಪದ ವನ್ನು ಸರಿಯಾಗಿ ಉಚ್ಚರಿಸುವ ಮೂಲಕ ಅಂತಿಮ ಸುತ್ತನ್ನು ಗೆದ್ದನು. ಅವರೊಂದಿಗೆ ಸರ್ವಜ್ಞ ಕದಮ್ ರನ್ನರ್ ಅಪ್ ಸ್ಥಾನವನ್ನು ಪಡೆದಿದ್ದಾರೆ.




ಇದರೊಂದಿಗೆ, ಝೂಕಿ 50,000 ನಗದು ಬಹುಮಾನ ಮತ್ತು ಗೌರವ ಪದಕವನ್ನು ಸಹ ಪಡೆದರು. ದೇಶಾದ್ಯಂತದ 240 ಕ್ಕೂ ಹೆಚ್ಚು ಉನ್ನತ ಸ್ಪೆಲರ್‌ಗಳನ್ನು ಸೋಲಿಸುವ ಮೂಲಕ ಕಿ ಪ್ರಶಸ್ತಿಯನ್ನು ಗೆದ್ದಿದ್ದಾರೆ. ಫೈಜಾನ್ ಝೂಕಿ ಸಿಎಂ ರೈಸ್ ಮಿಡಲ್ ಶಾಲೆಯಲ್ಲಿ 7 ನೇ ತರಗತಿ ವಿದ್ಯಾರ್ಥಿ. ಅವರು ಟೆಕ್ಸಾಸ್‌ನ ಅಲೆನ್‌ನ ನಿವಾಸಿ. ಅವರು ಅಂತಿಮ ಪಂದ್ಯದಲ್ಲಿ ಎಕ್ಲೇರ್ಸಿಸ್ಮೆಂಟ್ ಪದವನ್ನು ಸರಿಯಾಗಿ ಉಚ್ಚರಿಸಿದ್ದಾರೆ.

ಇದು ಅವರು ರಾಷ್ಟ್ರೀಯ ಬಿನಲ್ಲಿ ನಾಲ್ಕನೇ ಬಾರಿಗೆ ಭಾಗವಹಿಸುತ್ತಿದ್ದಾರೆ. ಚಾಂಪಿಯನ್ ಶಿಪ್ ಟ್ರೋಫಿಯನ್ನು ಪ್ರದಾನ ಮಾಡಿ ಮಾತನಾಡಿದ ಕಂಪನಿಯ ಸಿಇಒ ಸಿಮನ್ಸ್, ಫೈಜಾನ್ ಚಾಂಪಿಯನ್ ವ್ಯಾಖ್ಯಾನಿಸುವ ದೃಢಸಂಕಲ್ಪಕ್ಕೆ ಉದಾಹರಣೆಯಾಗಿದ್ದಾರೆ ಎಂದು ಹೇಳಿದ್ದಾರೆ. ಮೊದಲ ಕಾಗುಣಿತ ಬೀ ಸ್ಪರ್ಧೆ ಯನ್ನು 1925 ರಲ್ಲಿ ವಾಷಿಂಗ್ಟನ್ ಡಿಸಿಯಲ್ಲಿ ನಡೆಸಲಾಗಿದೆ, ಇದರಲ್ಲಿ ಕೇವಲ ಒಂಬತ್ತು ಮಕ್ಕಳು ಮಾತ್ರ ಭಾಗವಹಿಸಿದ್ದರು. ಈ ವರ್ಷ 200 ಕ್ಕೂ ಹೆಚ್ಚು ವಿದ್ಯಾರ್ಥಿಗಳು ಸ್ಪರ್ಧೆಯಲ್ಲಿ ಭಾಗವಹಿಸಿದ್ದರು. ಕ್ಯಾಲಿಫೋರ್ನಿಯಾದ ಕದಮ್ ಎರಡನೇ ಸ್ಥಾನ ಪಡೆದರು ಮತ್ತು 25,000 ಸ್ವೀಕರಿಸುತ್ತಾರೆ. ಜಾರ್ಜಿಯಾದ ಡನ್ವುಡಿಯ ಧರವಾನೆ ಅವರಿಗೆ 15,000 ದೊರೆಯಲಿದೆ.

# ಮಣಿಪುರದಲ್ಲಿ ನಿಷೇಧಿತ ಸಂಘಟನೆಯ 9 ಉಗ್ರರ ಬಂಧನ

**ಇಂಫಾಲ:** ಮಣಿಪುರದಲ್ಲಿ ವಿವಿಧ ನಿಷೇಧಿತ ಸಂಘಟನೆಗಳಿಗೆ ಸೇರಿದ ಒಂಬತ್ತು ಉಗ್ರರನ್ನು ಭದ್ರತಾ ಪಡೆಗಳು ಬಂಧಿಸಿವೆ ಎಂದು ಪೊಲೀಸರು ತಿಳಿಸಿದ್ದಾರೆ. ಸುಲಿಗೆ ಚಟುವಟಿಕೆಗಳಲ್ಲಿ ಭಾಗಿಯಾಗಿದ್ದಾರೆ ಎಂಬ ಆರೋಪದ ಮೇಲೆ ನಿಷೇಧಿತ ಕಾಂಗ್ರೆಸ್ ಯಾವೋಲ್ ಕನ್ನಾ ಲುಪ್‌ನ ಮೂವರು ಸಕ್ರಿಯ ಕಾರ್ಯಕರ್ತರನ್ನು ಬಿಷ್ಣುಪುರ ಜಿಲ್ಲೆಯ ಲೀಮಾ ಪೋಕ್ಷಂನಿಂದ ಬಂಧಿಸಲಾಗಿದೆ ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಅವರ ಬಳಿ ಎರಡು ಬಂದೂಕುಗಳು, ಮದ್ದು ಗುಂಡುಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದರು.

ತೆಂಗೋಪಾಲ್ ಜಿಲ್ಲೆಯ ಗ್ಯಾಂಗ್ಪಿಜಾಂಗ್ ಗ್ರಾಮದಿಂದ ನಿಷೇಧಿತ ಪಿಎಲ್‌ಎಯ ಮೂವರು, ನಿಷೇಧಿತ ಕೆಸಿಪಿಯ ಇಬ್ಬರು ಸದಸ್ಯರನ್ನು ಭದ್ರತಾ ಪಡೆಗಳು ಬಂಧಿಸಿವೆ ಎಂದು ಅಧಿಕಾರಿ ಹೇಳಿದರು. ಇಂಫಾಲ ಪಶ್ಚಿಮ ಜಿಲ್ಲೆಯ ಯುಮ್ನಾಮ್ ಹುಯಿ




ಡೋಮ್ ಪ್ರದೇಶದಿಂದ ನಿಷೇಧಿತ ಕೆಸಿಪಿಯ ಒಬ್ಬ ಸಕ್ರಿಯ ಕಾರ್ಯಕರ್ತರನ್ನು ಬಂಧಿಸಲಾಗಿದೆ. ಕಣಿವೆ ಪ್ರದೇಶಗಳಲ್ಲಿ ಸುಲಿಗೆ ಚಟು ವಟಿಕೆಗಳಲ್ಲಿ ಭಾಗಿಯಾಗಿದ್ದಾರೆ ಎಂಬ ಆರೋಪ ಅವರ ಮೇಲಿತ್ತು ಎಂದು ಪೊಲೀಸರು ತಿಳಿಸಿದ್ದಾರೆ.

ರಾಜ್ಯದಲ್ಲಿ ಸುಲಿಗೆ ಚಟುವಟಿಕೆಗಳಲ್ಲಿ ತೊಡಗಿರುವವರನ್ನು ಬಂಧಿಸಲು ಗುಪ್ತಚರ ಆಧಾರಿತ ಕೂಂಬಿಂಗ್ ಮತ್ತು ಶೋಧ ಕಾರ್ಯಾಚರಣೆಗಳನ್ನು ವ್ಯಾಪಕವಾಗಿ ನಡೆಸಲಾಗುತ್ತಿದೆ ಎಂದು ಅಧಿಕಾರಿ ಹೇಳಿದರು. ಚುರಚಂಪುರ ಜಿಲ್ಲೆಯ ದಂಪಿ ಬೆಟ್ಟದ ಅರಣ್ಯ ಪ್ರದೇಶದಿಂದ ಶೋಧ ಕಾರ್ಯಾಚರಣೆಯ ಸಮಯದಲ್ಲಿ, ಮೂರು ಬಂದೂಕುಗಳು, ಒಂದುಗಾರೆ, ಒಂದು ರೇಡಿಯೋ ಸೆಟ್, ಎರಡು ಚಾರ್ಜರ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಅವರು ಹೇಳಿದರು.

ಎರಡು ವರ್ಷಗಳ ಹಿಂದೆ ಜನಾಂಗೀಯ ಹಿಂಸಾಚಾರ ಭುಗಿಲೆದ್ದಾಗಿನಿಂದ ಭದ್ರತಾ ಪಡೆಗಳು ಮಣಿಪುರದಲ್ಲಿ ಶೋಧ ಕಾರ್ಯಾಚರಣೆಗಳನ್ನು ನಡೆಸುತ್ತಿವೆ.ಮೇ 2023 ರಿಂದ ಮೈತೈಸ್, ಕುಕಿ–ಜೋ ಗುಂಪುಗಳ ನಡುವಿನ ಜನಾಂಗೀಯ ಹಿಂಸಾಚಾರದಲ್ಲಿ 260ಕ್ಕೂ ಹೆಚ್ಚು ಜನರು ಸಾವನ್ನಪ್ಪಿದ್ದಾರೆ ಮತ್ತು ಸಾವಿರಾರು ಜನರು ನಿರಾಶ್ರಿತರಾಗಿದ್ದಾರೆ. ಸಿಎಂ ಎನ್ ಬಿರೇನ್ ಸಿಂಗ್ ರಾಜೀನಾಮೆ ನೀಡಿದ ನಂತರ ಕೇಂದ್ರವು ಫೆಬ್ರವರಿ 13 ರಂದು ಮಣಿ ಪುರದಲ್ಲಿ ರಾಷ್ಟ್ರಪತಿ ಆಳ್ವಿಕೆಯನ್ನು ಹೇರಿತ್ತು. 2027 ರವರೆಗೆ ಅಧಿಕಾರಾವಧಿಯನ್ನು ಹೊಂದಿರುವ ರಾಜ್ಯ ವಿಧಾನ ಸಭೆಯನ್ನು ಅಮಾನತುಗೊಳಿಸಲಾಗಿದೆ.

# ನೈಜೀರಿಯಾದಲ್ಲಿ ಭೀಕರ ಪ್ರವಾಹ: 117 ಮಂದಿ ಸಾವು



**ನೈಜೀರಿಯಾ:** ಇಲ್ಲಿನ ನಿಗರ್ ಪ್ರಾಂತ್ಯದಲ್ಲಿ ಸಂಭವಿಸಿದ ಭಾರಿ ಪ್ರವಾಹಕ್ಕೆ ಮಾರುಕಟ್ಟೆ ಪಟ್ಟಣ ಮೊಕ್ವಾ ಮುಳುಗಡೆಯಾಗಿ 117 ಮಂದಿ ಮೃತಪಟ್ಟಿದ್ದಾರೆ. ಮೊಕ್ವಾ ಪಟ್ಟಣವು ದೇಶದ ದಕ್ಷಿಣ ಹಾಗೂ ಉತ್ತರ ಭಾಗದ ನಡುವಿನ ವ್ಯಾಪಾರದ ಕೊಂಡಿಯಾಗಿದೆ. ಈ ಹಿಂದೆ 20 ಮಂದಿ ಮೃತಪಟ್ಟಿದ್ದಾರೆ ಎಂದು ಭಾವಿಸಲಾಗಿತ್ತು.

ರಕ್ಷಣಾ ಕಾರ್ಯಾಚರಣೆ ಮುಂದುವರಿದಿದೆ. ಇದುವರೆಗೂ 117 ಮಂದಿಯ ಮೃತದೇಹಗಳು ಸಿಕ್ಕಿವೆ. ಇನ್ನಷ್ಟು ಹೆಚ್ಚು ಮಂದಿ ಅಪಾಯಕ್ಕೆ ಸಿಲುಕಿರುವ ಸಾಧ್ಯತೆಯಿದೆ ಎಂದು ರಕ್ಷಣಾ ಕಾರ್ಯಾಚರಣಾ ವಿಭಾಗದ ಮುಖ್ಯಸ್ಥ ಹುಸೇನಿ ಇಶಾ ತಿಳಿಸಿದ್ದಾರೆ. ಸಾವಿನ ಸಂಖ್ಯೆ ಇನ್ನಷ್ಟು ಹೆಚ್ಚಾಗುವ ನಿರೀಕ್ಷೆಯಿದೆ. ಕಾರ್ಯಾಚರಣೆಯನ್ನು ಬಿರುಸುಗೊಳಿಸಲಾಗಿದೆ ಎಂದು ತಿಳಿಸಿದರು.

## ಬಿಹಾರ ಸಿಎಂ ನಿತೀಶ್ ಕುಮಾರ್ ಆರೋಗ್ಯದಲ್ಲಿ ಸಮಸ್ಯೆಯೇ : ಮೋದಿ ಇದ್ದ ಕಾರ್ಯಕ್ರಮದಲ್ಲಿ ಎಡವಟ್ಟುಗಳು ಎಂದ ಆರ್‌ಜೆಡಿ

# ಒಂದು ಪಕ್ಷದಿಂದ ಇನ್ನೊಂದು ಪಕ್ಷಕ್ಕೆ ಹಾರುವ ರಾಜಕೀಯ ಹವ್ಯಾಸ

**ಪಾಟ್ನಾ:** ಬಿಹಾರದ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರ ಆರೋಗ್ಯದಲ್ಲಿ ಏನೂ ಸಮಸ್ಯೆ ಇದ್ದಂಗಿದೆ. ಹೀಗಾಗಿ, ಸಾಲು ಸಾಲು ಎಡವಟ್ಟುಗಳನ್ನು ಮಾಡಿಕೊಳ್ಳುತ್ತಿದ್ದಾರೆ ಎಂದು ರಾಷ್ಟ್ರೀಯ ಜನತಾದಳದ ಮುಖ್ಯಸ್ಥ ತೇಜಸ್ವಿ ಯಾದವ್ ಹೇಳಿದ್ದಾರೆ. ಚುನಾವಣೆಯ ಹೊಸ್ತಿಲಲ್ಲಿರುವ ಬಿಹಾರದ ಹಲವು ಕಾರ್ಯಕ್ರಮಗಳಲ್ಲಿ ಪ್ರಧಾನಿ ನರೇಂದ್ರ ಮೋದಿ ಭಾಗ ವಹಿಸುತ್ತಿದ್ದಾರೆ. ಅದರ ಭಾಗವಾಗಿ, ರೋಹ್ತಾಸ್ ಜಿಲ್ಲೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಮೋದಿ ಮತ್ತು ನಿತೀಶ್ ಕುಮಾರ್ ವೇದಿಕೆಯನ್ನು ಹಂಚಿಕೊಂಡಿದ್ದರು. ಅಲ್ಲಿ, ಮೋದಿ ಎನ್ನುವ ಬದಲು, ಮಾಜಿ ಪ್ರಧಾನಿ ದಿ.ಅಟಲ್ ಬಿಹಾರಿ ವಾಜಪೇಯಿ ಅವರ ಹೆಸರನ್ನು ಉಲ್ಲೇಖಿಸಿ ಎಡವಟ್ಟು ಮಾಡಿಕೊಂಡರು. ದೇಶದ ಜನಪ್ರಿಯ ಪ್ರಧಾನಿ ವಾಜಪೇಯಿ ಎಂದು ಮೊದಲು ಹೇಳಿ, ನಂತರ ನರೇಂದ್ರ ಮೋದಿ ಎಂದರು.

ಸಿವೋಟರ್ ನಡೆಸಿದ್ದ ಒಂದು ಸಮೀಕ್ಷೆಯಲ್ಲಿ, ನಿತೀಶ್ ಕುಮಾರ್ ಅವರು ತೇಜಸ್ವಿ ಯಾದವ್, ಪ್ರಶಾಂತ್ ಕಿಶೋರ್



**ರಾಜ್ಯದ ವಿಚಾರಕ್ಕೂ ಒಳ್ಳೆಯದಲ್ಲ**

ನಂತರದ ಸ್ಥಾನವನ್ನು ಪಡೆದಿದ್ದರು.

ವೇದಿಕೆಯಲ್ಲಿ ನಿತೀಶ್ ಕುಮಾರ್ ಎಡವಟ್ಟು ಮಾಡಿಕೊಂಡರೂ, ಕೇಂದ್ರ ಸರ್ಕಾರವು ಬಿಹಾರಕ್ಕೆ ನೀಡುತ್ತಿ ರುವ ಬೆಂಬಲವನ್ನು ಭರಪೂರ ಶ್ಲಾಘಿಸಿದ್ದಾರೆ.

ಮುಂಬರುವ ಜಾತಿಗಣತಿಯ ವೇಳೆ ಸರ್ಕಾರದ ಕೈಯಲ್ಲಿ ಇನ್ನಷ್ಟು ಬಲ ಪಡಿಸಲು ನಿತೀಶ್ ಕುಮಾರ್ ಮನವಿ ಮಾಡಿಕೊಂಡರು. ಒಂದು ಪಕ್ಷದಿಂದ ಇನ್ನೊಂದು ಪಕ್ಷಕ್ಕೆ ಹಾರುವ ರಾಜಕೀಯ ಹವ್ಯಾಸವನ್ನು ಮಾಡಿಕೊಂಡಿರುವ ನಿತೀಶ್ ಕುಮಾರ್, ಸದ್ಯ ಬಿಜೆಪಿ ಮೈತ್ರಿಕೂಟದ ಜೊತೆಗೆ ಇದ್ದಾರೆ. ಸಮೀಕ್ಷೆಯ ಪ್ರಕಾರ, ಮಹಿಳಾ ಮತದಾರರು, ಎನ್‌ಡಿಎ ಮೈತ್ರಿಕೂಟಕ್ಕೆ ಬೆಂಬಲಿಸುತ್ತಿರುವುದಕ್ಕೆ ಕಾರಣ ಬಿಜೆಪಿ ಮತ್ತು ಪ್ರಧಾನಿ ಮೋದಿ. ಹಲವು ತಪ್ಪುಗಳನ್ನು ಮುಖ್ಯಮಂತ್ರಿ ನಿತೀಶ್ ಕುಮಾರ್ ಮಾಡುತ್ತಿದ್ದಾರೆ, ಇಂತಹ ಸಮಯದಲ್ಲಿ ಅವರು ಸಿಎಂ ಆಗಿ ಮುಂದುವರಿಯುವುದು ಸರಿಯಲ್ಲ. ಇದು, ರಾಜ್ಯದ ವಿಚಾರಕ್ಕೂ ಒಳ್ಳೆಯದಲ್ಲ, ಎನ್ಡಿಎ ಮೈತ್ರಿಕೂಟ ಈ ಬಗ್ಗೆ ನಿರ್ಧಾರವನ್ನು ತೆಗೆದುಕೊಳ್ಳಲಿ ಎಂದು ತೇಜಸ್ವಿ ಯಾದವ್ ಒತ್ತಾಯಿಸಿದ್ದಾರೆ.

> ಅಷ್ಟೇ ಅಲ್ಲದೇ, ಎಲ್ಲರೂ ಎದ್ದು ನಿಂತು ಅವರಿಗೆ ಗೌರವವನ್ನು ಸಲ್ಲಿಸಿ ಎಂದರು. ಈ ಘಟನೆಯನ್ನು ಉಲ್ಲೇಖಿಸಿ, ನಿತೀಶ್ ಕುಮಾರ್ ಅವರ ಆರೋಗ್ಯದಲ್ಲಿ ಸಮಸ್ಯೆ ಇದೆಯಾ ಎಂದು ತೇಜಸ್ವಿ ಯಾದವ್ ಪ್ರಶ್ನಿಸಿದ್ದಾರೆ. ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ ಪುಣ್ಯತಿಥಿ ಕಾರ್ಯಕ್ರಮದಲ್ಲಿ ಗಂಭೀರವಾಗಿ ನಡೆಯುತ್ತಿದ್ದ ಕಾರ್ಯಕ್ರಮದಲ್ಲೂ ಚಪ್ಪಾಳೆ ತಟ್ಟಿದ್ದು ವಿವಾದಕ್ಕೆ ಕಾರಣವಾಗಿತ್ತು. ಅವರ ಆರೋಗ್ಯ ಅನುಮಾನಕ್ಕೆ ಎಡೆಮಾಡಿಕೊಡುವಂತಿದೆ
> – ತೇಜಸ್ವಿ ಯಾದವ್

> **ಚುನಾವಣೆ ನಡೆಯುವ ಸಾಧ್ಯತೆ**
> ಇದೇ ಬರುವ ನವೆಂಬರ್ ತಿಂಗಳಲ್ಲಿ ಹಾಲೀ ಬಿಹಾರ ವಿಧಾನಸಭೆಯ ಅವಧಿ ಮುಕ್ತಾಯಗೊಳ್ಳಲಿದೆ. ಹಾಗಾಗಿ, ಅಕ್ಟೋಬರ್ - ನವೆಂಬರ್ ವೇಳೆ ಅಲ್ಲಿ ಚುನಾವಣೆ ನಡೆಯುವ ಸಾಧ್ಯತೆಯಿದೆ. ಇದುವರೆಗೆ ಹೊರಬಿದ್ದಿರುವ ಎರಡು ಸಮೀಕ್ಷೆಗಳ ಪ್ರಕಾರ, ಬಿಜೆಪಿ - ಜೆಡಿಯು ನೇತೃತ್ವದ ಮೈತ್ರಿಕೂಟ ಅಧಿಕಾರ ಉಳಿಸಿಕೊಳ್ಳುವ ಸಾಧ್ಯತೆಯಿದೆ. ಆದರೆ, ಸಿಎಂ ಆಗಿ ನಿಮ್ಮ ಆಯ್ಕೆ ಯಾರು ಎನ್ನುವ ಪ್ರಶ್ನೆಗೆ ಜನರ ಮೊದಲ ಆಯ್ಕೆ ತೇಜಸ್ವಿ ಯಾದವ್ ಎನ್ನುವುದು ಸಮೀಕ್ಷೆಯಲ್ಲಿನ ಇನ್ನೊಂದು ಅಂಶವಾಗಿತ್ತು.



## ಕಣ್ಣಪ್ಪ ನಟಿಸದಿರಲು ಶಿವಣ್ಣ ನಿರ್ಧಾರ

ವಿಲನ್ ಆಗಿ ನಟಿಸಲ್ಲ

ವಿಷ್ಣು ಮಂಚು ನಟನೆಯ 'ಕಣ್ಣಪ್ಪ' ಚಿತ್ರ ಜೂನ್ 27ಕ್ಕೆ ಬಹುಭಾಷೆಗಳಲ್ಲಿ ರಿಲೀಸ್‌ಗೆ ಸಜ್ಜಾಗಿದೆ. ಈ ಚಿತ್ರದ ಪ್ರಚಾರಕ್ಕಾಗಿ ಮೋಹನ್ ಬಾಬು, ವಿಷ್ಣು ಮಂಚು ಬೆಂಗಳೂರಿಗೆ ಆಗಮಿಸಿದ್ದು, ಶಿವಣ್ಣ ಕೂಡ ಸಾಥ್ ನೀಡಿದ್ದಾರೆ. ಸುದ್ದಿಗೋಷ್ಠಿಯಲ್ಲಿ ಶಿವಣ್ಣ ಮಾತನಾಡಿ, 'ಕಣ್ಣಪ್ಪ' ಚಿತ್ರ ಮಾಡಲು ಧೈರ್ಯ ಬೇಕು. ವಿಷ್ಣು ಮಂಚು ಅವರು ಭಕ್ತಿಯಿಂದ ಚಿತ್ರ ಮಾಡಿದ್ದಾರೆ.

ಚಿತ್ರದ ಲುಕ್ ಅದ್ಭುತವಾಗಿ ಮೂಡಿ ಬಂದಿದೆ. ವಿಷ್ಣು ಈ ರೀತಿಯ ಸಿನಿಮಾ ಮಾಡಿದ್ದಕ್ಕೆ ಅವರ ಮೇಲಿನ ಗೌರವ ಹೆಚ್ಚಾಯ್ತು ಎಂದರು. ಮೋಹನ್ ಬಾಬು ಈ ತರ ಸಿನಿಮಾ ಒಪ್ಪಿ ಮಾಡಿದ್ದು ಗ್ರೇಟ್. ಜನ ಈ ತರ ಸಿನಿಮಾ ನೋಡಬೇಕು. ಕಾಳಹಸ್ತಿ ಅಂದರೆ ಏನು ತಿಳಿದುಕೊಳ್ಳಬೇಕು. ನ್ಯೂಜಿಲ್ಯಾಂಡ್‌ಗೆ ತೆರಳಿ ಶೂಟಿಂಗ್ ಮಾಡಿದ್ದಾರೆ. ನಿರ್ದೇಶಕರು ಆಸಕ್ತಿಯಿಂದ ಸಿನಿಮಾ ಮಾಡಿದ್ದಾರೆ. 100% ಈ ಚಿತ್ರ ಸೂಪರ್ ಡೂಪರ್ ಹಿಟ್ ಆಗುತ್ತದೆ ಎಂದಿದ್ದಾರೆ. ಶಿವನ ಲೀಲೆ ಯಾವಾಗಲೂ ಕಾಪಾಡುತ್ತದೆ ಎಂದು ಚಿತ್ರತಂಡಕ್ಕೆ ನಟ ಭರವಸೆ ತುಂಬಿದರು.

ನಾನು 'ಕಣ್ಣಪ್ಪ' ಚಿತ್ರದಲ್ಲಿ ಶಿವನ ಪಾತ್ರದಲ್ಲಿ ನಟಿಸ ಬೇಕಿತ್ತು. ಆದರೆ ಡೇಟ್ ಹೊಂದಾಣಿಕೆ ಆಗದ ಕಾರಣ ನಟಿಸಲು ಆಗಲಿಲ್ಲ. ಸಂಭಾವನೆ ಕೊಡಲಿಲ್ಲ ಅಂದ್ರು ನಿಮ್ಮೊಂದಿಗೆ ನಟಿಸುತ್ತೇನೆ. ನಿಮ್ಮ ಜೊತೆ ನಟಿಸೋದೇ ಒಂದು ಖುಷಿ, ಅದಕ್ಕೆ ಸಂಭಾವನೆ ಬೇಕಿಲ್ಲ. ವಿಲನ್ ಆಗಿ ನಟಿಸಲ್ಲ, ಅದರ ಬದಲು ಒಂದೊಳ್ಳೆಯ ಪಾತ್ರ ಮಾಡೋಣ ಮೋಹನ್ ಅಂಕಲ್ ಎಂದರು ಶಿವಣ್ಣ. ಅವರ ಮಾತಿಗೆ ಮೋಹನ್ ಬಾಬು ಸಮ್ಮತಿ ಸೂಚಿಸಿದರು. ಅಲ್ಲದೇ ಈ ಚಿತ್ರವನ್ನು ಮೊದಲ ದಿನವೇ ನೋಡೋದಾಗಿ ಹೇಳಿದರು. ಈ ವೇಳೆ, 'ಶಿವ ಮೆಚ್ಚಿದ ಕಣ್ಣಪ್ಪ' ಚಿತ್ರದಲ್ಲಿ ನಟಿಸಿದ್ದರ ಬಗ್ಗೆ ಶಿವಣ್ಣ ಸ್ಮರಿಸಿ, ಇದರಲ್ಲಿ ನಟಿಸಲು ನನಗೆ ಭಯವಿತ್ತು. ಏಕೆಂದರೆ ಅಪ್ಪಾಜಿ ನಟಿಸಿದ 'ಬೇಡರ ಕಣ್ಣಪ್ಪ' ಸೂಪರ್ ಹಿಟ್ ಆಗಿತ್ತು.

## ರಶ್ಮಿಕಾ, ಶ್ರೀಲೀಲಾ ಬಳಿಕ ತೆಲುಗಿನತ್ತ ಸಂಜನಾ ಆನಂದ್



ತೆಲುಗಿನಲ್ಲಿ ಅದೃಷ್ಟ ಪರೀಕ್ಷೆ

ರಶ್ಮಿಕಾ ಮಂದಣ್ಣ, ಶ್ರೀಲೀಲಾರಂತೆ 'ಸಲಗ' ಬೆಡಗಿ ಸಂಜನಾ ಆನಂದ್ ಕೂಡ ಸೌತ್ ಸಿನಿಮಾಗಳತ್ತ ಮುಖ ಮಾಡಿದ್ದಾರೆ. ಕನ್ನಡದ ಜೊತೆಗೆ ತೆಲುಗಿನಲ್ಲಿ ಬ್ಯುಸಿಯಾಗಿದ್ದಾರೆ. ಕನ್ನಡದ ಮತ್ತೋರ್ವ ನಟಿ ಸಂಜನಾ ಆನಂದ್ ತೆಲುಗಿನಲ್ಲಿ ಅದೃಷ್ಟ ಪರೀಕ್ಷೆಗಿಳಿದಿದ್ದಾರೆ. 'ನೇನು ಮೀಕು ಬಾಗ ಕಾವಲ್ಸಿನವಾಡಿನಿ' ಚಿತ್ರದಲ್ಲಿ ನಟಿಸಿದ್ದ ಸಂಜನಾ ಈಗ ಮತ್ತೊಂದು ತೆಲುಗು ಚಿತ್ರಕ್ಕೆ ಓಕೆ ಎಂದಿದ್ದಾರೆ.

ಸತ್ಯದೇವ್ ನಟನೆಯ 'ಫುಲ್ ಬಾಟಲ್' ಚಿತ್ರದಲ್ಲಿ ಪ್ರಮುಖ ಪಾತ್ರದಲ್ಲಿ ನಟಿಸುತ್ತಿದ್ದಾರೆ. ಈ ಚಿತ್ರದ ಶೂಟಿಂಗ್ ನಡೆಯುತ್ತಿದೆ. ಸದ್ಯದಲ್ಲೇ ಈ ಚಿತ್ರದ ಬಗ್ಗೆ ಹೆಚ್ಚಿನ ಅಪ್‌ಡೇಟ್ ಸಿಗಲಿದೆ. ಈ ಸಿನಿಮಾದ ಜೊತೆ ತಮಿಳಿನಿಂದಲೂ ನಟಿಗೆ ಅವಕಾಶಗಳು ಅರಸಿ ಬಂದಿದೆ. 'ಸಲಗ' ನಟಿ ಸ್ಕ್ರಿಪ್ಟ್ ಕೇಳುತ್ತಿದ್ದಾರೆ. ಈ ಬಗ್ಗೆ ಶೀಘ್ರದಲ್ಲಿ ಅಪ್‌ಡೇಟ್ ಸಿಗಲಿದೆ. ಯುವ ರಾಜ್‌ಕುಮಾರ್ ನಟನೆಯ ಎಕ್ಕ ಚಿತ್ರ, ಹಯಗ್ರೀವ, ಮುಧೋಳ ಸಿನಿಮಾಗಳು ಸಂಜನಾ ಕೈಯಲ್ಲಿವೆ.


## ಸ್ನಾನ ಮಾಡಿದ ನೀರನ್ನು ಸೋಪ್ ಮಾಡಿ ಮಾರಾಟ



ಹಾಲಿವುಡ್‌ನ ಪ್ರಸಿದ್ಧ ನಟಿ ಸಿಡ್ನಿ ಸ್ವೀನಿ (27) ಸ್ನಾನ ಮಾಡಿದ ನೀರಲ್ಲಿ ಸೋಪ್ ತಯಾರಾಗುತ್ತಿದೆ. ಈ ಮಾಹಿತಿಯನ್ನು ಸ್ವತಃ ಸಿಡ್ನಿ ಸ್ವೀನಿ ಹಂಚಿಕೊಂಡಿದ್ದಾರೆ. ಸೋಪ್ ಬಿಡುಗಡೆಯಾಗುವ ದಿನಕ್ಕಾಗಿ ಫ್ಯಾನ್ಸ್ ಕಾತರದಿಂದ ಕಾಯುತ್ತಿದ್ದಾರೆ. ನಟಿ ಬಾತ್ ವಾಟರ್ ಬ್ಲಿಸ್ ಎಂಬ ಸೋಪ್‌ನ್ನು ಪರಿಚಯಿಸುತ್ತಿದ್ದಾರೆ. ಇದು ಅವರ ಸ್ನಾನದ ನೀರಲ್ಲೇ ತಯಾರಾಗ್ತಿರೋದು ವಿಶೇಷ. ಡಾ. ಸ್ಕ್ವಾಚ್ ಎಂಬ ಸೋಪ್ ಕಂಪನಿಯೊಂದಿಗೆ ಅವರು ಈ ಹೊಸ ಪ್ರಯೋಗಕ್ಕೆ ಮುಂದಾಗಿದ್ದಾರೆ ಎಂದು ವರದಿಯಾಗಿದೆ. ಸಿಡ್ನಿ ಸ್ವೀನಿ ಹಾಲಿವುಡ್‌ನ ಅತ್ಯಂತ ಪ್ರಸಿದ್ಧ ನಟಿಯರಲ್ಲಿ ಒಬ್ಬರಾಗಿದ್ದು, ಅವರು ಮೇಡಮ್ ವೆಬ್ ಸೇರಿದಂತೆ ಹಲವು ಚಿತ್ರಗಳಲ್ಲಿ ನಟಿಸುವ ಮೂಲಕ ಖ್ಯಾತಿ ಗಳಿಸಿದ್ದಾರೆ. ಸೋಪ್ ಬೆಲೆ, ಬಿಡುಗಡೆ ದಿನಾಂಕ, ಖರೀದಿಸೋದು ಹೇಗೆ ಈ ಸೋಪ್‌ನ ಬೆಲೆ 8 ಡಾಲರ್ ಆಗಿದ್ದು, ಕೇವಲ 5,000 ಪೀಸ್ ಮಾತ್ರ ತಯಾರಾಗಲಿವೆ. ಜೂನ್ 4 ರಿಂದ ಆನ್‌ಲೈನ್‌ನಲ್ಲಿ ಸೋಪ್ ಲಭ್ಯವಿರುತ್ತದೆ. ಸೋಪ್ ಬಿಡುಗಡೆ ಬಗ್ಗೆ ಮೇ 29 ರಂದು ಇನ್ಸ್ಟಾದಲ್ಲಿ ಸಿಡ್ನಿ ಸ್ವೀನಿ ಮಾಹಿತಿ ಹಂಚಿಕೊಂಡಿದ್ದರು. ಪೋಸ್ಟ್‌ನಲ್ಲಿ ನನ್ನ ಸ್ನಾನದ ನೀರಲ್ಲೇ ಈ ಸೋಪ್ ತಯಾರಾಗುತ್ತದೆ ಎಂದು ಅವರು ಬರೆದುಕೊಂಡಿದ್ದರು.

ಸೋಪ್‌ನ ಬೆಲೆ 8 ಡಾಲರ್

## ಬಾಲಿವುಡ್ ನಟನೊಂದಿಗೆ ಶ್ರೀಲೀಲಾ ಮದುವೆ





ಕನ್ನಡದ 'ಕಿಸ್' ನಟಿ ಶ್ರೀಲೀಲಾ ಈಗೀಗ ಸಿನಿಮಾಗಿಂತ ವೈಯಕ್ತಿಕ ವಿಚಾರಕ್ಕೆ ಸುದ್ದಿಯಾಗುತ್ತಿದ್ದಾರೆ. ಕಾರ್ತಿಕ್ ಆರ್ಯನ್ ಜೊತೆ ಅವರು ಡೇಟಿಂಗ್ ಮಾಡ್ತಿದ್ದಾರೆ ಎಂಬ ಸುದ್ದಿಯ ನಡುವೆ ಇದೀಗ ಅರಿಶಿಣ ಶಾಸ್ತ್ರದ ಫೋಟೋ ಹಂಚಿಕೊಂಡಿದ್ದಾರೆ. ನಟಿಯ ಮನೆಯಲ್ಲಿ ಅರಿಶಿಣ ಶಾಸ್ತ್ರ ನಡೆದಿದೆ. ಶ್ರೀಲೀಲಾ ಕೆನ್ನೆಗೆ ಅರಿಶಿಣ, ಹಣೆಗೆ ಕುಂಕುಮ ಇಡಲಾಗಿದೆ. ಇಬ್ಬರೂ ಹಿರಿಯ ಮಹಿಳೆಯರು ನಟಿಗೆ ಅರಿಶಿಣ ಹಚ್ಚುತ್ತಿದ್ದಾರೆ. ಈ ಫೋಟೋವನ್ನು ಇನ್ಸ್ಟಾಗ್ರಾಂನಲ್ಲಿ ಶೇರ್ ಮಾಡಿ, 'ಕಮಿಂಗ್ ಸೂನ್' ಎಂದು ಬರೆದುಕೊಂಡಿದ್ದಾರೆ. ನಟಿಯು ಖುಷಿಯಿಂದ ಇರೋದು ನೋಡಿ ಕಾರ್ತಿಕ್ ಜೊತೆ ಮದುವೆ ಸೆಟ್ ಆಯ್ತಾ ಎಂದೆಲ್ಲಾ ಫ್ಯಾನ್ಸ್ ಪ್ರಶ್ನಿಸುತ್ತಿದ್ದಾರೆ. ಇದು ಸಿನಿಮಾಕ್ಕೆ ಸಂಬಂಧಿಸಿದ ಫೋಟೋನಾ ಅಥವಾ ನಿಜಕ್ಕೂ ಗುಡ್ ನ್ಯೂಸ್ ಇದ್ಯಾ ಎಂಬುದರ ಬಗ್ಗೆ ಅವರೇ ಸ್ಪಷ್ಟನೆ ನೀಡುವವರೆಗೂ ಕಾಯಬೇಕಿದೆ. ಇತ್ತೀಚೆಗೆ ಅವಾರ್ಡ್ ಫಂಕ್ಷನ್‌ವೊಂದರಲ್ಲಿ ಕಾರ್ತಿಕ್ ಆರ್ಯನ್ ತಾಯಿಗೆ ಯಾವ ಥರದ ಸೊಸೆ ಬೇಕು ಎಂದು ಕರಣ್ ಜೋಹರ್ ಕೇಳಿದರು. ಅದಕ್ಕೆ ನಟನ ತಾಯಿ, ಡಾಕ್ಟರ್ ಆಗಿರುವ ಸೊಸೆ ಬೇಕು ಎಂದಿದ್ದರು. ಎಲ್ಲಾರಿಗೂ ಗೊತ್ತಿರುವಂತೆ ಶ್ರೀಲೀಲಾ ಅವರು ಎಂಬಿಬಿಎಸ್ ಓದಿಕೊಂಡಿದ್ದಾರೆ. ಅಲ್ಲಿ ಕಾರ್ತಿಕ್ ತಾಯಿ ಡಾಕ್ಟರ್ ಸೊಸೆ ಬೇಕು ಎಂದ ಕೂಡಲೇ ಎಲ್ಲಾರ ಕಣ್ಣು ಶ್ರೀಲೀಲಾ ಮೇಲೆ ಬಿದ್ದಿತ್ತು. ಹೀಗಾಗಿ ಇದೀಗ ನಟಿಯ ಅರಿಶಿಣ ಶಾಸ್ತ್ರದ ಫೋಟೋ ನೋಡಿ ಕಾರ್ತಿಕ್ ಜೊತೆಗಿನ ಡೇಟಿಂಗ್ ಸುದ್ದಿಗೆ ಪುಷ್ಠಿ ಸಿಕ್ಕಂತಾಗಿದೆ. ಸದ್ದಿಲ್ಲದೇ ಹಸೆಮಣೆ ಏರಲು ರೆಡಿಯಾದ್ರಾ ಎಂಬ ಪ್ರಶ್ನೆ ಅಭಿಮಾನಿಗಳಲ್ಲಿ ಮೂಡಿದೆ.

ಅಂದಹಾಗೆ, ಅನುರಾಗ್ ಬಸು ನಿರ್ದೇಶನದ 'ಆಶಿಕಿ 3' ಸಿನಿಮಾದಲ್ಲಿ ಕಾರ್ತಿಕ್ ಆರ್ಯನ್‌ಗೆ ಶ್ರೀಲೀಲಾ ನಾಯಕಿಯಾಗಿದ್ದಾರೆ.

## ಮಂಜುಗೆ ವಿಲನ್ ಆದ ಭಜರಂಗಿ ಲೋಕಿ

ವಿಲನ್ ಪಾತ್ರಗಳೇ ಹೆಚ್ಚು ಜನಪ್ರಿಯತೆ

ಕನ್ನಡ ಮತ್ತು ಸೌತ್ ಸಿನಿಮಾಗಳಲ್ಲಿ 'ಭಜರಂಗಿ' ಲೋಕಿ ಬ್ಯುಸಿಯಾಗಿದ್ದಾರೆ. ಇದೀಗ 'ಪಡ್ಡೆ ಹುಲಿ' ಖ್ಯಾತಿಯ ಶ್ರೇಯಸ್ ಮಂಜು ಮುಂದೆ ವಿಲನ್ ಆಗಿ ಅಬ್ಬರಿಸಿದ್ದಾರೆ. ಸೌರವ್ ಲೋಕೇಶ್ 'ದಿಲ್‌ದಾರ್' ಲುಕ್ ರಿವೀಲ್ ಆಗಿದೆ.

ಸೌರವ್ ಲೋಕೇಶ್ ಸಿನಿ ಕೆರಿಯರ್‌ನಲ್ಲಿ ವಿಲನ್ ಪಾತ್ರಗಳೇ ಹೆಚ್ಚು ಜನಪ್ರಿಯತೆ ತಂದುಕೊಟ್ಟಿದ್ದು, ಈಗ ಶ್ರೇಯಸ್ ಮಂಜು ನಟನೆಯ ದಿಲ್‌ದಾರ್ ಸಿನಿಮಾದಲ್ಲಿ ತೆರೆ ಹಂಚಿಕೊಂಡಿದ್ದಾರೆ. ಚಿತ್ರದಲ್ಲಿ ವಿಲನ್ ಆಗಿ ನಟಿಸಿದ್ದಾರೆ. ಕಾಲೇಜ್ ಕ್ಯಾಂಪಸ್‌ನಲ್ಲಿ ನಡೆಯುವ ಕಥೆ ಇದಾಗಿದ್ದು, ಮಧು ಜಿ ಗೌಡ ನಿರ್ದೇಶನ ಮಾಡಿದ್ದಾರೆ. ಸದ್ಯ ಕ್ಯಾರೆಕ್ಟರ್ ಟೀಸರ್‌ನಲ್ಲಿ ಸಖತ್ ರಗಡ್ ಆಗಿ ಸೌರವ್ ಕಾಣಿಸಿಕೊಂಡಿದ್ದಾರೆ.

ಕನ್ನಡ ಚಿತ್ರಗಳ ಜೊತೆ ಮೆಗಾಸ್ಟಾರ್ ಚಿರಂಜೀವಿ ನಟನೆಯ 'ವಿಶ್ವಂಭರ' ಚಿತ್ರದಲ್ಲೂ ವಿಲನ್ ಆಗಿ ಅಬ್ಬರಿಸಿದ್ದಾರೆ.

ದಿಗ್ಗಜರ ಜೊತೆ ಕನ್ನಡದ ನಟ ಅಭಿನಯಿಸಿದ್ದಾರೆ. ಆಚಾರ್ಯ, ಸಲಾರ್ ಸಿನಿಮಾ ಗಳಲ್ಲಿ ಭಜರಂಗಿ ಲೋಕಿ ನಟಿಸಿ ಸೈ ಎನಿಸಿಕೊಂಡಿದ್ದಾರೆ. ತೆಲುಗು ಮಾತ್ರವಲ್ಲ, ತಮಿಳಿನಲ್ಲೂ ಅವರಿಗೆ ಅವಕಾಶಗಳು ಅರಸಿ ಬರುತ್ತಿವೆ.

## ಮುಂಬೈ ತಂಡದಿಂದ ಕಣ್ಣೆದುರೇ ಫಿಕ್ಸಿಂಗ್?

ಮ್ಯಾಚ್ ಫಿಕ್ಸಿಂಗ್ ಭೂತ ಇಂದು ನಿನ್ನೆಯದಲ್ಲ. ಹಲವು ವರ್ಷಗಳಿಂದ ಈ ರೀತಿಯ ಆರೋಪ ಕೇಳಿ ಬಂದಿದೆ.


ಈ ಮೊದಲು ಅದು ಸಾಬೀತಾಗಿದ್ದರಿಂದ ಎರಡು ತಂಡಗಳನ್ನು ಬ್ಯಾನ್ ಕೂಡ ಮಾಡಲಾಗಿತ್ತು. ಈ ಬಾರಿಯ ಐಪಿಎಲ್‌ನಲ್ಲಿ ಅದೇ ರೀತಿಯ ಆರೋಪಗಳು ಎದುರಾಗುತ್ತಿವೆ.

ಅದರಲ್ಲೂ ಮುಂಬೈ ಇಂಡಿಯನ್ಸ್ ಮ್ಯಾಚ್ ಇದ್ದಾಗ ಈ ವಿಷಯ ಹೆಚ್ಚು ಚರ್ಚೆಗೆ ಕಾರಣ ಆಗುತ್ತಿದೆ. ಈಗ ಗುಜರಾತ್ ಟೈಟನ್ಸ್ ಹಾಗೂ ಮುಂಬೈ ಇಂಡಿಯನ್ಸ್ ಮ್ಯಾಚ್‌ನಲ್ಲೂ ಫಿಕ್ಸಿಂಗ್ ಆರೋಪ ಕೇಳಿ ಬಂದಿದೆ.

ಟಾಸ್ ಗೆದ್ದ ಬಳಿಕ ಜಿಟಿ ಕ್ಯಾಪ್ಟನ್ ಶುಭಮನ್ ಗಿಲ್ ಹಾಗೂ ಹಾರ್ದಿಕ್ ಪಾಂಡ್ಯ ನಡುವೆ ಸನ್ನೆ ಮೂಲಕ ಏನೋ ಚರ್ಚೆ ಆಗಿದೆ. ಇದನ್ನೇ ಎಡಿಟ್ ಮಾಡಿ ಮ್ಯಾಚ್ ಫಿಕ್ಸಿಂಗ್ ಆರೋಪ ಮಾಡಿದ್ದಾರೆ. 'ಕಣ್ಣೆದುರೇ ಫಿಕ್ಸಿಂಗ್ ನಡೆದಿದೆ' ಎಂದು ಹೇಳಿದ್ದಾರೆ. ಅಲ್ಲದೆ ಇದಕ್ಕೆ ಕಾರಣ ಮುಂಬೈ ಇಂಡಿಯನ್ಸ್ ತಂಡದ ಮಾಲೀಕರನ್ನು ದೂಷಿಸಿದ್ದಾರೆ. ಆದರೆ, ಈ ಆರೋಪಕ್ಕೆ ಯಾವುದೇ ಅರ್ಥ ಇಲ್ಲ. ವಾಟ್ಸಾಪ್ ಯೂನಿವರ್ಸಿಟಿಯ ವಿದ್ಯಾರ್ಥಿಗಳು ಇದನ್ನು ಮಾಡಿರಬಹುದು ಎಂದು ಕೆಲವರು ತಿರುಗೇಟು ನೀಡಿದ್ದಾರೆ.

ಇನ್ನು, ಸಾಯಿ ಸುದರ್ಶನ್ ಅವರು ರಿಚರ್ಡ್ ಗ್ಲೀಸನ್‌ಗೆ ಕ್ಲೀನ್ ಬೌಲ್ಡ್ ಆದರು. ಈ ವೇಳೆ ಸಹ ಆಟಗಾರರ ಜೊತೆ ಕುಳಿತಿದ್ದ ಗಿಲ್ ಅವರು ಡ್ರೆಸ್ಸಿಂಗ್ ರೂಂನತ್ತ ನಡೆದರು.

### ತಮ್ಮದೇ ತಂಡದ ವಿಕೆಟ್ ಬಿದ್ದರೂ ನಗುತ್ತಿದ್ದ ಗಿಲ್



ಔಟ್ ಆದ ಬೇಸರ ಇದ್ದರೂ ಅವರು ನಕ್ಕಿದ್ದಾರೆ. ವಿಕೆಟ್ ಬಿದ್ದರೂ ಗಿಲ್ ನಗುತ್ತಿದ್ದಾರೆ. ಇದರ ಅರ್ಥವೇನು ಫಿಕ್ಸಿಂಗ್ ಅಲ್ಲದೆ ಇನ್ನೇನು ಎನ್ನುವ ಪ್ರಶ್ನೆಗಳನ್ನು ಕೆಲವರು ಕೇಳುತ್ತಿದ್ದಾರೆ. ಆದರೆ, ಅಸಲಿಗೆ ಅಲ್ಲಿ ನಡೆದಿದ್ದೇ ಬೇರೆ. ಗಿಲ್‌ಗೆ ಎದುರು ಯಾರೋ ಸಿಕ್ಕಿ ನಕ್ಕರು. ಅದಕ್ಕೆ ಪ್ರತಿಯಾಗಿ ಅವರು ನಕ್ಕಿದ್ದಾರೆ ಅಷ್ಟೇ. ಆದರೆ, ಇದಕ್ಕೆ ಬೇರೆಯದೇ ಅರ್ಥ ನೀಡಲಾಗಿದೆ. ಎಲಿಮಿನೇಟರ್ ಪಂದ್ಯ ಮೇ 30ರಂದು ನಡೆಯಿತು. ಮುಂಬೈ ಇಂಡಿಯನ್ಸ್ ತಂಡ ಮೊದಲು ಬ್ಯಾಟ್ ಬೀಸಿ ನಿಗದಿತ 20 ಓವರ್ ಗಳಲ್ಲಿ 228 ರನ್ ಕಲೆ ಹಾಕಿತು. ಇದರಲ್ಲಿ ರೋಹಿತ್ ಅವರ 80 ರನ್‌ಗಳು ಸೇರಿದೆ. 229ರನ್‌ಗಳ ಬೃಹತ್ ಮೊತ್ತ ಬೆನ್ನು ಹತ್ತಿದ ಜಿಟಿಗೆ ಆರಂಭದಲ್ಲೇ ಆಘಾತ ಆಯಿತು. ನಾಯಕ ಶುಭ್‌ಮನ್ ಗಿಲ್ ಕೇವಲ 1 ರನ್‌ಗೆ ಪೆವಿಲಿಯನ್ ಸೇರಿದರು. ಸಾಯಿ ಸುದರ್ಶನ್ ಹಾಗೂ ವಾಷಿಂಗ್ಟನ್ ಜೊತೆಯಾಟ ತಂಡಕ್ಕೆ ಆಸರೆ ಆಯಿತು. ಆದರೆ, ಗೆಲುವು ಸಿಗಲಿಲ್ಲ. 20 ರನ್‌ಗಳಿಂದ ಜಿಟಿ ಸೋಲನ್ನು ಒಪ್ಪಿಕೊಂಡಿತು.

## ಫೈನಲ್‌ನಲ್ಲಿ ಆರ್‌ಸಿಬಿ ಗೆಲುವು ಖಚಿತ

ತಂಡದಲ್ಲಿದ್ದಾನೆ ಅತ್ಯಂತ ಅದೃಷ್ಟಶಾಲಿ ಆಟಗಾರ

ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ 9 ವರ್ಷಗಳ ನಂತರ ಐಪಿಎಲ್ ಫೈನಲ್ ತಲುಪಿದೆ. ಪಾಯಿಂಟ್ ಪಟ್ಟಿಯಲ್ಲಿ ಎರಡನೇ ಸ್ಥಾನ ಪಡೆದ ಆರ್‌ಸಿಬಿ, ಮೊದಲ ಕ್ವಾಲಿಫೈಯರ್‌ನಲ್ಲಿ ಪಂಜಾಬ್ ಕಿಂಗ್ಸ್ ತಂಡವನ್ನು ಸೋಲಿಸಿತು. ಪಂಜಾಬ್ ತಂಡವು ತನ್ನ ತವರು ನೆಲದಲ್ಲಿ ಆರ್ ಸಿಬಿಯನ್ನು ಎದುರಿಸಲು ಸಾಧ್ಯವಾಗಲಿಲ್ಲ. ಸದ್ಯ ಬೆಂಗಳೂರು ಫಿನಾಲೆಗೆ ತಲುಪಿದ್ದರೂ ಈವರೆಗೆ ಐಪಿಎಲ್ ಪ್ರಶಸ್ತಿಯನ್ನು ಗೆದ್ದಿಲ್ಲ. 2016 ರಕ್ಕೂ ಮೊದಲು, ತಂಡವು 2011 ಮತ್ತು 2009 ರಲ್ಲಿ ಫೈನಲ್ ತಲುಪಿತ್ತು ಆದರೆ ಕಪ್ ಗೆಲ್ಲಲು ಸಾಧ್ಯವಾಗಲಿಲ್ಲ. ಆದರೆ, ಈ ಬಾರಿ ವಿಶೇಷ ಎಂದರೆ ತಂಡವು ಫೈನಲ್‌ನಲ್ಲಿ ಎಂದಿಗೂ ಸೋತಿಲ್ಲದ ಆಟಗಾರನನ್ನು ಹೊಂದಿದೆ.

**ಫೈನಲ್‌ನಲ್ಲಿ ಜೋಶ್ ಹ್ಯಾಜಲ್‌ವುಡ್‌ಗೆ ಅಜೇಯ ಗೆಲುವು:** ಆರ್‌ಸಿಬಿ ತಂಡದಲ್ಲಿ ಆಸ್ಟ್ರೇಲಿಯಾದ ವೇಗದ ಬೌಲರ್ ಜೋಶ್ ಹ್ಯಾಜಲ್‌ವುಡ್ ಇದ್ದಾರೆ. ಹ್ಯಾಜಲ್‌ವುಡ್ ತಮ್ಮ ವೃತ್ತಿಜೀವನದಲ್ಲಿ ಇದುವರೆಗೆ ಯಾವುದೇ ಫೈನಲ್ ಪಂದ್ಯವನ್ನು ಸೋತಿಲ್ಲ. ಅವರು ತಮ್ಮ ವೃತ್ತಿಜೀವನದಲ್ಲಿ 6 ಫೈನಲ್ ಪಂದ್ಯಗಳನ್ನು ಆಡಿದ್ದಾರೆ. ಅವರು ಇದ್ದ ತಂಡ ಇವೆಲ್ಲವುಗಳಲ್ಲಿ ಗೆದ್ದಿದೆ. 2021 ರಲ್ಲಿ, ಹ್ಯಾಜಲ್‌ವುಡ್ ಸಿಡ್ನಿ ಸಿಕ್ಸರ್ಸ್ ಪರ ಚಾಂಪಿಯನ್ಸ್ ಲೀಗ್ ಟಿ20 ಫೈನಲ್‌ನಲ್ಲಿ ಆಡಿದ್ದರು. ಅವರ ತಂಡ ಗೆದ್ದಿತ್ತು. 2015 ರ ವಿಶ್ವಕಪ್ ಫೈನಲ್‌ನಲ್ಲಿ ಅವರು ತಂಡದ ಭಾಗವಾಗಿದ್ದರು. 2020 ರ ಬಿಗ್ ಬ್ಯಾಷ್ ಲೀಗ್, 2021 ರ ಐಪಿಎಲ್ ಮತ್ತು 2021 ರ ಟಿ20 ವಿಶ್ವಕಪ್ ವಿಜೇತ ತಂಡದಲ್ಲಿ ಜೋಶ್ ಹ್ಯಾಜಲ್‌ವುಡ್ ಕೂಡ ಇದ್ದರು. ಇದಲ್ಲದೆ, ಆಸ್ಟ್ರೇಲಿಯಾ 2023 ರ ವಿಶ್ವಕಪ್ ಗೆದ್ದಿತು. ಆ ಪಂದ್ಯದಲ್ಲಿ ಕೂಡ ಹ್ಯಾಜಲ್‌ವುಡ್ ಆಡಿದ್ದರು.


**ಅತ್ಯುತ್ತಮ ಫಾರ್ಮ್‌ನಲ್ಲಿ ಹ್ಯಾಜಲ್‌ವುಡ್:** ಐಪಿಎಲ್ 2025 ರಲ್ಲಿ ಜೋಶ್ ಹ್ಯಾಜಲ್‌ವುಡ್ ಅತ್ಯುತ್ತಮ ಫಾರ್ಮ್‌ನಲ್ಲಿದ್ದಾರೆ. ಅವರು ಕ್ವಾಲಿಫೈಯರ್-1 ರಲ್ಲಿಯೂ ಅದ್ಭುತ ಬೌಲಿಂಗ್ ಮಾಡಿದರು. ಪವರ್‌ಪ್ಲೇನಲ್ಲಿಯೇ ಪಂಜಾಬ್‌ನ ಇಬ್ಬರು ಪ್ರಮುಖ ಬ್ಯಾಟ್ಸ್‌ಮನ್‌ಗಳಾದ ಜೋಶ್ ಇಂಗ್ಲಿಸ್ ಮತ್ತು ಶ್ರೇಯಸ್ ಅಯ್ಯರ್ ಅವರನ್ನು ಔಟ್ ಮಾಡಿದರು. ಇದಾದ ನಂತರ, ಪಿಬಿಕೆಸ್‌ನ ಪ್ರಮುಖ ಆಲ್‌ರೌಂಡರ್ ಅಜ್ಮತುಲ್ಲಾ ಉಮರ್ಜೈ ಅವರ ವಿಕೆಟ್ ಅನ್ನು ಸಹ ಪಡೆದರು. ಒಟ್ಟು 3.1 ಓವರ್‌ಗಳಲ್ಲಿ 21 ರನ್‌ಗಳನ್ನು ನೀಡಿ 3 ವಿಕೆಟ್ ಕಿತ್ತರು.

ಈ ಋತುವಿನಲ್ಲಿ ಹ್ಯಾಜಲ್‌ವುಡ್ 11 ಪಂದ್ಯಗಳಲ್ಲಿ 21 ಬ್ಯಾಟ್ಸ್‌ಮನ್‌ಗಳನ್ನು ಔಟ್ ಮಾಡಿದ್ದಾರೆ. ಅವರು ಪರ್ಪಲ್ ಕ್ಯಾಪ್ ಸ್ಪರ್ಧೆಯಲ್ಲಿ ಮೂರನೇ ಸ್ಥಾನದಲ್ಲಿದ್ದಾರೆ. 10 ಕ್ಕಿಂತ ಹೆಚ್ಚು ವಿಕೆಟ್ ಪಡೆದ ಬೌಲರ್‌ಗಳಲ್ಲಿ ಹ್ಯಾಜಲ್‌ವುಡ್ ಅತ್ಯುತ್ತಮ ಸ್ಟ್ರೈಕ್ ರೇಟ್ ಹೊಂದಿದ್ದಾರೆ. ಸರಾಸರಿಯಲ್ಲಿ ಜಸ್ಪ್ರೀತ್ ಬುಮ್ರಾ ಮಾತ್ರ ಅವರಿಗಿಂತ ಮುಂದಿದ್ದಾರೆ.

| ಜೋಶ್ ಹ್ಯಾಜಲ್‌ವುಡ್ ಭಾಗವಹಿಸಿದ ಫೈನಲ್ಸ್ | |
|---|---|
| 2012 CLT20 | ಸಿಡ್ನಿ ಸಿಕ್ಸರ್ಸ್‌ಗಾಗಿ ಗೆಲುವು |
| 2015 WC | ಆಸ್ಟ್ರೇಲಿಯಾಕ್ಕಾಗಿ ಗೆಲುವು |
| 2020 BBL | ಸಿಡ್ನಿ ಸಿಕ್ಸರ್ಸ್‌ಗಾಗಿ ಗೆಲುವು |
| 2021 IPL | CSKಗಾಗಿ ಗೆಲುವು |
| 2021 T20WC | ಆಸ್ಟ್ರೇಲಿಯಾಕ್ಕಾಗಿ ಗೆಲುವು |
| 2023 CLT20 | ಆಸ್ಟ್ರೇಲಿಯಾಕ್ಕಾಗಿ ಗೆಲುವು |



## ಆಂಗ್ಲರ ನಾಡಿನಲ್ಲಿ ಭರ್ಜರಿ ಶತಕ ಸಿಡಿಸಿದ ಕನ್ನಡಿಗ ಕರುಣ್ ನಾಯರ್



ಒಂದೆಡೆ ಭಾರತದಲ್ಲಿ ಐಪಿಎಲ್ ಪ್ಲೇ ಆಫ್ ಸುತ್ತು ನಡೆಯುತ್ತಿದ್ದರೆ, ಮತ್ತೊಂದೆಡೆ ಭಾರತ ಎ ತಂಡ ಇಂಗ್ಲೆಂಡ್ ಪ್ರವಾಸ ಕೈಗೊಂಡಿದ್ದ ಅಭಿಮನ್ಯು ಈಶ್ವರನ್ ನಾಯಕತ್ವದಲ್ಲಿ ಇಂಗ್ಲೆಂಡ್ ಲಯನ್ಸ್ ವಿರುದ್ಧ ಅನಧಿಕೃತ ಟೆಸ್ಟ್ ಪಂದ್ಯವನ್ನು ಆಡುತ್ತಿದೆ. ಇಂದಿನಿಂದ ಆರಂಭವಾಗಿರುವ ಮೊದಲ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡುತ್ತಿರುವ ಭಾರತ ಎ ತಂಡಕ್ಕೆ ಕನ್ನಡಿಗ ಕರುಣ್ ನಾಯರ್ ಮತ್ತೊಮ್ಮೆ ಆಸರೆಯಾಗಿದ್ದಾರೆ. ಆರಂಭಿಕ ಯಶಸ್ವಿ ಜೈಸ್ವಾಲ್ ಹಾಗೂ ನಾಯಕ ಅಭಿಮನ್ಯು ಈಶ್ವರನ್ ಬಹುಬೇಗನೇ ಪೆವಿಲಿಯನ್ ಸೇರಿಕೊಂಡ ಬಳಿಕ ಸರ್ಫರಾಜ್ ಖಾನ್ ಜೊತೆಗೂಡಿ ಉತ್ತಮ ಇನ್ನಿಂಗ್ಸ್ ಕಟ್ಟಿದ ಕರುಣ್ ಅಮೋಘ ಶತಕ ಸಿಡಿಸಿ ಮಿಂಚಿದ್ದಾರೆ. ಇದು ಪ್ರಥಮ ದರ್ಜೆ ಕ್ರಿಕೆಟ್‌ನಲ್ಲಿ ಕರುಣ್ ಅವರ 24ನೇ ಶತಕವಾಗಿದೆ. ಸುಮಾರು 8 ವರ್ಷಗಳಿಂದ ಟೀಂ ಇಂಡಿಯಾದಿಂದ ಹೊರಗುಳಿದಿರುವ ಅನುಭವಿ ಬ್ಯಾಟ್ಸ್‌ಮನ್ ಕರುಣ್ ನಾಯರ್ ದೇಶೀ ಕ್ರಿಕೆಟ್‌ನಲ್ಲಿ ಕಳೆದ ಒಂದು ವರ್ಷದಿಂದ ನಿರಂತರವಾಗಿ ರನ್ ಗಳಿಸುತ್ತಿದ್ದಾರೆ. ರಣಜಿ ಟ್ರೋಫಿಯಿಂದ ಹಿಡಿದು ವಿಜಯ್ ಹಜಾರೆ ಮತ್ತು ಸೈಯದ್ ಮುಷ್ತಾಕ್ ಅಲಿ ಟ್ರೋಫಿಯವರೆಗೆ ಕರುಣ್ ನಾಯರ್ ಒಟ್ಟು 9 ಶತಕಗಳನ್ನು ಬಾರಿಸಿದ್ದಾರೆ. ಹೀಗಾಗಿ ಕರುಣ್ ಭಾರತ ಟೆಸ್ಟ್ ತಂಡದಲ್ಲಿ ಅವಕಾಶ ನೀಡಬೇಕೆಂಬ ಕೂಗು ಜೋರಾಗಿತ್ತು. ಅದರಂತೆ ರೋಹಿತ್ ಶರ್ಮಾ ಹಾಗೂ ವಿರಾಟ್ ಕೊಹ್ಲಿ ಟೆಸ್ಟ್‌ಗೆ ನಿವೃತ್ತಿ ಘೋಷಿಸಿದ ಬಳಿಕ ಕರುಣ್‌ಗೆ ತಂಡದಲ್ಲಿ ಸ್ಥಾನ ಸಿಕ್ಕಿದೆ.

2017 ರ ನಂತರ ಮೊದಲ ಬಾರಿಗೆ ಕರುಣ್ ನಾಯರ್ ಟೆಸ್ಟ್ ತಂಡಕ್ಕೆ ಆಯ್ಕೆಯಾಗಿದ್ದಾರೆ. ಆದರೆ ಟೆಸ್ಟ್ ಸರಣಿ ಆರಂಭಕ್ಕೂ ಮುನ್ನ, ಭಾರತ ಎ ಮತ್ತು ಇಂಗ್ಲೆಂಡ್ ಲಯನ್ಸ್ ನಡುವಿನ ಪಂದ್ಯದ ಮೊದಲ ದಿನದಂದು ಕರುಣ್ ನಾಯರ್ ಸ್ಮರಣೀಯ ಶತಕ ಗಳಿಸಿದರು.



## ಫೋಟೋ ಶೂಟ್‌ನಲ್ಲೂ ಕೊಹ್ಲಿಯನ್ನು ಬಿಡದ ಸ್ವಸ್ತಿಕ್

ರಾಯಲ್ ಚಾಲೆಂಜರ್ಸ್ ಬೆಂಗಳೂರು ಫೈನಲ್‌ಗೆ ತಲುಪಿದೆ. ಇದೀಗ ಆರ್‌ಸಿಬಿ ಆಟಗಾರರು ಟ್ರೋಫಿ ಗೆಲ್ಲುವ ಉದ್ದೇಶದಿಂದ ಜೂನ್ 3 ರಂದು ಅಹಮದಾಬಾದ್ ಮೈದಾನ ಪ್ರವೇಶಿಸಲಿದ್ದಾರೆ. ಆದರೆ ಇದಕ್ಕೂ ಮುನ್ನ ಆರ್‌ಸಿಬಿ ಪಾಳಯದ ವಿಡಿಯೋವೊಂದು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗುತ್ತಿದೆ. ಇದರಲ್ಲಿ, ಕ್ವಾಲಿಫೈಯರ್ ಗೆದ್ದ ನಂತರ ಆರ್‌ಸಿಬಿ ಆಟಗಾರರ ಫೋಟೋ ಶೂಟ್ ನಡೆದಿದೆ. ಈ ವೇಳೆ ಕೊಹ್ಲಿ ಜೊತೆ ಫೋಟೋ ತೆಗೆಸಿಕೊಳ್ಳಲು ತಂಡದ ಸಹ ಆಟಗಾರ ಸ್ವಸ್ತಿಕ್ ಚಿಕಾರ ಪ್ರಯತ್ನಿಸಿದ್ದಾರೆ. ಆದರೆ ಇದಕ್ಕೆ ಟಿಮ್ ಡೇವಿಡ್ ಹಾಗೂ ಲಿಯಾಮ್ ಲಿವಿಂಗ್‌ಸ್ಟೋನ್ ಅವಕಾಶ ಮಾಡಿಕೊಟ್ಟಿಲ್ಲ. ಇವರಿಬ್ಬರು ಸೇರಿ ಸ್ವಸ್ತಿಕ್‌ರನ್ನು ಕೊಹ್ಲಿಯಿಂದ ದೂರ ತಳ್ಳಿದ್ದಾರೆ. ಇದೀಗ ಅದರ ವಿಡಿಯೋ ಸೋಶಿಯಲ್ ಮೀಡಿಯಾದಲ್ಲಿ ಸಖತ್ ವೈರಲ್ ಆಗುತ್ತಿದೆ.

**ಚಿಕಾರನನ್ನು ತಳ್ಳಲು ಕಾರಣವೇನು:** ತಂಡದ ಯುವ ಆಟಗಾರ ಸ್ವಸ್ತಿಕ್ ಚಿಕಾರ ಕೂಡ ಗ್ರೂಪ್ ಫೋಟೋಗಾಗಿ ಕೊಹ್ಲಿ ಹಿಂದೆ ನಿಂತಿದ್ದರು. ಆದರೆ ಈ ವೇಳೆ ಅಲ್ಲಿಗೆ ಬಂದ ಟಿಮ್ ಡೇವಿಡ್ ಚಿಕಾರನನ್ನು ಕೊಹ್ಲಿಯಿಂದ ದೂರ ತಳ್ಳಿದರು. ಅಲ್ಲಿಗೆ ಸುಮ್ಮನಾಗದ ಚಿಕಾರ ಮತ್ತೆ ಕೊಹ್ಲಿ ಬಳಿಕ ಬರಲು ಪ್ರಯತ್ನಿಸಿದರು. ಆಗ ಅಲ್ಲೇ ನಿಂತಿದ್ದ ಲಿಯಾಮ್ ಲಿವಿಂಗ್‌ಸ್ಟೋನ್ ಮತ್ತೆ ಚಿಕಾರನನ್ನು ದೂರ ತಳ್ಳಿದರು. ಇವರಿಬ್ಬರು ಹಾಗೇ ಮಾಡಲು ಕಾರಣವೂ ಇದೆ. ವಾಸ್ತವವಾಗಿ ಇದೇ ಮೊದಲ ಬಾರಿಗೆ ಆರ್‌ಸಿಬಿ ಪಾಳಯ ಸೇರಿಕೊಂಡಿರುವ ಸ್ವಸ್ತಿಕ್ ಚಿಕಾರ, ಕೊಹ್ಲಿಯ ಬಾಲವಾಗಿಬಿಟ್ಟಿದ್ದಾರೆ.



## ಕಳಪೆ ಫೀಲ್ಡಿಂಗ್ ಕಳಪೆ ಬೌಲಿಂಗ್

ಗುಜರಾತ್ ತಂಡದ ಎಲಿಮಿನೇಟರ್ ಸೋಲಿಗೆ ವೇಗಿ ಜೆರಾಲ್ಡ್ ಕೋಟ್ಜೀ ಪ್ರಮುಖ ಕಾರಣರಾದರು. ಗಿಲ್ ಇವರಿಗೆ ಕೇವಲ 3 ಓವರ್ ಬೌಲಿಂಗ್ ಮಾಡಿಸಿದರು, ಇದರಲ್ಲಿ ಬರೋಬ್ಬರಿ 51 ರನ್ ನೀಡಿ ಒಂದೇ ಒಂದು ವಿಕೆಟ್ ಕೂಡ ಪಡೆಯಲು ಕೂಡ ಸಾಧ್ಯವಾಗಲಿಲ್ಲ. ಈ ರೀತಿಯಾಗಿ ಕೋಟ್ಜೀ ಗುಜರಾತ್ ಸೋಲಿಗೆ ಕಾರಣರಾದರು.

ಮುಂಬೈ ಇಂಡಿಯನ್ಸ್ ವಿರುದ್ಧದ ಎಲಿಮಿನೇಟರ್ ಪಂದ್ಯದಲ್ಲಿ, ಗುಜರಾತ್ ಟೈಟಾನ್ಸ್ ಪರ ಪ್ರಸಿದ್ಧ್ ಕೃಷ್ಣ ಎರಡು ವಿಕೆಟ್ ಕಬಳಿಸಿದರು, ಆದರೆ ಅವರು ತಮ್ಮ ನಾಲ್ಕು ಓವರ್‌ಗಳ ಅವಧಿಯಲ್ಲಿ 53 ರನ್‌ಗಳನ್ನು ಬಿಟ್ಟುಕೊಟ್ಟರು. ಪ್ರಸಿದ್ಧ್ ದುಬಾರಿ ಬೌಲರ್ ಎನಿಸಿದರು. ಆದಾಗ್ಯೂ, ಅವರು ತಂಡಕ್ಕೆ ಅವಕಾಶಗಳನ್ನು ಸೃಷ್ಟಿಸಿದರು ಆದರೆ ಫೀಲ್ಡರ್‌ಗಳೊಂದಿಗೆ ಸಹಕರಿಸಲು ಸಾಧ್ಯವಾಗಲಿಲ್ಲ. ಗುಜರಾತ್ ಟೈಟಾನ್ಸ್ ತಂಡದ ಪ್ರಮುಖ ಸ್ಪಿನ್ನರ್ ರಶೀದ್ ಎಲಿಮಿನೇಟರ್ ಪಂದ್ಯದಲ್ಲಿ ಸಂಪೂರ್ಣವಾಗಿ ನಿಷ್ಪರಿಣಾಮಕಾರಿಯಾಗಿದ್ದರು. ರಶೀದ್ ಖಾನ್ 4 ಓವರ್‌ಗಳಲ್ಲಿ 31 ರನ್‌ಗಳನ್ನು ನೀಡಿದರು, ಆದರೆ ಅವರು ಒಂದೇ ಒಂದು ವಿಕೆಟ್ ಪಡೆಯಲಿಲ್ಲ. ರಶೀದ್ ಕಷ್ಟದ ಸಮಯದಲ್ಲಿ ತಂಡಕ್ಕೆ ವಿಕೆಟ್ ತಂದುಕೊಡುತ್ತಿದ್ದರು, ಆದರೆ ಈ ಋತುವಿನಲ್ಲಿ ರಶೀದ್ ಸಂಪೂರ್ಣವಾಗಿ ವಿಫಲರಾದರು. ಈ ಪಂದ್ಯದಲ್ಲಿ ಗುಜರಾತ್ ಪರ ಪಾದಾರ್ಪಣೆ ಮಾಡಿದ ಕುಸಲ್ ಮೆಂಡಿಸ್ ಮೊದಲ ಪಂದ್ಯದಲ್ಲೇ ವಿಲನ್ ಆದರು. ವಿಕೆಟ್ ಕೀಪಿಂಗ್ ಮಾಡುವಾಗ ಮೆಂಡಿಸ್ ಎರಡು ಕ್ಯಾಚ್‌ಗಳನ್ನು ಕೈಚೆಲ್ಲಿದರು. ವಿಶೇಷವಾಗಿ ರೋಹಿತ್ ಶರ್ಮಾ ಕ್ಯಾಚ್ ಗುಜರಾತ್ ತಂಡಕ್ಕೆ ದುಬಾರಿಯಾಗಿ ಪರಿಣಮಿಸಿತು.

ಮೆಂಡಿಸ್ ಬ್ಯಾಟಿಂಗ್‌ನಲ್ಲಿ ಉತ್ತಮ ಲಯದಲ್ಲಿದ್ದರು ಹಿಟ್‌ವಿಕೆಟ್ ಆದರು. ಮುಂಬೈ ಇಂಡಿಯನ್ಸ್ ವಿರುದ್ಧದ ಎಲಿಮಿನೇಟರ್ ಪಂದ್ಯದಲ್ಲಿ ಗುಜರಾತ್ ಪರ ನಾಯಕ ಶುಭ್‌ಮನ್ ಗಿಲ್ ದಯನೀಯವಾಗಿ ವಿಫಲರಾದರು. ಮೊದಲ ಓವರ್‌ನಲ್ಲೇ ಗಿಲ್ ಔಟಾದರು.


**Printed by : A. BALACHANDRA, Printed at : RAJHANS ENTERPRISES** No. 134, 4th Main Road, Industrial Town, Rajajinagar, Bengaluru - 560044, Karnataka. **Owned By, Published By, Editor :T. HOMBE GOWDA,** No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news


**ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966**